ಪುಸ್ತಕ ಪ್ರಪಂಚ

ಸಂಪುಟ ೩೮ ೧೯೮೩ ಅಕ್ಟೋಬರ್ ಸಂಚಿಕೆ ೩



ವಿಷಯ ಸೂಚಿ

೧. I ನಮ್ಮನ್ನಗಲಿದ ವಿಸೀಯವರು—ಕು. ಶಿ. ಹರಿದಾಸಭಟ್ಟ ೧
II ವಿಸೀಯವರಿಗೆ ನೆನಪು ಕಾಣಿಕೆ—ಎಸ್. ಅನಂತನಾರಾಯಣ
೨. ಇದಃ ಅಮೆರಿಕಾ !—ಪ್ರೊ॥ ಕೆ. ಆರ್. ಉಡುಪ ೧೩
೩. ಗುಣಪಡಿಸಬಹುದಾದ ಅಂಧತ್ವದ ವಿರುದ್ಧ
ಡಾ॥ ಮೋದಿಯವರ ಸಮರ—ರವೀಂದ್ರ ಭಟ್ಟ ಕುಳಿಬೀಡು ೨೪
೪. ಗಾಂಧೀಜಿಯವರ ಸ್ವಾತಂತ್ರ್ಯ ದಿನದ ಪವಾಡ
—ಶ್ರೀಮತಿ ಗೌರಮ್ಮ ಕೆ. ಬಸವಯ್ಯ ೩೧
೫. ನಿಷ್ಕಾಮ ಕರ್ಮಯೋಗಿ ತಗಡೂರು ರಾಮಚಂದ್ರರಾವ್‌ರಿಗೆ
ಪ್ರಶಸ್ತಿ—ಹ. ಲ. ಶ್ರೀಕಂಠಮೂರ್ತಿ ೩೭
೬. ಮೂಗೂರು ಜೇಜಮ್ಮ—ಕೆ. ಶಿವರಾಮ ಐತಾಳ ೪೦
೭. ಕವಿ ಮತ್ತು ಸಾಹಿತಿಗಳು ಏಕೆ ಆತ್ಮಹತ್ಯೆ
ಮಾಡಿಕೊಳ್ಳುತ್ತಾರೆ ?—ಉಮಾ ಅರೋರಾ ೪೨
೮. ಚೀನಾದ ಜನಸಂಖ್ಯಾ ಸ್ಫೋಟ : ಒಂದು ಸವಾಲು
—ಕೃಷ್ಣ ಹಾಸನ ೪೭
೯. ಹಾಡುವ ದ್ವೀಪ—ಸರಸ್ವತಿ ಬಡೆಕ್ಕಿಲ ೫೪
ಪುಸ್ತಕ ವಿಮರ್ಶೆ—೧) ಸತ್ಯನಾರಾಯಣ ೬೦

ಮುಖಚಿತ್ರ : ಪ್ರೊ॥ ವಿ. ಸೀತಾರಾಮಯ್ಯ

ವಿಸೀಯವರ ೭೨ನೆಯ ಹುಟ್ಟುಹಬ್ಬದಂದು ಬೆಂಗಳೂರಿನಲ್ಲಿ ನಡೆದ ಸಾರ್ವಜನಿಕ ಸನ್ಮಾನ ಸಮಿತಿಯ ಅಧ್ಯಕ್ಷ ಶ್ರೀ ಗುಂಡ್ಮಿ ರಾಮಕೃಷ್ಣ ಐತಾಳರಿಂದ ಆದರದ ಸ್ವಾಗತ. [ಫೋಟೋ ಕೃಪೆ: ಶ್ರೀ ಗುಂಡ್ಮಿ ರಾಮಕೃಷ್ಣ ಐತಾಳ

ಸಂಪಾದಕೀಯ ಮಂಡಲಿ

ಪುಸ್ತಕ ಪ್ರಪಂಚ

ಕರ್ನಾಟಕ ರಾಜ್ಯ ವಯಸ್ಕರ ಶಿಕ್ಷಣ ಸಮಿತಿ ಪ್ರಕಟಣೆ

ಸಂಪುಟ ೨೮ ಅಕ್ಟೋಬರ್ ೧೯೭೨ ಸಂಚಿಕೆ ೨

I

ನಮ್ಮನ್ನಗಲಿದ ವಿಸೀಯವರು

ಒಂದು ವಿಶ್ವವಿದ್ಯಾನಿಲಯದ ಕುಲಪತಿಯನ್ನು ವಿಸೀ ಎಂಬ ಬೀಜಾಕ್ಷರಗಳಿಂದ ಕರೆಯುವುದು ರೂಢಿಯಾಗಿದ್ದರೂ ಕನ್ನಡದ ಮಟ್ಟಿಗೆ ಈ ಎರಡು ಅಕ್ಷರದ ಖ್ಯಾತಿ ಮೊನ್ನೆ ತಾನೇ ದಿವಂಗತರಾದ ಪ್ರೊ॥ ವಿ. ಸೀತಾರಾಮಯ್ಯನವರದು. ವಿಶ್ವವಿದ್ಯಾನಿಲಯಗಳು ಎಂಥ ಸುಸಂಸ್ಕೃತ ಮನುಷ್ಯನನ್ನು ತಯಾರುಗೊಳಿಸಬೇಕೋ, ತರಬೇತಿ ಮಾಡಬೇಕೋ ಅಂಥ ಒಬ್ಬ ಆದರ್ಶಪುರುಷರಾಗಿದ್ದರು ನಮ್ಮ ವಿ. ಸೀತಾರಾಮಯ್ಯನವರು.

ವಿಸೀ ಪಂಡಿತರಾಗಿದ್ದರು, ವರ್ಗದಲ್ಲಿ ಕನ್ನಡ ಪಾಠ ಹೇಳುತ್ತಿದ್ದರು. ಆದರೆ ಅವರ ಬೌದ್ಧಿಕ ಎಟುಕು ಸರ್ವಗ್ರಾಹಿಯಾದುದಾಗಿತ್ತು. ಮುಖ್ಯವಾಗಿ ಅರ್ಥಶಾಸ್ತ್ರದ ಅವರ ಪರಿಣತ ಆಸಕ್ತಿ ಅವರಲ್ಲಿ ಒಂದು ವಿಶಿಷ್ಟ ಶಕ್ತಿಯಾಗಿ ನಿಂತು ಅವರಿಂದ ಶಾಸ್ತ್ರ ಸಾಹಿತ್ಯದಲ್ಲೂ ಹಲಕೆಲವು ಮುಖ್ಯ ಕೆಲಸಗಳನ್ನು ಮಾಡಿಸಿ ತರುಣರಿಗೆ ದಾರಿದೀಪವಾಗಬಲ್ಲ ಕೃತಿಗಳನ್ನು ಕನ್ನಡಕ್ಕೆ ಕೊಡಮಾಡಿತು. ಮೊದಲು ಮಹಾರಾಜಾ ಕಾಲೇಜಿನಲ್ಲಿ ಆಮೇಲೆ ಸೆಂಟ್ರಲ್ ಕಾಲೇಜಲ್ಲಿ ಕೆಲವರ್ಷ ಅವರು ನಡೆಸಿದ ಪ್ರಾಧ್ಯಾಪಕ ವೃತ್ತಿ ಅವರಿಗೊಂದು ಶಿಷ್ಯಕೋಟಿಯನ್ನು ಸಂಗ್ರಹಿಸಿಕೊಟ್ಟಿತು. ವಿಸೀ ಲೆಕ್ಚರುಗಳನ್ನು ಮರೆಯುವುದು ಹೇಗೆ? ಅವರ ಸಾಹಿತ್ಯ ಪಾಠವೆಂದರೆ—ಒಂದೊಂದು ಪಾಠವೂ-ಬರೀ ಕನ್ನಡ ಸಾಹಿತ್ಯದ ಮನನವಲ್ಲ. ಇಂಗ್ಲಿಷ್, ಫ್ರೆಂಚ್, ರಶಿಯನ್ ಸಾಹಿತ್ಯಗಳಿಂದ ವಿಪುಲ ಉದಾಹರಣೆ, ಉದ್ಧರಣೆ, ತುಲನೆ–ಇವೆಲ್ಲಕ್ಕೂ ಮಿಗಿಲಾಗಿ ಸಾಹಿತ್ಯದ ಬಗೆಗಿನ ಚಿರಂತನ ಉತ್ಸಾಹ. ಪಾಠಪಟ್ಟಿಯಲ್ಲಿರುವ ಪುಸ್ತಕದ ಸಾಲು ನಿರ್ಜೀವ

ಸರಕಲ್ಲ–ಅದಕ್ಕೆ ರಕ್ತಮಾಂಸ ತುಂಬಿ ಅದು ಜೀವಂತವಾಗಿ ಅಭ್ಯಾಸಿಗಳ ಹೃದಯುದಲ್ಲಿ ನೆಲೆಗೊಳ್ಳಬೇಕು. ಅಷ್ಟು ಸಾಹಿತ್ಯೋಲ್ಲಾಸ ಅವರ ಪಾಠಗಳಲ್ಲಿ ತುಂಬಿರುತ್ತಿತ್ತು ಎಂದು ಅವರ ಭಾಗ್ಯಶಾಲಿ ಶಿಷ್ಯಗಣ ಹೇಳುವುದನ್ನು ಕೇಳಿದ್ದೇನೆ. 'ಶ್ರೀ' ಅವರ ಅಶ್ವತ್ಥಾಮನ್ ಪಾಠ ನಡೆಯುತ್ತಿದ್ದಾಗ ಯಾರಾದರೂ



ವಿಸೀ ೭೨ ಸನ್ಮಾನ ಸಮಾರಂಭದ ಒಂದು ನೋಟ. ಎಡದಿಂದ ಬಲಕ್ಕೆ—
ಶ್ರೀ ರಾಳ್ಳಪಳ್ಳಿ ಅನಂತಕೃಷ್ಣ ಶರ್ಮ, ಶ್ರೀಮತಿ ವಿಸೀ, ಶ್ರೀ ವಿಸೀ,
ಡಾ|| ಮಾಸ್ತಿ ವೆಂಕಟೇಶಅಯ್ಯಂಗಾರ್, ಡಾ|| ದೇ. ಜವರೇಗೌಡ
ಡಾ|| ಶಿವರಾಮ ಕಾರಂತ.
ಫೋಟೋಕೃಪೆ: ಶ್ರೀ ಗುಂಡ್ಮಿ ರಾಮಕೃಷ್ಣ ಐತಾಳ

ಹೊರಗಡೆಯಿಂದ ಕೇಳಿದರೆ ಇದೇನೋ ಗ್ರೀಕ್ ನಾಟಕ 'ಏಜಾಕ್ಸನ್ನು' ಯಾರೋ ಒಬ್ಬ ಇಂಗ್ಲಿಷ್ ಲೆಕ್ಚರರ್ ಪಾಠ ಹೇಳುತ್ತಿದ್ದನೇನೋ ಅನಿಸಬೇಕಂತೆ. ವಿಸೀ ಸಾಹಿತ್ಯ ಪ್ರವಚನಕ್ಕೆ ಭಾಷೆಯ ಗಡಿಯೇ ಇರಲಿಲ್ಲ. ಕನ್ನಡದಿಂದ ಇಂಗ್ಲಿಷಿಗೆ, ಇಂಗ್ಲಿಷಿಂದ ಸಂಸ್ಕೃತ ಕಾವ್ಯ ವಿಮರ್ಶೆಗಳಿಗೆ ಸೀಮೋಲಂಘನ ಮಾಡಿ ಒಮ್ಮೆ ಅತ್ತ ಒಮ್ಮೆ ಇತ್ತ ಒಲೆದು ಸಾಹಿತ್ಯದ ನಿರಂಕುಶ

ಪ್ರಭುತ್ವವನ್ನು ಎಳೆಯರ ಮನದಲ್ಲಿ ಪ್ರತಿಷ್ಠಾಪಿಸುವುದು ಅವರ ಉದ್ದೇಶ ವಾಗಿರುತ್ತಿತ್ತು. ಅವರ ಕೈಕೆಳಗೆ ಕಲಿತ ವಿದ್ಯಾರ್ಥಿ ಜೀವನಪರ್ಯಂತ ಅಷ್ಟಿಷ್ಟಾದರೂ ಸಾಹಿತ್ಯದ ರಸಗಂಧವನ್ನು ತನ್ನ ಬದುಕಿನಲ್ಲಿ ಬೆರಸಿಕೊಳ್ಳದೆ ಇರಲಾರ–ಎಂಬಷ್ಟು ಪ್ರಭಾವಶಾಲಿ ಪ್ರವಚನ ಕ್ರಮ ಅದು.

ಇದಿಷ್ಟು ವರ್ಗದೊಳಗಿನ ಶಿಕ್ಷಣ ಕ್ರಮವಾದರೆ ಅಖಿಲ ಕರ್ನಾಟಕದಲ್ಲಿ ಅವರು ನಡೆಸಿಕೊಟ್ಟ ಸಾಹಿತ್ಯ ಸತ್ರ ನಾಡಿನ ಪುನಶ್ಚೇತನಕ್ಕೆ ಕಾರಣ ವಾಯಿತು. ಗುಲ್ಬರ್ಗದಿಂದ ಗುಂಡ್ಲುಪೇಟೆಯವರೆಗೆ, ಉತ್ತರದಿಂದ ದಕ್ಷಿಣಕ್ಕೆ, ಕೋಲಾರದಿಂದ ಕಲ್ಲಡ್ಕಕ್ಕೆ ಪೂರ್ವ ಪಶ್ಚಿಮವಾಗಿ ವಿಸೀ ಉಪನ್ಯಾಸದ ಗಾಳಿ, ದಾಳಿಬೀಸಿತ್ತು. ಎಷ್ಟೊಂದು ಸ್ಥಳಗಳಲ್ಲಿ ಏನು ಮಾತಾಡಿದರೋ, ಎಷ್ಟು ಮಾತಾಡಿದರೋ ಧ್ವನಿಮುದ್ರಿಕೆ ಇಲ್ಲದ ಆ ಕಾಲದಲ್ಲಿ ಲೆಕ್ಕವಿಟ್ಟವರಾರು? ಮಾತಾಡುವ ವೇಗವಾದರೂ ಎಂಥದು? ನಯಾಗರವೇ! ವಿಚಾರದ ಓಜಸ್ಸು, ಓಘ ಕೇಳುಗರನ್ನು ಸೆರೆಹಿಡಿದು ಗಂಟೆಗಟ್ಟಲೆ ಕೂರಿಸಬಲ್ಲದು. ಸಾಹಿತ್ಯ ಗ್ರಂಥಗಳು, ಲೇಖಕರು, ಉದ್ಧಾಮರು ತನ್ನ ಚೇತನಕ್ಕೆ ತಂದುಕೊಟ್ಟ ಧನ್ಯತೆ ಯನ್ನು ಶ್ರೋತೃಗಳಿಗೆ ಮುಟ್ಟಿಸುವುದರಲ್ಲಿ ವಿಸೀ ಸಿದ್ಧಹಸ್ತರು.

ಅವರು ಪ್ರತಿಸಲ ಉಡುಪಿಗೆ ಬರುವಾಗಲೂ ಅವರ ಹೋಲ್ಡಾಲ್ ಸುರುಳಿ ಬಿಚ್ಚಿದರೆ ಅದರಲ್ಲಿ ಲಂಡನ್ ಇಕನಮಿಸ್ಟ್ ಉದುರುತ್ತಿತ್ತು. ಅದು ಅವರ ನಿತ್ಯ ಪಾಠದ ಪತ್ರಿಕೆ. ಆದರಲ್ಲಿ ಬಂದ ಟೀಕೆಗಳಿಗೆ ಸಮರ್ಪಕವಾದ ಪ್ರತಿ ಟೀಕೆ ಮಾಡಬಲ್ಲಷ್ಟು ಅರ್ಥಶಾಸ್ತ್ರ ಪಾಂಡಿತ್ಯ ಅವರಿಗೆ ಸಮನಿಸಿತ್ತು ಎಂದರೆ ನಂಬುವುದು ಕಷ್ಟ. ಅತಿಪ್ರಸರಣದ ಬಗ್ಗೆ ಅವರಿಗೆ ಅವರದೇ ಆದ ಸೂಚನೆ ಗಳಿದ್ದವು. ಅದನ್ನು ಸರ್ಕಾರಕ್ಕೆ ಬರೆದು ತಿಳಿಸುವುದನ್ನು ತಮ್ಮ ಕರ್ತವ್ಯವೆಂದು ಭಾವಿಸಿದ್ದರು. ಏನೇ ಸ್ವಕೀಯ ಆರ್ಥಿಕ ತಾಪತ್ರಯವಿದ್ದರೂ ಇಕಾನಮಿಸ್ಟ್ ಮುಂತಾದ ಪತ್ರಿಕೆಗಳನ್ನು ಕೊಂಡು (!) ಓದುವುದು ತಮ್ಮ ಧರ್ಮವೆಂದು ತಿಳಿದ ಸಾಹಿತಿಗಳು ಬಿಡಿ, ಅರ್ಥಶಾಸ್ತ್ರಜ್ಞರೆಲ್ಲಿದ್ದಾರೆ? ಸಂಬಳ ಸಾವಿರ ಕೊಡಿ, ಎರಡು ಸಾವಿರವೇ ಮಾಡಿ. ಅದರಲ್ಲಿ ಒಂದಂಶ ತಮ್ಮ ವಿಷಯಜ್ಞಾನವನ್ನು ವಿಸ್ತರಿಸುವುದಕ್ಕಾಗಿ ಮೀಸಲಿಡಬೇಕು ಎಂಬ ಪ್ರಜ್ಞೆಯುಳ್ಳ ಅಧ್ಯಾಪಕ ವರ್ಗ ಈಗ ನಮ್ಮ ಪಂಡಿತಲೋಕದಲ್ಲಿ ಇದೆಯೆ? ಇದ್ದರೂ ಎಷ್ಟು?

ವಿಸೀ ಅವರ ದೂರ ಯಾ ನಿಕಟ ಯಾವ ಪರಿಚಯವುಳ್ಳವರಿಗೂ ಅವರ ವ್ಯಕ್ತಿತ್ವದ ಕೋಮಲತೆ, ನಯ ನಾಜೂಕುಗಳ ತಿಳಿವು ಮೂಡಿಯೇ ಮೂಡು ತ್ತದೆ. ವಿಸೀ ತಮ್ಮ ಮುಂಡಾಸನ್ನು ಕಟ್ಟುವ, ಜೋಪಾನವಾಗಿ ಇರಿಸುವ,

ಅದರ ಸ್ವಚ್ಛತೆಯ ಕಾಳಜಿ ಮಾಡುವುದರ ಬಗ್ಗೆ ದಂತಕಥೆಗಳು ಹರಡಿವೆ. ಯಾವುದರ, ಯಾರ ಬಗ್ಗೆಯೂ ನಿಷ್ಠುರವಾಗಿ ಆಡದಿರುವ ಅವರ ವ್ರತವನ್ನು ಎಲ್ಲರೂ ಬಲ್ಲರು. ಒಮ್ಮೆ ದೀಪಾವಳಿ ಸಂಚಿಕೆಗೆ ನಾನು ಬರೆದ ವಿಮರ್ಶನ ಲೇಖನದಲ್ಲಿ ಕನ್ನಡದ ಒಂದೆರಡು ಗ್ರಂಥಗಳ ಬಗ್ಗೆ ಕಟುವಾಗಿ ಟೀಕಿಸಿದ್ದನ್ನು ಗಮನಿಸಿ ನನಗೊಂದು ಪತ್ರ ಬರೆದು 'It was ferocious. Did he deserve it' (ನಿನ್ನ ಟೀಕೆ ಅತಿ ಭಯಂಕರವಾಗಿತ್ತು, ಅಂಥ ಅಪರಾಧ ಆತ ಮಾಡಿದ್ದನೇ?) ಎಂದು ನನ್ನ ಕೇಳಿದ್ದರು. 'ಸತ್ಯಂಬ್ರೂಯಾತ್ ಪ್ರಿಯಂ ಬ್ರೂಯಾತ್' ಎನ್ನುವ ವ್ರತ ಹಿಡಿದ ಕನ್ನಡದ ಈ ಹಿರಿಯ ವಿಮರ್ಶಕರು ನೋವಾಗದಂತೆ ವಿಮರ್ಶಿಸುವುದರಲ್ಲಿ ಜಾಣರಾಗಿದ್ದರು.

೮ ಅಡಿ×೮ ಅಡಿಯ ಪುಟ್ಟ ಕೊಠಡಿಯೊಳಗೆ ಚಾಮರಾಜಪೇಟೆಯ ನಂಬ್ರ ೧, ೨ನೇ ಬೀದಿಯಲ್ಲಿ ಹಲಗಾಲ ಸರಳವಾಗಿ ಜೀವನ ನಡೆಸಿದ ಕನ್ನಡದ ಈ ಹಿರಿ ಚೇತನದ ನೆನಪು ನನಗೆ ಒಂದೆರಡಲ್ಲ; ಪುಸ್ತಕ ಮುದ್ರಣದಲ್ಲಿ ಅವರು ಅಪೇಕ್ಷಿಸುತ್ತಿದ್ದ ಒಪ್ಪ ಓರಣದ ಮಾನದಂಡ ಈ ದೇಶದ್ದಾಗಿರಲಿಲ್ಲ. ಈ ಕಾಲದ್ದೂ ಆಗುವುದು ಸಾಧ್ಯವಲ್ಲ; ಅದು ವಿದೇಶಗಳ, ಅದರಲ್ಲೂ ಆಂಗ್ಲ ಪ್ರಕಟನೆಗಳ ಮಟ್ಟವನ್ನು ಮುಟ್ಟುವಂತೆ ಅವರು ನೋಡಿಕೊಳ್ಳುತ್ತಿದ್ದರು. 'ದ್ರಾಕ್ಷೆ-ದಾಳಿಂಬ', 'ನೆಳಲು-ಬೆಳಕು'—ಈ ಕಾವ್ಯಸಂಕಲನಗಳ ಪ್ರಥಮ ಆವೃತ್ತಿಯನ್ನು ಮುದ್ರಣಕಲೆಯ ಯಾಂತ್ರೀಕರಣ ಈಗಿನಷ್ಟು ಇಲ್ಲದಿರುವಾಗಲು ಕೂಡ ಮಾದರಿ ಪ್ರಕಟನೆಗಳಂತೆ ಹೊರತಂದಿದ್ದರು. ಕಾಗದ, ಕವಚ, ಹೊರಚಿತ್ರ, ಒಳಚಿತ್ರ, ಅಚ್ಚು ಮೊಳೆಯ ಗಾತ್ರ ಎಲ್ಲವನ್ನೂ ಪರಾಂಬರಿಸಿ ಪ್ರಕಟನೆ ಒಂದು ಸುಂದರ ಕಲಾಭಿವ್ಯಕ್ತಿಯಾಗುವಂತೆ ಅವರು ಪೇಚಾಡುತ್ತಿದ್ದರು. ಇತ್ತೀಚಿನ ೨೦ ವರ್ಷಗಳಲ್ಲಿ ದುಬಾರಿ ಬೆಲೆಯಿಂದಾಗಿ ಇಂಥವು ಸಾಧ್ಯವಾಗದಿರುವ ಬಗ್ಗೆ ಕೊರಗುತ್ತಿದ್ದರು. ಇದೇ ಸಂದರ್ಭದಲ್ಲಿ ಅವರ ಸಂಗೀತ ಶಾಸ್ತ್ರ ಮತ್ತು ಕಲೆಗಳ ಕುರಿತು ಪಾಂಡಿತ್ಯವನ್ನೂ ಪ್ರಸ್ತಾವಿಸಬೇಕು. ಪುರಂದರ ದಾಸರ ಕುರಿತು ಅವರು ೨ ದಶಕ ಪೂರ್ವದಲ್ಲಿ ಮದ್ರಾಸಿನ ವಿದ್ವತ್ ಸಭೆಯಲ್ಲಿ ಮಾಡಿದ ಭಾಷಣಕ್ಕೆ ತಮಿಳಿನ ಹಿರಿ ತಲೆಗಳು ಕೂಡ ಮಣಿದುವಂತೆ.

ಕೃಪೆ: 'ಉದಯವಾಣಿ' ಕು. ಶಿ. ಹರಿದಾಸಭಟ್ಟ

II

ವಿಸೀಯವರಿಗೆ ನೆನಪು ಕಾಣಿಕೆ

"ಬ ಅ ಅ ಅ ಅನ್ನಿ ಇ ಇ ಇ"

ಒಳಗಿನಿಂದ ಮೃದುವಾದ ಸ್ವರ ಕೇಳಿತು. 'ಬನ್ನಿ' ಎಂದು ನಮ್ಮನ್ನು ಕರೆಯುತ್ತಿದ್ದ ಸ್ವರ ಎಳೆದು ಮಾತನ್ನು ಒಂದು ಸಂಗೀತದ ರಾಗದ ಸಂಗತಿಯನ್ನು ಮಾಡಿತ್ತೋ ಎನ್ನುವಂತಿತ್ತು. ಒಳಗೆ ಕಾಲಿಟ್ಟರೇ ಮತ್ತೆ ಅದೇ ಸ್ವರ "ಬನ್ನಿ" ಈಗ ಕೊನೆಯಲ್ಲಿ ಮಾತ್ರ ಎಳೆತ. ಆದರೆ ಆ ಮುಖದಲ್ಲಿ ಮಿಂಚಿನ ನಗುವಿನ ಸೆಳೆತ ಇಂದಿಗೂ ನಮ್ಮನ್ನು ಬಿಟ್ಟಿಲ್ಲ. ಮೊತ್ತಮೊದಲಬಾರಿಗೆ ವಿಸೀಯವರನ್ನು ನಾನು ಕಾಣಲು ಹೋದಾಗ ನನಗೆ ಸಿಕ್ಕಿದ್ದು, ಈಗ ಕೇವಲ ನೆನಪಾಗಿ ಉಳಿದಿರುವುದು, ಈ ಚಿತ್ರ.

ಮೈಸೂರಿನ ಕೃಷ್ಣಮೂರ್ತಿಪುರಂನಲ್ಲಿ ಈಗ ರಾಘವೇಂದ್ರಸ್ವಾಮಿ ಮಠ ಇರುವ ಎದುರು ಸಾಲಿನಲ್ಲಿ ಒಂದು ಸಣ್ಣ ಮನೆ. ಹೊರಬಾಗಿಲು ಜಾಲರಿಯದು ಎಂದರೆ ಮರದ ಬಾಗಿಲು ಪಟ್ಟಿಪಟ್ಟಿಯನ್ನು ಓರೆಯಾಗಿ ಕಟ್ಟಿ ನಡುವೆ ಚಚ್ಚೌಕದ ರಂಧ್ರಗಳನ್ನು ಇಟ್ಟುಕೊಂಡಂತೆ ಕಾಣುವ ಬಾಗಿಲು. ಕರ್ರೆಂದು ಶಬ್ದ ಮಾಡುತ್ತಾ ನಾವು ಒಳಹೊಕ್ಕೆವು.

ಕೆಳಗೆ ಎತ್ತರವಿಲ್ಲದ ಒರಗು ಕುರ್ಚಿಯ ಮೇಲೆ ವಿಸೀಯವರು ಕುಳಿತಿದ್ದರು. ಅವರ ಮುಂದೆ ಸುಮಾರು ಎರಡಡಿ ಎತ್ತರವಿದ್ದ ಕಾಲುಮಣೆ-ಜಾರುಮಣೆ ಎಂದೇ ಅದನ್ನು ಅವರು ಕರೆದುದು ನನಗೆ ನೆನಪಿದೆ. ಒಂದು ಕಡೆ ಇಳಿಜಾರಿದ್ದು ಬರೆಯಲು ಅನುಕೂಲವಾಗಿದ್ದುದು ಅದು ಅವರ ಬರಹದ ಮೇಜು. "ನೋಡಿ ಇದು ಜಾರಿ ಜಾರಿ ಹೋಗುತ್ತದೆ ಇದರ ಮೇಲಿಟ್ಟ ಪುಸ್ತಕ Paper ಎಲ್ಲ Pen ಕೂಡ. it just rolls down (ಕೆಳಕ್ಕುರುಳಿ ಹೋಗುತ್ತದೆ.) ಹಾಗೆಯೇ ನಾನು ಬರೆಯಬೇಕೆಂದಿರುವುದೆಲ್ಲ ಇಲ್ಲಿಂದ ಜಾರಿ ಕೆಳಕ್ಕುರುಳಿ ಹೋಗುತ್ತದೆ" ಎಂದು ತಮ್ಮ ತಲೆಯನ್ನು ಸವರಿಕೊಂಡಿದ್ದರು ಒಂದು ಸಾರಿ ವಿಸೀಯವರು. ದುಂಡುಮುಖದಲ್ಲಿ ಸ್ವಲ್ಪವೇ ಉಬ್ಬಿದ್ದ ಕೆನ್ನೆಗಳು. ದಟ್ಟವಾಗಿ ಕಪ್ಪುಬಿಳುಪು ಮಿಶ್ರಿತ—tawny ಎಂದೇ ಅವರು ಕರೆಯುತ್ತಿದ್ದಂತಹ ಮೀಸೆ ಮೇಲು ತುಟಿಯನ್ನು ಮೂಗಿನ ಅಂಚನ್ನು ಕೂಡಿಸುತ್ತಿತ್ತು. ಒಮ್ಮೆ ಕೈ ಅದರ ಮೇಲಾಡಿಸಿ ಮೇಲೇರಿ ತೀಕ್ಷ್ಣವಲ್ಲದಿದ್ದರೂ ತುಂಟತನ ಮಿನುಗುತ್ತಿದ್ದ ಕಣ್ಣುಗಳನ್ನು ಒಮ್ಮೆ ಮುಚ್ಚಿ ಅಲ್ಲಿಂದ ಹಣೆಯನ್ನು ಸವರಿ, ಕುರುಚಲಂತೆ ಬೆಳೆದಿದ್ದ

ದಟ್ಟವಾದ ಕಪ್ಪು ಬಿಳಿ ಮಿಶ್ರಿತ ತಲೆ ಕೂದಲನ್ನು ನೇವರಿಸುತ್ತಾ ಹಿಂದಕ್ಕೆ ಸರಿಯುತ್ತಿತ್ತು ; ತಲೆಯ ಬುರುಡೆಯು ಹಿಂದಿನಿಂದ ಮುಂದುಗಡೆಗೆ ಇಳಿಜಾರಿನಂತೆ ಇಳಿದು ಹಣೆಯ ವಿಸ್ತಾರವನ್ನು ಮಾಡಿತ್ತೋ ಎನ್ನುವಂತೆ ಮುಂದಲೆ ತುಂಬಾ ಇಳಿಜಾರಾಗಿ ಕಾಣುತ್ತಿತ್ತು. ಹಿಂದೆ–ಸಣ್ಣ ಪಿಳ್ಳಜುಟ್ಟು ಇತ್ತೆಂದು ನನಗೆ ನೆನಪು–ನಾಲ್ಕಾರು ಕೂದಲು ಪ್ರಾಯಶಃ ಒಂದೂವರೆ ಎರಡು ಅಂಗುಲ ಉದ್ದವಿದ್ದು ವಿಸೀಯವರು ಅದನ್ನು ನೇವರಿಸಿದರು. ಇಕ್ಕೆಲದಲ್ಲಿಯೂ ಪುಸ್ತಕಗಳ ರಾಶಿ. ಹಿಂದುಗಡೆ ಗೋಡೆಯ ಬೀರುವಿನಲ್ಲಿ ಪುಸ್ತಕಗಳು-ಅಚ್ಚುಕಟ್ಟಾಗಿ ನಿಲುವಿನಲ್ಲಿ ತಮ್ಮ ತಮ್ಮ ಜಾಗದಲ್ಲಿದ್ದುವು—ಆ ಕಡೆಯ ಗೋಡೆಯ ಮೇಲೆ ವೆಂಕಟಪ್ಪನವರು ಚಿತ್ರಿಸಿದ 'ವೀಣೆಯ ಹುಚ್ಚು' ಬಣ್ಣದ ಚಿತ್ರ-ಒಂದೇ ಒಂದು ಇಡೀ ಗೋಡೆಯನ್ನು ಆಳುವಂತೆ ಕಾಣುತ್ತಿತ್ತು. ಆ ಚಿತ್ರ ವಿಸೀಯವರಿಗೆ ಅತ್ಯಂತ ಪ್ರಿಯವಾದುದು ಎಂಬುದು ನಮಗೆ ಅನಂತರ ತಿಳಿದ ವಿಷಯ. ಅದನ್ನು ನೋಡಿದ ನಮಗೆ ಗೋಡೆಯ ಮೇಲೆ ಇದೊಂದೇ ಚಿತ್ರಸಾಕೇ ಎನಿಸಿದ್ದುಂಟು. ಬೇರೆಯವರ ಮನೆಗಳಲ್ಲಿ ಆ ಕಾಲದಲ್ಲಿ ೧೯೪೩ರ ಕೊನೆಯಲ್ಲಿ—ಸಾಲು ಸಾಲಾಗಿ ದೇವರ ಪಟಗಳನ್ನು ಹಾಕಿಕೊಳ್ಳುವುದು ಸಾಧಾರಣವಾಗಿದ್ದಾಗ ಇಲ್ಲಿ ಅವು ಕಾಣಲಿಲ್ಲ. ಮತ್ತೊಂದು ಗೋಡೆಯ ಮೇಲೆ 'ಕೊಳಲಿನ ನಾದ' ಎಂಬ ಚಿತ್ರ-ಬಂಗಾಲಿ ಸಂಪ್ರದಾಯದ್ದು ನಂದಲಾಲಬಸು ಅವರು ಚಿತ್ರಿಸಿದ್ದು ಎಂದು ನೆನಪು. ಹಳದಿಯ ಬಣ್ಣದ ಮೇಲು ಹೊದಿಕೆ ಹಾರಾಡುತ್ತಿರುವಂತೆ ಕೃಷ್ಣನ ಕೊಳಲಿನ ನಾದ ಎಲ್ಲ ಕಡೆಗೂ ಹರಹುತ್ತಿರುವಂತೆ—ಅಲ್ಲಿ ದೂರದಲ್ಲಿ ಕಿವಿಗೊಟ್ಟು ಆಲಿಸುವ ಗೋಪಿಯರ ತಂಡ. ಕೆಳಗೆ ತಲೆಯೆತ್ತಿ ಆಲಿಸುತ್ತಿರುವ ಗೋವು ನೀಲಿಮೆಯ ಹಿನ್ನೆಲೆಯಲ್ಲಿ ಬಣ್ಣಗಳ ವೈದೃಶ್ಯ ಅದ್ಭುತವಾಗಿತ್ತು.

"ಬನ್ನಿ" ಎಂದವರು ನಮಗೆ ಕುಳಿತುಕೊಳ್ಳಲು ಮುಂದಿದ್ದ ಚಾಪೆಯ ಕಡೆ ಕೈತೋರಿಸಿದರು. ಕುಳಿತ ಮೇಲೆ "ಏನು ಬಂದದ್ದು ?" ಎಂಬ ಪ್ರಶ್ನೆ—ನಾವು ಉತ್ತರ ಕೊಡುವ ಮೊದಲೇ ಪಕ್ಕದಲ್ಲಿ ರೇಡಿಯೋದಲ್ಲಿ ಬರುತ್ತಿದ್ದ ಹಾಡಿನ ಬಗ್ಗೆ ಒಂದು ನುಡಿ ವಿಸೀಯವರಿಂದ "ಈ ಸಂಗೀತ ವಿದೆಯಲ್ಲ—ಇದು Soulstirring–(ಆತ್ಮವನ್ನೇ ಕಲಕಿಬಿಡುವಂತಹುದು). ಹಿಂದುಸ್ತಾನೀ ಎನ್ನುವ ಉತ್ತರಾದಿಯದು" ಎಂದು ಹೇಳಿ ಫಕ್ಕನೆ ನಕ್ಕುಬಿಟ್ಟರು. ಮಾತನಾಡುತ್ತಾ ಆಡುತ್ತಾ ಯಾವುದೋ ಒಂದು ಅಂತರಂಗದ ತಮಾಷೆ ಕಂಡುಕೊಂಡು ನಕ್ಕುಬಿಡುವುದು—ಚಕ್ಕನೆ ಮಾತನ್ನು ಕತ್ತರಿಸಿಕೊಂಡು ನಗೆ

ತುಳುಕಿಬಿಡುತ್ತಿತ್ತು. ಅವರಿಗೆ ಇದು ಸಾಮಾನ್ಯ ರೀತಿಯೆಂಬುದು ಹತ್ತು ನಿಮಿಷಗಳಲ್ಲಿ ನಮಗೆ ಅರಿವಾಯಿತು.

"ಅಲ್ಲಪ್ಪ—ಈ ರಾಗ—ಮಾಲಕೌಂಸ್ ಷಹನಾಯ್ ಅಂದರೆ ನಮ್ಮ ನಾಗಸ್ವರದ ಓಲಗದ ತರಹ ಅಂತಿಟ್ಟುಕೊಳ್ಳಿ—ಅದರಲ್ಲಿ ನುಡಿಸುತ್ತಿದ್ದರೆ ಹೃದಯ ಕಲ್ಲೋಲವಾಗುತ್ತದೆ. Music brings peace but only after it stirs up restlessness. ಸಂಗೀತ ಮೊದಲು ಅತೃಪ್ತಿ ಅಶಾಂತಿಯನ್ನು ಕಲಕಿದ ಅನಂತರವೇ ಮನಸ್ಸಿಗೆ ಶಾಂತಿ ತಂದುಕೊಡುತ್ತದೆ" ಎಂದು ಹೇಳಿ ನಾವು ಬಂದುದು ಏಕೆಂಬುದನ್ನು ಮರೆತೇಹೋದಂತಿತ್ತು ಅವರಿಗೆ. ಕಣ್ಣು ಮುಚ್ಚಿ, ಮೈಯನ್ನು ಮುಂದೆ ಬಾಗಿಸಿದ ವಿಸೀ ತೋಳಿಲ್ಲದ ಮಲ್ ಬನಿಯನ್ನು ಹಾಕಿಕೊಂಡಿದ್ದರು. ಬಾಗಿದ ಅವರ ಮೈ, ಮುಖ ಎರಡೂ ಯಾವುದೋ ರಾಗತರಂಗದ ಕನಸಿಗೆ ನಮನ ಮಾಡುವಂತಿದ್ದುವು.

ಇದ್ದಕ್ಕಿದ್ದಂತೆ ಮತ್ತೆ ಫಕ್ಕನೆ ನಕ್ಕು ರೇಡಿಯೋದ ಶಬ್ದವನ್ನು ಕಡಿಮೆ ಮಾಡಿ ಕೇವಲ ಹಿನ್ನೆಲೆಯಲ್ಲಿ ನಾದದ ಬಲೆಯನ್ನು ನೇಯುವಷ್ಟು ಮೃದು ಗೊಳಿಸಿ, ನಮ್ಮ ಕಡೆ ತಿರುಗಿದರು. ಒಂದೇ ಸಮನಾಗಿ ನಿರರ್ಗಳವಾಗಿ ಸಂಗೀತದ ಬಗ್ಗೆ ಹತ್ತಾರು ಮಾತುಗಳು—Phrases—ಮಾತಿನ ತುಣುಕುಗಳು ಕೇಳಿ ಬಂದಂತೆ ನಾವು ಮಂತ್ರಮುಗ್ಧರಂತೆ ಕುಳಿತಿದ್ದೆವು. ಅವರಿಗೆ ಪದ್ಯ ತೋರಿಸ ಬೇಕೆಂದು ಬಂದಿದ್ದ ನನಗಂತೂ ಪದ್ಯದ ನೆನಪೇ ಹೋಗಿಬಿಟ್ಟಿತ್ತು. ಎಡಗೈ ಯಲ್ಲಿ ಅವರು ಅದೇ ತಾನೇ ಓದುತ್ತಿದ್ದು ಕೆಳಗಿಟ್ಟ ಒಂದು ಪುಸ್ತಕವನ್ನು ಕೈಗೆತ್ತಿಕೊಂಡು ಅದರಿಂದ ಭಾವಪೂರ್ಣವಾಗಿ "A time to Dance" "ಕುಣಿತಕ್ಕೊಂದು ಕಾಲ" ಎಂಬ ಸಿ. ಡಿ. ಲೂಯಿಯ ಪದ್ಯವನ್ನು ಓದಿದರು. "ಈ ಚಿತ್ರ ನೋಡಿ, ಈ image ನೋಡಿ—ಆಕಾಶಕ್ಕೆ ಕೆಂಬಣ್ಣವನ್ನು ಬಳಿಯುವ ಶಕ್ತಿಯುಳ್ಳ, ಕಾಡುಗಳನ್ನು ಕಿಚ್ಚಿನಲ್ಲಿ ಕಬಳಿಸಿ ತಮ್ಮ ಮೂಲವನ್ನೇ ಬೂದಿಯಾಗಿ ಉಳಿಸುವ ಬೆಂಕಿಯ ಸಾಮರ್ಥ್ಯವನ್ನುಳ್ಳವರು"—ಎಂದು ಪದ್ಯವನ್ನು ಮತ್ತೆ ಓದಿದರು. ನಮಗೆ ಅದರ ತಲೆಬುಡ ಒಂದೂ ಅರ್ಥವಾಗು ವಂತಿರಲಿಲ್ಲ. ಆದರೆ ಅವರ ಉತ್ಸಾಹ ನಮ್ಮಲ್ಲಿ ಆಸಕ್ತಿಯನ್ನು ಕೆರಳಿಸಿತು. ಇಂಗ್ಲಿಷ್ ಆನರ್ಸ್ ವಿದ್ಯಾರ್ಥಿಗಳಾಗಿದ್ದ ನಮಗೆ ಕೂಡ ಆಧುನಿಕ ಕಾವ್ಯದ ಸುಳಿವು ಇರಲಿಲ್ಲ. ನಮ್ಮ ಪ್ರೊಫೆಸರ್ ಈಗಲ್ಟನ್ ಆಗಾಗ ಆಧುನಿಕ ಕವಿಗಳಾದ ಯೇಟ್ಸ್, ಟಿ. ಎಸ್. ಈಲಿಯಟ್, ಆಡೆನ್, ಸೆಸಿಲ್‌ಡೇ ಲೂಯಿಸ್, ಹರ್ಬರ್ಟ್ ರೀಡ್ ಎಂಬ ಹೆಸರುಗಳನ್ನು ಹೇಳುತ್ತಿದ್ದುದಷ್ಟೇ ನಮಗೆ ಗೊತ್ತು.

ಆದರೆ ವಿಸೀ. ನಮಗೆ ಮೊದಲ ದಿನವೇ ಆ ಕವಿಗಳ ಕವಿತೆಯನ್ನು "ಅಂದು ತೋರಿಸಿದ್ದರು". ಉತ್ಸಾಹದ ಚಿಲುಮೆಯಾಗಿದ್ದ ಅವರು ಆ ಪದ್ಯ ಬಿಟ್ಟು 'ಕಾವ್ಯದಲ್ಲಿ Image' ಹೇಗಿರಬೇಕೆಂದು ಹಲವು ಹತ್ತು ಉದಾಹರಣೆ ಗಳೊಂದಿಗೆ ಹೇಳಿದರು—ಅನಂತರ ನೆನಪು ಮಾಡಿಕೊಂಡಂತೆ—"ನನ್ನದು ನೋಡಿ—ಅಲೆಯುವ ಚಿಟ್ಟೆಯಂತಹ ಮನಸ್ಸು—ಹೀಗಿಂದ ಹೀಗೆ ಹಾಗಿಂದ ಹೀಗೆ ತೊನೆಯುತ್ತಲೇ ಇರುತ್ತದೆ. ನಿಮ್ಮನ್ನು Bore ಮಾಡಿದೆನೋ ಏನೋ —ಬೇಸರವಿಲ್ಲದೆ ಏನು ವಿಷಯ ಹೇಳಿ" ಎಂದು ಫಕ್ಕನೆ ನಕ್ಕು ಒಳಕ್ಕೆ ಹೋಗಿ ಚಹಾ ಪರಿಕರಗಳನ್ನು ತಂದರು. ಅವರು ಚಹಾವನ್ನು ಸಿದ್ಧಪಡಿಸುತ್ತಿದ್ದ ವೈಖರಿ, ಚಹಾದ ವೈಭವವನ್ನು ಬಹುಮಂದಿ ವರ್ಣಿಸಿರುವುದರಿಂದ, ಇಲ್ಲಿ ನಾನು ಹೇಳಲು ಹೋಗುವುದಿಲ್ಲ. ಅದೊಂದು ಪೂಜಾ ವಿಧಾನದಂತೆ ಸರಿಯಾದ ಅಚ್ಚುಕಟ್ಟಾದ ಹಾದಿಯನ್ನು ನಡೆದು ನಂತರ ಕೊನೆಯಲ್ಲಿ ಬಿಸಿ ಬಿಸಿ ಸವಿ ರುಚಿಯ ಚಹಾ ನಮ್ಮ ತುಟಿಗೆ ಹಾಕುವ ತನಕ ವಿಸೀಯವರ ಕೈಚಳಕದಲ್ಲಿ ನಡೆಯುತ್ತಿತ್ತು. ಪ್ರೊಫೆಸರ್ ಈಗಲ್ಟನ್ ಆ ಬಗ್ಗೆ ನಮಗೆ ಹೇಳುತ್ತಾ ಪ್ರೊ|| ಸೀತಾರಾಮಯ್ಯನವರ ಚಹಾಪಾನ ಒಂದು ಸುಸಂಗತವಾದ ಸಂಗೀತದ ತಾನವಿದ್ದಂತೆ" ಎಂದು ಹೊಗಳಿದ್ದುದು ಈಗಲೂ ನೆನಪಿದೆ.

ಚಹಾ ಕುಡಿದ ನಂತರವೇ ನಮ್ಮ ವಿಷಯಕ್ಕೆ ಬಂದರು. ನನ್ನ ಪದ್ಯವನ್ನು ಓದಿಸಿದರು-ಅದರಲ್ಲಿ "ಅಮ್ಮನಿಗೆ ಈಯುವೆನು ಕಾಣಿಕೆಯನು" ಎಂಬ ಸಾಲು ಬಂದೊಡನೆ ಈವರೆಗೆ ಕಣ್ಣು ಮುಚ್ಚಿ ಪದ್ಯವನ್ನು ಕೇಳುತ್ತಿದ್ದವರು ಫಕ್ಕನೆ ನಕ್ಕರು. "ಅದೆಂತದಪ್ಪಾ ಈಯುವುದು-ದನ ಈಯ್ತದೆ-ಕರುವನ್ನು-ನೀವೇನು ಈಯ್ತೀರಿ?" ಎಂದಾಗ ನಾನು, ನನ್ನ ಜತೆಯಲ್ಲಿದ್ದ ಸಹಪಾಠಿ ಶಾರದಾ ಪ್ರಸಾದ್ ಬೆಚ್ಚಿದೆವು. ಪದ್ಯವನ್ನು ಓದುವುದು ನಿಂತಿತು. ಕೂಡಲೇ ಅವರು "ಪದ್ಯದಲ್ಲಿ ಪದಗಳನ್ನು ಬಳಸುವಾಗ apt–ಹದವಾಗಿ ಉಪಯೋಗಿಸ ಬೇಕೆಂಬುದು ತಿಳಿಯುವುದು ಬಹಳ ಮುಖ್ಯ. ತುಂಬಾ ಕಾವ್ಯವನ್ನು ಓದ ಬೇಕು-ಬಹಳ ಮಟ್ಟಿಗೆ ಇಂಗ್ಲಿಷ್ ಕಾವ್ಯ ಓದಿ–ಕನ್ನಡದಲ್ಲಿ ಹಳೆಯದನ್ನು ಅಭ್ಯಾಸಮಾಡಿ–ಬಿಎಂಶ್ರೀಯವರು ತಂದ ಹೊಸಕಾವ್ಯ ಓದಿ–ಎಲ್ಲಕ್ಕೂ ಮುಖ್ಯವಾಗಿ ಒಳ್ಳೆಯ ಗದ್ಯವನ್ನು ಓದಿ, ಬರೆಯಿರಿ. ಪದ್ಯ ಗೀಚುವುದು ಸುಲಭ-ಒಳ್ಳೆಯ ಗದ್ಯ ಬರೆಯುವುದು ಬಹಳ ಕಷ್ಟ. ಗದ್ಯ ಬರೆಯುವುದನ್ನು ಅಭ್ಯಾಸ ಮಾಡಿಕೊಳ್ಳಿ. ಒಳ್ಳೆಯ ಗದ್ಯವನ್ನು ಓದಿದಾಗ ಒಳ್ಳೆಯ ಪದ್ಯ ವನ್ನು ಅರ್ಥಮಾಡಿಕೊಳ್ಳುವುದು ಸುಲಭ" ಎಂದೆಲ್ಲ ಹೇಳಿ ಪದ್ಯಗಳನ್ನು

ಕೇಳಿ ಇಸಕೊಂಡರು. ಅನಂತರ ನಾವು ಒಂದು ರೀತಿಯ ಮಾಯೆಯ ಗುಂಗಿನಲ್ಲಿ ಹೊರಬಂದೆವು.

ವಿಸೀಯವರು ಕಿರಿಯರಿಗೆ ತೋರುತ್ತಿದ್ದ ಪ್ರೀತಿ ವಿಶ್ವಾಸದ ಕುರುಹಾಗಿ ಇವನ್ನು ಗುರುತಿಸುತ್ತಿದ್ದೇನೆ. 'ಪ್ರಬುದ್ಧ ಕರ್ನಾಟಕ'ದ ಸಂಪಾದಕರಾಗಿದ್ದ ಅವರು ಅವರೆಗಿನ ಸಂಪ್ರದಾಯವನ್ನು ಮುರಿದುದು ಅಲ್ಲಿಯವರೆಗೆ ಪ್ರಬುದ್ಧ ಕವಿಗಳ ಕವಿತೆಗಳನ್ನು ಮಾತ್ರ ಪ್ರಬುದ್ಧ ಕರ್ನಾಟಕದ ಮೊದಲ ಪುಟದಲ್ಲಿ ಅಚ್ಚುಮಾಡುತ್ತಿದ್ದರು. ಹೆಸರಿಲ್ಲದ ವಿದ್ಯಾರ್ಥಿಯಾದವನ ಕವಿತೆಗಳನ್ನು ಒಕ್ಕಗೊಳಿಸಿ "ದೇವ ನೀನ್ನೈತಂದೆ ಮತ್ತಿತರ ಕವಿತೆಗಳು" ಎಂದು ನಾಲ್ಕು ಕವಿತೆಗಳನ್ನು ಪ್ರಬುದ್ಧ ಕರ್ನಾಟಕದ ಮೊದಲ ಪುಟದಿಂದ ಮೂರನೆಯ ಪುಟ ಪೂರ್ತಿ ಅಚ್ಚು ಹಾಕಿದರು. "ಹೊಸಬರಿಗೆ ಉತ್ತೇಜನ ಕೊಡುವುದು ಸರಿ. ಆದರೆ ಈ ಕವಿತೆ obviously Tagore–ಸ್ಪಷ್ಟವಾಗಿ ರವೀಂದ್ರನಾಥ ಠಾಗೂರರ ಪ್ರಭಾವದ್ದು" ಎಂದು ಸಹೃದಯ ಟೀಕೆಮಾಡಿ "ಯಾವ ಕವಿಯ ನೆರಳೂ ಸದಾ ನಮ್ಮಮೇಲೆ ಚಾಚಿಕೊಂಡಿರಬಾರದು" ಎಂದು ಸ್ಪಷ್ಟವಾಗಿ ಪ್ರಭಾವದಿಂದ ಹೊರಗುಳಿಯುವ ಅಗತ್ಯವನ್ನು ಹೇಳಿ ಎಚ್ಚರಿಸಿದರು.

ಈಗ ಬಹುಮಟ್ಟಿಗೆ ಪ್ರಚಾರದಲ್ಲಿರುವ ಪರಮಾಸೃಷ್ಟಿ–ಸಂಕೇತವಾದ, ಮಾಯಾವಾದ ಮುಂತಾದುವನ್ನೆಲ್ಲ ವಿಸೀ ನಮಗೆ ಆಗಾಗ ವಿವರಿಸುತ್ತಿದ್ದರು. ಅದೇತಾನೇ ಪ್ರಕಟವಾಗಿದ್ದ ಸೆಸಿಲ್ ಡೆಲೂಯಿಯ ಪುಸ್ತಕ 'Poetic Image' 'ಕಾವ್ಯ ಪ್ರತಿಮೆ' ಪುಸ್ತಕವನ್ನು ನಮಗೆ ಕೊಟ್ಟು ಅದನ್ನು ಕೂಲಂಕಷವಾಗಿ ಅಭ್ಯಾಸ ಮಾಡುವಂತೆ ಸೂಚಿಸಿದರು. ಕ್ರಿಸ್ಟೊಫರ್ ಇಷರ್‌ವುಡ್ ಹಾಗೂ ಡಬ್ಲ್ಯೂ. ಎಚ್. ಆಡೆನ್ ಬರೆದ 'The Dog Beneath the Skin' 'ಹೊದಿಕೆಯೊಳಗಿನ ನಾಯಿ' ಎಂಬ ನಾಟಕವನ್ನು ನಮ್ಮ ಜತೆ ಕೂತು ಓದಿ ಅದರ ಸೊಗಸನ್ನು ಮನದಟ್ಟು ಮಾಡಿಕೊಟ್ಟರು. ಇನ್ನೊಂದು ಕೃತಿ 'The Ascent of F 6' 'ಎಫ್ ೬ ಶಿಖರಾರೋಹಣ' ಅವರಿಗೆ ಅಚ್ಚುಮೆಚ್ಚಾದ ನಾಟಕ. ಆಗನಿಂದಲೂ ಅದರ ಬಗ್ಗೆ ಹೇಳಿಯೇ ಹೇಳುತ್ತಿದ್ದ ವಿ.ಸೀ. ಕೊನೆಗೊಮ್ಮೆ ಅದನ್ನು ಆಧರಿಸಿ 'ಶ್ರೀಶೈಲ ಶಿಖರಾರೋಹಣ' ಎಂಬ ಅದ್ಭುತ ನಾಟಕ ರಚಿಸಿದರು. ಅದು ಚಲನಚಿತ್ರವೂ ಆಯಿತು. ಆದರೆ ಅವರಿಗೆ ಸಮಾಧಾನ ತರುವ ರೀತಿಯಲ್ಲಲ್ಲ. ಪ್ರಾಯಶಃ ಅವರ ಬದುಕಿನ ಅಚ್ಚುಕಟ್ಟುತನ, ಗರಿಮುರಿಯದ ಹಂಸಬಿಳಿಯ ಪಂಚೆಯ ನೆರಿಗೆನೆರಿಗೆಯೂ ಇದನ್ನು ಸೂಚಿಸುತ್ತಿತ್ತೆಂಬುದೂ ಎಲ್ಲರಿಗೂ ತಿಳಿದ ವಿಷಯ–

ಯಾವುದರಲ್ಲೂ ಪರಿಪೂರ್ಣತೆಗೆ ಹಾತೊರೆಯುವ ಮನ ಈ ಚಿತ್ರಣವನ್ನೊಪ್ಪಲಿಲ್ಲ ಎನ್ನಿಸುತ್ತದೆ ನನಗೆ. "ಉಂಗುರ ರವ ಕೇಳಿ" ಎಂಬ ಅವರ ಹಾಡನ್ನು ನನಗೆ ಕಲಿಸಿ ಹಾಡಿಸಿದರು–'ಎಮ್ಮ ಮನೆಯಂಗಳದಿ' ಹೆಣ್ಣೊಪ್ಪಿಸುವ ಹಾಡು ಬಹಳ ಪ್ರಸಿದ್ಧವಾಗಿದೆ. ಆದರೆ ಅದಕ್ಕೆ ಪೂರಕವಾದ ಈ ಹಾಡು 'ಉಂಗುರರವ ಕೇಳಿ'–ತನ್ನ ಮನೆಗೆ ಬಂದ ಹೆಂಡತಿಯ ಕಾಲುಂಗುರದ ನಾದ ಕೇಳಿ ತನ್ನ ಮನಸ್ಸು ಸಂತಸಗೊಂಡಿದೆ–ಕಲ್ಲುನೆಲ ಕೂಡ ಅದನ್ನು ಮಾರುಲಿದು ನಲಿಯುತ್ತದೆ–ಪ್ರಕೃತಿದತ್ತವಾದ ಸೌಂದರ್ಯ ಹೊಸದಾಗಿ ಮನೆತುಂಬಿದ ಪ್ರೀತಿಯಲ್ಲಿ ಪರಿಪೂರ್ಣತೆಯನ್ನು ಕಂಡು ಮನೆಯನ್ನು ಮನವನ್ನು ಬೆಳಗುತ್ತದೆ–ಶಾಂತಿಯನ್ನು ನೀಡುತ್ತದೆ ಎಂದ ಕವಿತೆ ಹೆಣ್ಣಿಗೆ ತೃಪ್ತಿಯುಂಟುಮಾಡುವ ಕವಿತೆ ತವರುಮನೆ ಬಿಟ್ಟು ಬಂದ ಹೆಣ್ಣು ಗಂಡನ ಮನೆಯಲ್ಲಿ ಪಡೆದುಕೊಳ್ಳುವ ಪ್ರೇಮ, ಆ ಗಂಡಿನ ವ್ಯಾಮೋಹ ಹೇಗೆ ಅವಳಿಗೆ ಸಂತಸ ನೀಡಿ, ಸಂತಸ ನೀಡುವಂತೆ ಮೂಡುತ್ತದೆಂಬ ಯವ್ವನದ ಹೃದಯದ ಮಿಡಿತ ಈ ಕವಿತೆಯಲ್ಲಿ ಸರಳವಾಗಿ ಮೂಡಿಬಂದಿದೆ. ಕೆ. ಎಸ್. ನರಸಿಂಹಸ್ವಾಮಿಯವರ 'ಮೈಸೂರು ಮಲ್ಲಿಗೆ'ಯ ನವದಂಪತಿಗಳ ಪ್ರೀತಿಯ ಚೆಲುವು ಪ್ರಾಯಶಃ ಈ ಕವಿತೆಯಿಂದ ಸ್ಫೂರ್ತಿಗೊಂಡಿದ್ದರೂ ಇರಬಹುದು.

೧೯೪೩ರಲ್ಲಿ ಆರಂಭವಾದ ಈ ಹಿರಿಯರ ಸಹವಾಸ ಮುಂದುವರಿದು ಪ್ರಬುದ್ಧ ಕರ್ನಾಟಕಕ್ಕೆ ನಾವು–ಚಿಕ್ಕವರು–ಲೇಖನಗಳನ್ನು, ಆರ್ಥಿಕ ವಿಷಯಗಳ ಬಗ್ಗೆ ಕೂಡ–ಬರೆಯುವಂತೆ ಸೆಳೆಯಿತು. ಪ್ರಸಿದ್ಧ ಫ್ರೆಂಚ್ ಲೇಖಕ ಆನತೋಲ್ ಫ್ರಾನ್ಸ್ ಬರೆದ "ಬದುಕು ಮತ್ತು ಸಾಹಿತ್ಯ" 'Life and Letters', ನಾಲ್ಕು ಸಂಪುಟಗಳ ವಿಮರ್ಶಾ ಲೇಖನಗಳನ್ನು ಓದಲು ನಮ್ಮನ್ನು ಪ್ರೇರೇಪಿಸಿದರು ವಿಸೀ. ಷೇಕ್ಸ್‌ಪಿಯರನ 'ಟೆಂಪೆಸ್ಟ್' (ಬಿರುಗಾಳಿ) ನಾಟಕದ ಬಗ್ಗೆ ಫ್ರಾನ್ಸ್ ಬರೆದ ಲೇಖನವನ್ನು ನನ್ನಿಂದ ಅನುವಾದ ಮಾಡಿಸಿ ಪ್ರಬುದ್ಧ ಕರ್ನಾಟಕದಲ್ಲಿ ಪ್ರಕಟಿಸಿದರು. ೧೯೪೪ರಲ್ಲಿ ಬಿಎಂಶ್ರೀ ಚಿನ್ನದಪದಕ ನನ್ನ ಕವಿತೆಗೆ ಬಂದಾಗ 'ಬಾಡದ ಹೂ' ಕವಿತೆಯನ್ನು ಮೆಚ್ಚಿಕೊಂಡು ಅದರಲ್ಲಿ ಹೊಸ ಛಂದಸ್ಸಿನ ಪ್ರಯೋಗವಿದೆಯೆಂದು (ನನಗೇ ಗೊತ್ತಿಲ್ಲದ) ಅಂಶವನ್ನು ಗುರುತಿಸಿ, ನನ್ನಲ್ಲಿ ಉತ್ಸಾಹ ತುಂಬಿದರು.

ವಿಸೀಯವರ ರಸಿಕತೆಯ ಬಗ್ಗೆ ಎಲ್ಲರೂ ಬರೆದಿದ್ದಾರೆ. ಒಂದು ವಿಷಯವನ್ನು ಮಾತ್ರ ಇಲ್ಲಿ ಹೇಳುತ್ತೇನೆ. ಮೈಸೂರಿನ ಅರಮನೆಯಲ್ಲಿ ಮಸಾಲೆದೋಸೆ, ತುಪ್ಪದದೋಸೆ ಬಹಳ ವಿಶಿಷ್ಟವಾಗಿರುತ್ತದೆಂದು ಕೇಳಿದ

ಅವರು ಅಲ್ಲಿಯ ಮುಖ್ಯ ಅಡಿಗೆಯವರನ್ನು ಮನೆಗೆ ಕರೆಸಿಕೊಂಡರು. ಅಲ್ಲಿ ತುಪ್ಪದದೋಸೆ ಹೇಗೆ ಮಾಡುತ್ತಾರೆ-ಎಷ್ಟು ಉದ್ದು, ಎಷ್ಟು ಮೆಂತ್ಯ, ಎಷ್ಟು ಅಕ್ಕಿ, ಎಂತಹ ಅಕ್ಕಿ, ಯಾವ ಬಗೆಯ ತುಪ್ಪ ಮುಂತಾದ ವಿವರಗಳನ್ನೆಲ್ಲ ಆತನಿಂದ ಕೇಳಿ ಬರೆದುಕೊಂಡರು. "ನಾವೇ ಮನೆಯಲ್ಲಿ ಮಾಡಿದರೆ ಹಾಗೆ ಆಗುವುದಿಲ್ಲವಾದ್ದರಿಂದ ನೀವೇ ಬಂದು ಮಾಡಿಕೊಡಬೇಕು" ಎಂದು ಆತನನ್ನು ಕೇಳಿಕೊಂಡರು. 'ಇದೆಂತಹ ಹುಚ್ಚು' ಎಂದು ಎಷ್ಟೋ ಜನಕ್ಕೆ ಅನ್ನಿಸಿದಂತೆ ಆತನಿಗೂ ಅನ್ನಿಸಿರಬೇಕು. ಅಂತೂ ಅಡಿಗೆಯಾತ ಆ ರೀತಿಯ ದೋಸೆಯನ್ನು ಮಾಡುವುದಕ್ಕಾಗಿಯೇ ವಿಶಿಷ್ಟವಾದ ಕಾವಲಿಯನ್ನೂ ತಂದು ವಿಸೀಯವರ ಮನೆಯಲ್ಲಿ ತುಪ್ಪದದೋಸೆ ಮಾಡಿದ್ದುಂಟು. ನಮ್ಮಲ್ಲಿ ಕೆಲವರನ್ನು ಅವರು ಕರೆದು ಅದರ ಸವಿಯನ್ನು ನಮಗೆ ಉಣಬಡಿಸಿದ್ದು ಉಂಟು. ಎಲ್ಲ ಆದ ಮೇಲೆ, ಪ್ರಾಯಶಃ ಆ ಒಂದು ದಿನದ ತುಪ್ಪದ ದೋಸೆಯ ಖರ್ಚು—ಅವರ ಒಂದು ತಿಂಗಳ ಸಂಬಳವನ್ನೇ ತಿಂದುಹಾಕಿತ್ತು ಎಂಬುದು ನಮಗೆ ತಿಳಿದಂತೆಯೇ, ವಿಸೀಯವರಿಗೂ ಅರಿವಾಯಿತು. "ಅದಕ್ಕೇ ಮತ್ತೆ ಅದು ಅರಮನೆ" ಎಂದು ಅವರು ಅಂದು ಫಕ್ಕನೆ ನಕ್ಕುಬಿಟ್ಟು ತಲೆ ಸವರಿಕೊಂಡರು.

೧೯೪೭ರ ಒಂದು ಘಟನೆಯನ್ನು ಉಲ್ಲೇಖಿಸಿ ಈ ನೆನಪಿನ ಕಾಣಿಕೆಯನ್ನು ಮುಗಿಸುತ್ತೇನೆ. ೧೯೪೭ರ ಆಗಸ್ಟ್ ೧೫ರಂದು ಭಾರತ ಸ್ವಾತಂತ್ರ್ಯ ಪಡೆದ ನಂತರ ವಿಸೀಯವರ 'ಅಭೀಃ' ಕವಿತೆಗೆ, 'ಮೃಗಶಾಲೆಯ ಸಿಂಹಗಳು' ಕವಿತೆಗೆ, ನಮಗೆ ಅರ್ಥಗೋಚರವಾಯಿತು. ಆಗ ನಾನು ಮಹಾರಾಜಾ ಕಾಲೇಜಿನಲ್ಲಿ ಇಂಗ್ಲಿಷ್ ಅಧ್ಯಾಪಕನಾಗಿದ್ದೆ. ಸೆಪ್ಟೆಂಬರ್ ತಿಂಗಳಲ್ಲಿ ಮೈಸೂರಿನಲ್ಲಿ ಜವಾಬ್ದಾರಿ ಸರ್ಕಾರಕ್ಕಾಗಿ ಹೋರಾಟ ನಡೆಯುತ್ತಿದ್ದಾಗ ನಾನೂ ಅದರಲ್ಲಿ ಸಕ್ರಿಯವಾಗಿ ಪಾತ್ರ ವಹಿಸಿದ್ದೆ-ಆಗ ಮೈಸೂರು ಆಕಾಶವಾಣಿಯವರು ಇದ್ದಕ್ಕಿದ್ದಂತೆ ಅಕ್ಟೋಬರ್ ೨ನೆಯ ತಾರೀಕು ಗಾಂಧೀಜಿಯ ಬಗ್ಗೆ ಒಂದು ವಿಶೇಷ ಕಾರ್ಯಕ್ರಮವನ್ನು ಭಿತ್ತರಿಸಬೇಕೆಂದು ತೀರ್ಮಾನಿಸಿದರು. ಡಾಕ್ಟರ್ ನಟೇಶ್ ಸೆಪ್ಟೆಂಬರ್ ೩೦ರ ಸಂಜೆ ವಿಸೀಯವರ ಮನೆಗೆ ಹೋಗಿ ಗಾಂಧೀಜಿಯವರ ಬಗ್ಗೆ ರೂಪಕ ಮಾಡಿಕೊಡಬೇಕೆಂದು ಕೇಳಿದಾಗ, ಅವರು ಅಪಾರ ಕರುಣೆಯಿಂದ ಅವರ ಜತೆಗೇ ನನ್ನ ಮನೆಗೆ ಬಂದು ನಾನು ಆ ರೂಪಕ ಬರೆದು ಸಿದ್ಧಪಡಿಸಿ ಜೀವಂತ ಭಿತ್ತರ ಮಾಡಬೇಕೆಂದು ಹೇಳಿದರು. ಅಂದು ಆಕಾಶವಾಣಿಗೆ ನಾಟಕ ಬರೆಯುವ ಅವಕಾಶವನ್ನು ಕಿರಿಯನಾದ ನನಗೆ ಕಲ್ಪಿಸಿಕೊಟ್ಟು ವಿಸೀಯವರು ಹೊಸ ಬಾನುಲಿ ರೂಪಕದ ರೀತಿನೀತಿ

ಯನ್ನು ನನಗೆ ಕಲಿಸಿಕೊಟ್ಟರು. ಹೊಸ ಪ್ರಕಾರದ ರಚನೆಗೆ ನನ್ನನ್ನು ತೊಡಗಿಸಿದರು. ಅನಂತರವೂ ಅಪಾರ ಪ್ರೀತಿಯಿಂದ ನನ್ನನ್ನು ದಕ್ಷಿಣ ಕನ್ನಡ ಜಿಲ್ಲೆಗೆ ಕರೆದೊಯ್ದು 'ದೇಶದ ಪರಿಚಯ' ಮಾಡಿಕೊಳ್ಳಲು ಅನುವು ಮಾಡಿಕೊಟ್ಟರು. ಕಾರಂತರು ಮತ್ತು ಗೋವಿಂದ ಪೈ ಅವರ ಸಾಹಚರ್ಯವನ್ನು ದೊರಕಿಸಿಕೊಟ್ಟರು. ಸಾಹಿತ್ಯಪ್ರಪಂಚಕ್ಕೆ ನನ್ನನ್ನು ಕರೆತಂದು ಕೆಲಸ ಮಾಡಿಸಿದ ವಿಸೀಯವರಿಗೆ ಇದು ನನ್ನ ಅಲ್ಪ ಕಾಣಿಕೆ, ನೆನಪು ಕಾಣಿಕೆ. ಅವರೇ ಹೇಳಿದ ಮಾತಿನಲ್ಲಿ ಹೇಳುವುದಿದ್ದರೆ

"ಸ್ವರ್ಗದೊಳಗೀ ಸ್ನೇಹ ದೊರೆವುದೇನು ?
ಈ ಪರಿಯ ಸೌಹಾರ್ದಕೆಳೆಯ ವೈಭವವು ?"

ಎಸ್.ಅನಂತನಾರಾಯಣ



ಪರಿಸ್ಥಿತಿಯು ಯಾವಾಗ ವಿಪರೀತಗೊಳ್ಳುತ್ತದೆಯೋ ಆಗ ಬಹುಶಃ ಸಾಮಾನ್ಯ ವ್ಯಕ್ತಿಯು ಎರಡನೆಯವರ ಆಶ್ರಯ ಹೊಂದುತ್ತಾನೆ.

ಅಂಥ ವಿಶ್ವಾಸಿ ತಲೆಯ ಮೇಲೆ ಕೈಹೊತ್ತು ತನ್ನ ಭಾಗ್ಯವನ್ನು ಹಳಿಯುತ್ತಾನೆ. ಆದರೆ ಯಾವನು ಬುದ್ಧಿವಂತನಿರುವನೋ ಅವನು ಸ್ವತಃ ತನ್ನ ಕರ್ತೃತ್ವ ಶಕ್ತಿಯಿಂದಲೇ ಆ ವಿಪರೀತ ಪರಿಸ್ಥಿತಿಯನ್ನು ಕೂಡಾ ತನಗೆ ಅನುಕೂಲವಾಗಿ ಪರಿವರ್ತನೆ ಮಾಡಿಕೊಳ್ಳುತ್ತಾನೆ.

—ರಾಸೆಲ್

ಮೃತ ಜೀವಿಗಳಾದ ಭಾರತವೀರರ ಅಮೃತಮಯ ಜೀವಿತಗಳ ದಿವ್ಯಾದರ್ಶವಿದ್ದರೂ ಅವರ ಧ್ಯೇಯವನ್ನನುಸರಿಸಿ ನಡೆಯದೇ ನಮ್ಮವರು ಜೀವನ್ಮೃತರಾಗುತ್ತಿರುವರು.

—ರಾಜಾಜಿ

ಇದು ಅಮೆರಿಕಾ!

(ಹಿಂದಿನ ಸಂಚಿಕೆಯಿಂದ ಮುಂದುವರಿದುದು)

೭. ಮೊದಲ ನೋಟಕ್ಕೆ ಅಮೆರಿಕಾ

ಅಮೆರಿಕಾ ಮೊದಲ ನೋಟಕ್ಕೆ ಎಂತಹನನ್ನೂ ಮೋಹಗೊಳಿಸುವಲ್ಲಿ ಸಂದೇಹವಿಲ್ಲ. ವಿಮಾನ ನಿಲ್ದಾಣದಲ್ಲೇ ವ್ಯವಸ್ಥಿತವಾದ ವಿಶಾಲ ಭವನಗಳು. ಮೇಲ್ಮಹಡಿಗೆ ಹೋಗಲು ನಿಧಾನವಾಗಿ ತಾನಾಗಿ ಸಾಗುವ ಏಣಿಗಳು ಅಥವಾ ಲಿಫ್ಟ್‌ಗಳು, ಬಾಗಿಲ ಹತ್ತಿರ ಬಂದೊಡನೆ ತನ್ನಷ್ಟಕ್ಕೇ ತೆರೆಯುವ ಬಾಗಿಲಪಡಿಗಳು, ಹೊರ ಬಂದಾಗ ಸುಂದರ ಕಾರುಗಳಿಂದ ತುಂಬಿದ ಸಾಲಾನುಸಾಲು ರಸ್ತೆಗಳು, ಝಗಝಗಿಸುವ ದೀಪಾಲಂಕಾರಗಳು, ಹವಾ ನಿಯಂತ್ರಿತವಾದ ಕಟ್ಟಡ, ಕಾರು, ಅಂಗಡಿಗಳು, ಬಹುಮಹಡಿಗಳುಳ್ಳ ಗಗನ ಚುಂಬೀ ಕಟ್ಟಡಗಳು, ಇಷ್ಟೆಲ್ಲ ಕಾಂಕ್ರೀಟು ಕಾಡುಗಳ ಮಧ್ಯದಲ್ಲಿಯೂ ಹಸಿರು ತುಂಬಿದ ಮರಗಿಡಗಳ ಸಾಲುಗಳು, ಬಿಡುವಿಲ್ಲದೆ ಸದಾ ಕಾರ್ಯೋನ್ಮುಖ ರಾಗಿರುವ ಚುರುಕಿನ ಜನಗಳು—ಇವೆಲ್ಲ ಅಲ್ಲಿಯ ಜನರ ಕಾರ್ಯದಕ್ಷತೆ, ಸೌಂದರ್ಯ ಪ್ರಜ್ಞೆ, ಅಪಾರ ವೈಭವ—ಇವೆಲ್ಲದರ ದ್ಯೋತಕಗಳಾಗಿವೆ.

ನಾವು ಮಹಾ ನಗರ ಬಿಟ್ಟು ಹೊರಹೊರಡುವಾಗ ದಾರಿಯಲ್ಲಿ ಕಂಡ ನದಿಗಳ ಮೇಲಿನ ದೊಡ್ಡದೊಡ್ಡ ಸೇತುವೆ ಕಮಾನುಗಳು, ವಿಶಾಲ ಕ್ರೀಡಾಂಗಣ ಗಳು ಮತ್ತೂ ಮುಂದೆ ಹೋದಾಗ ತೋರಿದ ದಾರಿಯ ಇಕ್ಕೆಲಗಳಲ್ಲೂ ಹಸಿರು ತುಂಬಿ ತುಳುಕಾಡುತ್ತಿರುವ ಸುಂದರ ವನಗಿರಿಗಳು, ಒಂದೇ ಒಂದು ಕಸಕಡ್ಡಿ ಗಲೀಜುಗಳಿಲ್ಲದ ನಿರ್ಮಲ ವಿಶಾಲ ರಸ್ತೆಗಳು—ಇವೆಲ್ಲ ಎಂತವರ ಮನಸ್ಸನ್ನೂ ಸೂರೆಗೊಳ್ಳುವ ತರದಲ್ಲಿವೆ.

ರಸ್ತೆಯಲ್ಲಿ ಯಾವ ಕಸವನ್ನೂ ಎಸೆಯಬಾರದು; ಉಗುಳಬಾರದು. ಅವಕ್ಕಾಗಿ ಅಲ್ಲಲ್ಲಿ ಇಟ್ಟಿರುವ ಕಸದ ಹಂಡೆಗಳಲ್ಲೇ ಹಾಕಬೇಕು—ಈ ತರದ ಕಠಿಣ ನಿಯಮಗಳು ಇವೆಯಂತೆ. ಹಾಗೆ ಕಾನೂನು ಮೀರಿದರೆ ನ್ಯಾಯಾಲ ಯದ ತೀರ್ಮಾನದಂತೆ ದಂಡವನ್ನೂ ತೆರಬೇಕಂತೆ. ಸಾರ್ವಜನಿಕ ರಸ್ತೆಯ ನೈರ್ಮಲ್ಯ ಕೆಡಿಸಿದರೆ ೫೦೦ ಡಾಲರುಗಳವರೆಗೂ ದಂಡ ಬೀಳುವುದಂತೆ. ಆ ದಂಡದ ಭಯಕ್ಕಿಂತಲೂ ಜನ ಸಾಮಾನ್ಯರಲ್ಲಿರುವ ನೈರ್ಮಲ್ಯ ಪ್ರಜ್ಞೆ ವಿಶೇಷ ವಾದುದು. ಅದು, ಸುಂದರ ವಾತಾವರಣ ನಿರ್ಮಾಣಕ್ಕೆ ಮುಖ್ಯ ಕಾರಣ ವೆಂದು ತಿಳಿದುಬರುತ್ತದೆ.

ನಾವು ಹಾದುಹೋಗುವ ಕಾಡುಮಧ್ಯದ ರಸ್ತೆಯ ಬದಿಯಲ್ಲೂ ಮೂತ್ರ ವಿಸರ್ಜನೆ ಮಾಡುವುದು ಅಪರಾಧ. ಅದಕ್ಕಾಗಿ ೨೦-೩೦ ಮೈಲುಗಳ ಅಂತರ ದಲ್ಲಿರುವ ವಿಶ್ರಮದಾಣ (Rest area) ಗಳಲ್ಲೇ ತಮ್ಮ ದೇಹ ಸೈರ್ಮಲ್ಯ ಮಾಡಿಕೊಳ್ಳಬೇಕು. ಆ ವಿಶ್ರಮದಾಣಗಳೂ ಸಕಲಸೌಕರ್ಯಗಳನ್ನೊಳ ಗೊಂಡಿವೆ. ನಿರ್ಮಲವಾದ ಸ್ನಾನ ಗೃಹಗಳು, ಕುಡಿಯುವ ನೀರು ಅಥವಾ ಪಾನೀಯ, ಹೊರಗಿನ ಮೈದಾನದಲ್ಲಿ ತಿಂಡಿ ತೀರ್ಥ ತಿಂದುಹೋಗಲನುಕೂಲ ವಾಗುವ ಆಸನ ವ್ಯವಸ್ಥೆ—ಇವನ್ನೆಲ್ಲ ಹೊಂದಿಕೊಂಡಿವೆ. ಅಲ್ಲಿಗೊಬ್ಬ ಪ್ರತ್ಯೇಕ ವ್ಯವಸ್ಥಾಪಕನೂ ಇರುವನು.

ಈ ತರದಲ್ಲಿ ದಾರಿಹೋಕರಿಗೆ ಅಥವಾ 'ಕಾರುಹೋಕ'ರಿಗೆ ಬೇಕಿದ್ದ ಅನುಕೂಲತೆ, ರಸ್ತೆಗಳ ನೈರ್ಮಲ್ಯ ಹಾಗೂ ಸೌಂದರ್ಯ—ಇವುಗಳ ವಿಚಾರ ದಲ್ಲಿ ಅಲ್ಲಿಯ ಸರ್ಕಾರ ಹಾಗೂ ಜನತೆ ತುಂಬ ನಿಗಾ ವಹಿಸುತ್ತದೆ. ಒಮ್ಮೆ, ಭಾರತದ ನಮ್ಮ ರಸ್ತೆಗಳ ನೆನಪಾಗಿ ದುಃಖವೂ ಉಕ್ಕಿಬರುತ್ತದೆ.

ಹಾಗೆ ನಮ್ಮ ಮೂರು ಘಂಟೆಗಳ ಸುಖ ಪ್ರಯಾಣ ಮುಗಿಸಿ ಬಿಂಘೂಂಟನ್ನಿ ನಲ್ಲಿರುವ ಮಗನ ಮನೆ ಸೇರಿದೆವು. ಮನೆಯ ಗ್ಯಾರೇಜಿನ ಹತ್ತಿರ ಬಂದೊಡನೆಯೇ ಕಾರಿನೊಳಗಿನ ಒಂದು ಗುಂಡಿಯನ್ನು ಚಾಲಕನೊತ್ತಿದ. ಗ್ಯಾರೇಜು ಬಾಗಿಲು ತಾನಾಗಿಯೇ ತೆರೆಯಿತು. ಒಳ ಬಂದು ಆ ಗುಂಡಿಯನ್ನು ಪುನಃ ಒತ್ತಿದಾಕ್ಷಣ ಗ್ಯಾರೇಜಿನ ದೊಡ್ಡ ಬಾಗಿಲು ತನ್ನಷ್ಟಕ್ಕೇ ಮುಚ್ಚಿಹೋಯಿತು. ಅಂತಹ ಸ್ವಯಂ ಚಾಲಿತ ವ್ಯವಸ್ಥೆ! ನಮಗದು ವಿಸ್ಮಯಕರವಾದರೂ ಅಲ್ಲಿಯವರಿಗದು ಸಾಮಾನ್ಯ ವಿಚಾರ. ಮಾನವ ಹಸ್ತ ಕೆಲಸ ಮಾಡದೇ ದೊಡ್ಡ ಬಾಗಿಲು ಮುಚ್ಚಿತೆರೆಯುವುದು ಆಶ್ಚರ್ಯವಲ್ಲವೇ ?

ಮನೆಯೊಳಗಿನ ವ್ಯವಸ್ಥೆಯೂ ಅಷ್ಟೆ. ಅಡಿಗೆ ಮಾಡಿದ, ಉಂಡು ಕುಡಿದ ಪಾತ್ರೆಗಳನ್ನೆಲ್ಲ ಒಂದು ಡಬ್ಬದಲ್ಲಿ (Dish-washer) ಹಾಕಿ ಗುಂಡಿ ಒತ್ತಿದರೆ ಸಾಕು. ಆ ಪಾತ್ರೆಗಳನ್ನೆಲ್ಲ ಬಿಸಿನೀರಲ್ಲಿ ನಿರ್ಮಲವಾಗಿ ತೊಳೆದು ನೀರೊಣಗಿಸಿ ಅದು ಕೊಡುತ್ತದೆ. ಕೊಳೆ ಬಟ್ಟೆಗಳನ್ನೆಲ್ಲ ಇನ್ನೊಂದು ಡಬ್ಬದಲ್ಲಿ ಹಾಕಿ ಗುಂಡಿ ಒತ್ತಿದರೆ, ಬಟ್ಟೆಗಳನ್ನೊಗೆದು, ಹಿಂಡಿ, ಒಣಗಿಸಿ ಆ ಯಂತ್ರ (Washing Machine) ನಮಗರ್ಪಿಸುತ್ತದೆ. ಆ ಮನೆ ವಿಶಾಲವಾದ್ದ ರಿಂದ ಒಂದು ಕೋಣೆಯಿಂದ ಮಹಡಿಯ ಕೋಣೆಯಲ್ಲಿರುವವರೊಡನೆ ಮಾತಾಡಲೂ ಕಷ್ಟವಿಲ್ಲ. ಗೋಡೆಯ ಬದಿಯ ಒಂದು ಕಿರು ಯಂತ್ರದ ಹತ್ತಿರ ಹೋಗಿ ಗುಂಡಿ ಒತ್ತಿ ಮಾತಾಡಿದರೆ ಕೇಳಿಸುತ್ತದೆ. ಅವರು ನುಡಿದುದು ಇಲ್ಲಿ

ಕೇಳಿಸುತ್ತದೆ. ಮನೆಯ ನೆಲಕ್ಕೆಲ್ಲ ರತ್ನಗಂಬಳಿಗಳನ್ನು (Carpet) ಹಾಸಲಾಗಿದೆ. ಮನೆ ಹವಾನಿಯಂತ್ರಿತವಾಗಿದೆ. ಬೇಕಾದಷ್ಟು ಶೈತ್ಯವನ್ನೋ ಉಷ್ಣತೆಯನ್ನೋ ಗುಂಡಿ ತಿರುಗಿಸಿ ಮಾಡಿಕೊಳ್ಳಬಹುದು. 'ಶೀತಕಾಲೇ ಭವೇದುಷ್ಣಂ-ಉಷ್ಣಕಾಲೇಚ ಶೀತಲಂ' – ತಣ್ಣಗಿರುವಾಗ ಬಿಸಿ, ಬಿಸಿಯಾದಾಗ ತಣ್ಣಗೆ—ಎಂಬಂತೆ. ದಿನದ ೨೪ ಗಂಟೆಗಳಲ್ಲೂ ಬಿಸಿ ಅಥವಾ ತಣ್ಣಗಾದ ನೀರು ನಲ್ಲಿ ತಿರುಗಿಸಿದೊಡನೆಯೇ ಹರಿದು ಬರುತ್ತದೆ. ಬಿಸಿ ಅಥವಾ ತಣ್ಣಗೆ ನೀರಿನ ಸುರಿವ ಸ್ನಾನವೂ (Shower Bath) ಸದಾ ಸಿದ್ಧವಿದೆ. ರೇಡಿಯೋ, ಟೆಲಿವಿಷನ್, ಟೇಪ್‌ರೆಕಾರ್ಡರ್, ಫೋನ್, ಫ್ರಿಜ್—ಇತ್ಯಾದಿಗಳೆಲ್ಲ ಅಲ್ಲಿಯ ಎಲ್ಲ ಮನೆಗಳಲ್ಲೂ ಇರುವ ಮಾಮೂಲೀ ಉಪಕರಣಗಳು. ನಮ್ಮಲ್ಲಿ ಕಡೆಯುವ ಕಲ್ಲಿರುವಂತೆ ಇವೆಲ್ಲ ಮನೆಯ ಅವಿಭಾಜ್ಯ ಅಂಗಗಳು. ವಿಶಾಲ ದೇಶದ ಯಾವ ಭಾಗದವರೊಡನೆಯೂ ಕ್ಷಣಾರ್ಧದಲ್ಲಿ ಫೋನ್ ಮೂಲಕ ಸ್ಪಷ್ಟವಾಗಿ ಮಾತಾಡಬಹುದು. ಇಂತಹ ಸುವ್ಯವಸ್ಥೆ ಅಲ್ಲಿಯದಾಗಿದೆ.

ಅಂತು ಮನೆ ಸೇರಿ ಊಟೋಪಚಾರವಾದ ಮೇಲೆ ವಿಶ್ರಾಂತಿ ಪಡೆದವು. ಹಿಂದಿನ ೨–೩ ದಿನಗಳಲ್ಲಿ ಸರಿಯಾದ ನಿದ್ರೆ ಇಲ್ಲದೆ ಸೋತುಹೋಗಿದ್ದೆವು. ೧೮–೨೦ ಗಂಟೆಗಳ ಪ್ರಯಾಣವನ್ನು ಮುಂಬಯಿಂದ ನ್ಯೂಯಾರ್ಕಿಗೆ ನಾವು ನಡೆಸಿದ್ದೆವು. ಆದರೂ ಹಗಲಲ್ಲೇ ಇದ್ದು ನಾವು ರಾತ್ರಿ ಕಾಣದವರಾಗಿದ್ದೆವು. ಕಾಲಚಕ್ರ ತಿರುಗುತ್ತ ಹೋದಂತೆ ನಾವೂ ತಿರುಗುತ್ತಿದ್ದುದರಿಂದ ನಾವು 'ನಿಶಾಚರ'ರಾಗಲು ಸಾಧ್ಯವೇ ಇಲ್ಲವಾಗಿತ್ತು.

ಮರುದಿನ ಬೆಳಗ್ಗೆ ಮಗ ಸುಧಾಕರನು 'ಕ್ಲಿನಿಕ್'ಗೆ ತನ್ನ ಕಾರಲ್ಲಿ ಹೊರಟು ಹೋದ. ಮನೆಯಲ್ಲಿದ್ದ ಇನ್ನೊಂದು ಕಾರಲ್ಲಿ ಸೊಸೆ ಬೇಕಾದಲ್ಲಿ ನಮ್ಮನ್ನು ಕರೆದೊಯ್ಯಲು ಸಿದ್ಧಳಿದ್ದಳು. ಪ್ರತಿ ಮನೆಗೂ ಒಂದು ಅಥವಾ ಎರಡು ಕಾರುಗಳು ಇರುವುದು ಅಲ್ಲಿ ಸರ್ವಸಾಮಾನ್ಯ. ಅಂಗಡಿಯಿಂದ ಮನೆಸಾಮಾನು ತರಬೇಕಾದರೆ ಮನೆಗೊಂದು ಕಾರಿರಲೇಬೇಕು.

೮. ಅಂಗಡಿಯ ಹೆಂಗೆಳತಿಯರು

ನಾವು ಸಹ ಮರು ದಿನ ಸಾಯಂಕಾಲ ನಗರಸಂದರ್ಶನಕ್ಕಾಗಿ ಹೊರಟೆವು. ದಾರಿಯಲ್ಲಿ ಕಾರುಗಳಲ್ಲದೆ ಮಾನವ ಕಾಣಸಿಗುವುದೇ ಅಪರೂಪ. ನಾವು ಹೋದ ಸಮಯ ಬೇಸಗೆಯ ಸುಂದರ ಕಾಲ. ಅದ್ದರಿಂದ ಕೆಲವು ಶರೀರ ಸೌಂದರ್ಯಾಕಾಂಕ್ಷಿಗಳು ಅರೆಬರೆ ಮೈಯಲ್ಲಿ ರಸ್ತೆಯಂಚಿನಲ್ಲಿ ಓಡಾಡು

ತ್ತಿದ್ದರು. ವರ್ಷದ ಹೆಚ್ಚಿನ ಸಮಯ ಹಿಮಬೀಳುತ್ತಿರುವ ಆ ದೇಶದಲ್ಲಿ ಬಿಸಿಲೆಂದರೆ ಸಂತಸದ ಹುಚ್ಚು ಬರಿಸುವ ಕಾಲ. ಅವರಂತಹರಲ್ಲದೆ ಬೇರೆ ಜನ ನಗರ ರಸ್ತೆಗಳಲ್ಲಿ ಕಾಣಸಿಗುವುದೇ ಇಲ್ಲ.

ಇನ್ನು ಅಂಗಡಿಗಳತ್ತ ಹೋದರೆ ಅಲ್ಲಿಯೂ ನಮಗೆ ವಿಸ್ಮಯ ಕಾದಿತ್ತು. ಕಾರಿಂದಿಳಿದು ಅಂಗಡಿಯ ಮುಖದ್ವಾರದತ್ತ ಕಾಲಿಟ್ಟೆವು. ಒಡನೆಯೇ ದೊಡ್ಡ ಗಾಜಿನ ಬಾಗಿಲು ತನ್ನಷ್ಟಕ್ಕೇ ತೆರೆಯಿತು. ಒಳಹೋದರೆ ವಿಶಾಲ ಸಾಮ್ರಾಜ್ಯವನ್ನೇ ಬಿಚ್ಚಿಟ್ಟಂತೆ ಅಲ್ಲಿ ಅಂಗಡಿಗಳನ್ನು (Departmental stores) ವ್ಯವಸ್ಥೆಗೊಳಿಸಿದ್ದರು. ಒಂದೊಂದು ಸಾಲಿನಲ್ಲಿ ಒಂದೊಂದು ತರದ ಸರಕುಗಳ ಸಾಲುಗಳನ್ನು ಜೋಡಿಸಿಟ್ಟಿದ್ದರು. ವಿವರ ನೀಡುವ ಫಲಕಗಳು ಆ ಸಾಲುಗಳ ಮೇಲೆ ತೂಗಾಡುತ್ತಿದ್ದವು.

ಹತ್ತಿರವೇ, ಹೆಂಗಸರೂ ದೂಡಿಕೊಂಡು ಹೋಗಲಾಗುವಂತಹ ಕಿರುಕೈಗಾಡಿಗಳು ದೊರುಕುತ್ತವೆ. ಗಿರಾಕಿಗಳು ಒಂದು ಕೈಗಾಡಿಯನ್ನು ದೂಡಿಕೊಂಡು ಹೋಗಿ ತಮಗೆ ಬೇಕಿದ್ದ ಸಾಮಗ್ರಿಗಳ ಕಟ್ಟುಗಳನ್ನು ತೆಗೆದು ತಮ್ಮ ಕೈಗಾಡಿಗಳಲ್ಲಿ ಹಾಕಿಕೊಳ್ಳುತ್ತಾರೆ. ವಿವಿಧ ತರ್ಕಾರಿಗಳ ಸಾಲುಗಳಿರುವ ಜಾಗಕ್ಕೆ ಹೋದರೆ ಅಲ್ಲಿ ನಿರ್ಮಲ ಚೀಲಗಳಲ್ಲಿ ಹಾಕಿದ ಆಕರ್ಷಕ ತರ್ಕಾರಿಗಳು ತೆರೆದ ಬೀರುಗಳ ಅಂತಸ್ತುಗಳಲ್ಲಿ ಜೋಡಿಸಲ್ಪಟ್ಟಿವೆ. ಅವುಗಳ ತೂಕ, ಬೆಲೆ ಗುಣಮಟ್ಟ—ಇವನ್ನೆಲ್ಲ ಬರೆದ ಚೀಟಿ, ತರ್ಕಾರಿ ಚೀಲದ ಮೇಲೆ ಲಗತ್ತಿಸಲ್ಪಟ್ಟಿರುತ್ತದೆ. ಗಿರಾಕಿ ತನಗೆ ಬೇಕಾದ್ದನ್ನು ಆರಿಸಿಕೊಂಡು ಮುಂದೆ ಸಾಗಬೇಕು.

ಮುಂದೆ ಬೇಳೆಕಾಳುಗಳ ಸಾಲಿರಬಹುದು. ಇನ್ನೊಂದು ಸಾಲಲ್ಲಿ ಬಟ್ಟೆಬರೆಗಳಿರಬಹುದು. ಇನ್ನೊಂದೆಡೆ ಸ್ಟೇಶನರಿ ಸಾಮಗ್ರಿಗಳಿರಬಹುದು. ಮತ್ತೊಂದೆಡೆ ಅಲಂಕಾರ ಸಾಮಗ್ರಿಗಳಿರಬಹುದು. ಅಂತು ಎಲ್ಲವನ್ನು ಒಳಗೊಂಡ ವಿಶಾಲ ಭಂಡಾರದಿಂದ ಬೇಕಾದ್ದನ್ನೆಲ್ಲ ಎತ್ತಿ, ಗಾಡಿಯಲ್ಲಿ ಹಾಕಿಕೊಂಡು, ಹೊರಬರಬಹುದು. ಪ್ರತಿಯೊಂದು ವಸ್ತುವಿನ ಗುಣಮಟ್ಟ, ಬೆಲೆ, ತಯಾರಿಸಿದ ಕಂಪೆನಿಯ ಹೆಸರು–ಮುಂತಾದ ಎಲ್ಲ ವಿವರ ಸ್ಪಷ್ಟವಾಗಿ ಆಯಾ ವಸ್ತುಗಳ ಮೇಲೆ ಮುದ್ರಿತವಾಗಿರುತ್ತವೆ.

ಆ ಬಹಿರ್ದ್ವಾರದಲ್ಲಿ ಗೆಳತಿಯೊಬ್ಬಳು, ನಮ್ಮ ಗಾಡಿಯ ಕಟ್ಟುಗಳನ್ನೆಲ್ಲ ಸುಂದರ ದಪ್ಪ ಕಾಗದದ ಚೀಲಗಳಲ್ಲಿ ಹಾಕಿ ಮುಂದಿಡುತ್ತಾಳೆ. ಹಾಗೆ ಒಂದೊಂದಾಗಿ ಸಾಮಗ್ರಿಗಳ ಕಟ್ಟನ್ನು ಅಲ್ಲಿರುವ ಮೇಜಿನ ಮೇಲಿಂದ ಹಾಯ್ದು ಹೊರಗಿಡುವಾಗ ತನ್ನಷ್ಟಕ್ಕೇ, ಕಂಪ್ಯೂಟರ್ ಮೂಲಕ ನಾವು

ಕೊಂಡ ವಸ್ತುವಿನ ಬೆಲೆ ಅಲ್ಲಿ ಮುದ್ರಿತವಾಗುತ್ತದೆ. ಕೊನೆಗೆ ಕ್ರೋಢೀಕೃತವಾಗಿ ಆ ಬೆಲೆ ಪಟ್ಟಿ ನಮ್ಮ ಕಣ್ಣ ಮುಂದೆ ತೋರುತ್ತದೆ. ನಾವಿತ್ತ ದುಡ್ಡನ್ನು ಪಡೆದು ಉಳಿದ ಚಿಲ್ರೆ ಹಣವನ್ನು ಆ ಕಂಪ್ಯೂಟರ್ ನಮಗೊದಗಿಸುತ್ತದೆ. ಮತ್ತೆ, ಆ ಸಾಮಗ್ರಿಗಳ ಚೀಲ ಹೊತ್ತ ಕೈಗಾಡಿಯನ್ನು ಕಾರಿನವರೆಗೆ ನಾವೇ ದೂಡಿಕೊಂಡು ಬಂದು ಚೀಲಗಳನ್ನು ಕಾರಿಗೆ ವರ್ಗಾಯಿಸಿ ನಾವು ಹೊರಟು ಹೋಗಬೇಕು. ಇದು ಅಲ್ಲಿಯ ವ್ಯಾಪಾರದ ರೀತಿ.

ನಮ್ಮ ಭಾರತದ ರೀತಿಯಾದರೆ ಇಂತಹ ದೊಡ್ಡ ಅಂಗಡಿಗಳಲ್ಲಿ ೨೦–೩೦ ಜನರಾದರೂ ಕೆಲಸಕ್ಕಿರಬೇಕು. ಆದರೆ ಇಲ್ಲಿ ೮-೧೦ ಮಂದಿ ಮಹಿಳೆಯರು ಎಲ್ಲ ವ್ಯವಸ್ಥೆಯನ್ನು ನೋಡಿಕೊಳ್ಳುತ್ತಾರೆ. ಚೊಕ್ಕವಾದ ಕೆಲಸ ಮಾಡಿಕೊಟ್ಟು 'Thank you' ಎಂದು ಧನ್ಯವಾದ ಹೇಳಿ ನಗು ಮೊಗದಿಂದ ಕಳಿಸಿಕೊಡುತ್ತಾರೆ. ಕಾಯುವ ಕೆಲಸ ನಮಗೆ ಯಾವ ಸಂದರ್ಭದಲ್ಲಿಯೂ ಬರುವುದಿಲ್ಲ.

ಹಾಗೆಯೇ, ಹಣಕ್ಕಾಗಿ ನಾವು ಬ್ಯಾಂಕಿಗೆ ಹೋದರೂ ಬ್ಯಾಂಕಿನ ಮುಖವಾಡದಲ್ಲಿ ಒಂದು ಸಣ್ಣ ಕಿಂಡಿ ಇದೆ. ಕಾರಿಂದಿಳಿಯದೇ ನಾವು ಬ್ಯಾಂಕಿನಿಂದ ಹಣ ಪಡೆದು ಕೆಲವೇ ನಿಮಿಷಗಳಲ್ಲಿ ಹೊರಡಬಹುದು. ನಮ್ಮ ಬ್ಯಾಂಕ್ ಅಕೌಂಟಿನ ನಂಬರನ್ನು ಆ ಕಿಂಡಿಯಲ್ಲಿರುವ ಗುಂಡಿಗಳಲ್ಲೊತ್ತಿ, ಬಳಿಕ ನಮಗೆ ಬೇಕಿದ್ದ ಹಣವನ್ನು–ನೂರೋ, ಇನ್ನೂರೊ ಡಾಲರ್—ಎಂಬುದನ್ನೊತ್ತಿದರೆ, ಅಷ್ಟು ಮೊತ್ತದ ಹಣ, ಸ್ವಯಂಚಾಲಿತ ಯಂತ್ರದ ಮೂಲಕ ಹೊರಬರುತ್ತದೆ. ನಮ್ಮಲ್ಲಿಯ ದೊಡ್ಡ ಬಸ್ ನಿಲ್ದಾಣದಲ್ಲಿ ೧೦ ಪೈಸೆ ಹಾಕಿದೊಡನೆ, ನಮ್ಮ ತೂಕದ ಚೀಟಿ ಕೊಡುವ ಯಂತ್ರಗಳಂತಿರುವ ದೊಡ್ಡ ಯಂತ್ರಗಳಿಂದ ಈ ಕೆಲಸಗಳೆಲ್ಲ ನಡೆಯುತ್ತವೆ. ನಮ್ಮ ಖಾತೆಯಲ್ಲಿ ಎಷ್ಟು ಹಣ ಮೊದಲಿತ್ತು? ಈಗ ಎಷ್ಟಿದೆ?—ಎಂಬುದನ್ನೂ ಆ ಯಂತ್ರ ಒದಗಿಸುತ್ತದೆ. ಹೀಗೆ ಬ್ಯಾಂಕಿನ ಒಳಹೋಗದೆಯೇ ಹಣ ಪಡೆದು ಬರಬಹುದು. ಅಥವಾ ಒಳಹೋದರೂ ಕೆಲವೇ ನಿಮಿಷಗಳಲ್ಲಿ ನಮ್ಮ ಹಣದ ಲೆಖ್ಖಾಚಾರ ಮುಗಿಸಿ ಹೊರಡಬಹುದು. ಬ್ಯಾಂಕಿನೊಳಗೆ ಕೆಲಸ ನಿರ್ವಹಿಸುವ ಬಹುಮಂದಿ–ಮಹಿಳೆಯರು.

ದಾರಿಯಲ್ಲಿ ಕಾಫಿ, ಟೀ, ಹಣ್ಣಿನ ರಸ—ಮುಂತಾದುವು ಬೇಕಿದ್ದರೂ ಬಹು ಸುಲಭ. ಅಲ್ಲಲ್ಲಿ ದೊರಕುವ ಮಾನವ ರಹಿತ ಸ್ವಯಂಚಾಲಿತ ಯಂತ್ರಗಳ ಮೂಲಕ ಬೇಕಿದ್ದ ಹಣ ಹಾಕಿ, ಗುಂಡಿಒತ್ತಿ–ಕಾಫಿ, ಟೀ ಮುಂತಾದುವನ್ನು ಪಡೆದು ಕುಡಿಯಬಹುದು. ಹೀಗೆ ಹೆಚ್ಚಿನ ಕೆಲಸಗಳೆಲ್ಲ ಮಾನವ ಹಸ್ತವಿಲ್ಲದ

ಯಂತ್ರಗಳ ಮೂಲಕ ನಡೆಯುವುದನ್ನು ನೋಡಿ, ನಮಗೆ ವಿಸ್ಮಯವೇ ವಿಸ್ಮಯ !

ಹೀಗೆ ನಾವು ಸಹ ಅಲ್ಲಿಯ ಅಂಗಡಿಗಳ, ಬ್ಯಾಂಕುಗಳ, ಜನರ ಪರಿಚಯ ಮಾಡಿಕೊಂಡೆವು. ಬೇಕಿದ್ದ ಕೆಲವಸ್ತುಗಳನ್ನೂ ಕೊಂಡುಕೊಂಡೆವು.

ಆ ಊರಿನಲ್ಲಿ ಸುಮಾರು ನೂರು ಭಾರತೀಯ ಕುಟುಂಬದವರಿದ್ದಾರೆ. ಹೆಚ್ಚಿನವರು ಉತ್ತಮ ಹುದ್ದೆಗಳಲ್ಲಿದ್ದು ಸುಖ ಜೀವನ ನಡೆಸುತ್ತಿದ್ದಾರೆ. ಆಗಾಗ್ಗೆ ಅವರೆಲ್ಲ ಯಾರಾದರೊಬ್ಬರ ಮನೆಯಲ್ಲಿ ಭೋಜನ ಕೂಟದಲ್ಲಿ ಸೇರುತ್ತಾರೆ. ಪರಸ್ಪರ ವಿಚಾರ ವಿನಿಮಯ ಮಾಡಿಕೊಳ್ಳುತ್ತಾರೆ. ಭಾರತದ ರಾಜಕೀಯ, ಸಾಮಾಜಿಕ ಸಮಸ್ಯೆಗಳ ವಿಚಾರದಲ್ಲಿ ಚರ್ಚಿಸುತ್ತಾರೆ. ಪರಸ್ಪರ ಸ್ನೇಹ ಸಂಬಂಧ ಬೆಳೆಸಿಕೊಳ್ಳುತ್ತಾರೆ.

ಅಂತಹ ಎರಡು ಮೂರು 'ಪಾರ್ಟಿ'ಗಳಲ್ಲಿ ನಾವು ಭಾಗವಹಿಸಿದೆವು. ಹತ್ತಾರು ಕನ್ನಡಿಗ ಕುಟುಂಬದವರೂ ಅಲ್ಲಿದ್ದಾರೆ. ಹೆಚ್ಚಿನವರು ಸುಖ ಸಂತೋಷದಿಂದ ಇದ್ದಾರೆ.

ಏನೇ ಇರಲಿ. ಅಮೆರಿಕಾ ಮೊದಲ ನೋಟಕ್ಕೆ ಚೆನ್ನಾಗಿ ತೋರಿತು. ಎಲ್ಲ ತರದ ಜನರೂ ಸ್ವತಂತ್ರ ಸಂತಸಮಯ ಜೀವನ ನಡೆಸುತ್ತಿರುವುದನ್ನು ನಾವರಿತುಕೊಂಡೆವು. ಬಂದುದು ಸಾರ್ಥಕವಾಯಿತೆಂದು ಹೇಳಿಕೊಂಡೆವು.

೬. ನಾವು ನೋಡಿದ ಅಮೆರಿಕಾ ಮಹಾ ನಗರಗಳು

ನಯಾಗರಾ : ಅಮೆರಿಕಾ ನೋಡಿ ಬಂದೆ–ಎಂದಾಗ ಹೆಚ್ಚಿನವರು ಕೇಳುವ ಪ್ರಶ್ನೆ ನಯಾಗರಾ ಜಲಪಾತ ನೋಡಿಬಂದಿರಾ–ಎಂಬುದು. ಅದಕ್ಕೆ ಕಾರಣ ಇಲ್ಲದಿಲ್ಲ. ಪ್ರಪಂಚದಲ್ಲೇ ಅತಿದೊಡ್ಡದಾದ ಹಾಗೂ ಸುಂದರವಾದ ಜಲಪಾತ ಅದಾಗಿದೆ. ಜಗತ್ತಿನ ಏಳು ಅದ್ಭುತಗಳಲ್ಲಿ ಅದು ಒಂದಾಗಿದೆ. ನಾವಿರುವ ಬಿಂಘ್ಯಾಂಟನ್ನಿನಿಂದ ಸಾಮಾನ್ಯ ೨೦೦ ಮೈಲು ದೂರವಿರುವ ಮಹಾನಗರ ಬಫೆಲೋ. ಅಲ್ಲಿಂದ ೧೫ ಮೈಲು ದೂರದಲ್ಲಿ ನಯಾಗರಾ ಜಲಪಾತವಿರುವುದು. ಅದು ಅಮೆರಿಕಾ, ಕೆನಡಾ ದೇಶಗಳು ಒಂದುಗೂಡುವ ಸಂಧಿಯಲ್ಲಿದೆ. ಜಲಪಾತದ ಒಂದೆಡೆ ಅಮೆರಿಕಾ ಆದರೆ ಇನ್ನೊಂದೆಡೆ ಕೆನಡಾ ದೇಶವಾಗಿದೆ. ಇದರ ಅದ್ಭುತ ಸೌಂದರ್ಯ ವಿಚಾರ ನಾವು ಸಹ ಓದಿ ಸ್ವಲ್ಪ ತಿಳಿದಿದ್ದೆವು.

ಹಾಗಾಗಿ ಒಂದು ವಾರಾಂತ್ಯ ಮಗ ಸುಧಾಕರನು ನಮ್ಮನ್ನು ಕಾರಲ್ಲಿ ಅಲ್ಲಿಗೆ ಕರೆದೊಯ್ದನು. ಅವನು ಸ್ವತಃ ಶಸ್ತ್ರಚಿಕಿತ್ಸಕನಾದ್ದರಿಂದ, ವಾರದ

ದಿನಗಳಲ್ಲಿ ಹೊರಟರೆ ಅವನ ಕೆಲಸಕ್ಕೆ ಅಡ್ಡಿಯಾಗುವುದು. ಆದರಿಂದಾಗಿ ಅವನು ವಾರಾಂತ್ಯದಲ್ಲೇ ಬೇರೆಬೇರೆಡೆ ನಮ್ಮನ್ನು ಸುತ್ತಾಡಿಸುತ್ತಿದ್ದನು.

ಈ ನಡುವೆ ನಮ್ಮ ಮಗಳು ಸುಮನಾ ಸಹ ತನ್ನಿಬ್ಬರು ಮಕ್ಕಳು–ವಿನಯ, ವಿವೇಕರೊಂದಿಗೆ ಅಮೆರಿಕಾ ಸಂದರ್ಶನಾರ್ಥವಾಗಿ ನಮ್ಮೊಡನೆ ಸೇರಿದಳು. ಅವಳ ಗಂಡ ರಾಮಮೂರ್ತಿ ತಮ್ಮ ಕಂಪೆನಿಯ ಕೆಲಸದ ಮೇಲೆ ಲಂಡನ್‌ವರೆಗೆ ಬಂದಿದ್ದರು. ಅವರು ಕೋಟಾದ (ರಾಜಸ್ಥಾನ) ಇನ್ಸ್ಟ್ರುಮೆಂಟೇಶನ್ ಲಿಮಿಟೆಡ್ ಕಂಪೆನಿಯಲ್ಲಿ ಡೆಪ್ಯುಟಿ ಜನರಲ್ ಮ್ಯಾನೇಜರ್ ಹುದ್ದೆಯಲ್ಲಿದ್ದಾರೆ. ಗಂಡನೊಡಗೂಡಿ ಲಂಡನ್ ತನಕ ಬಂದ ಮಗಳು, ಮೊಮ್ಮಕ್ಕಳು, ನಾವು ಸಹ ಇದ್ದುದರಿಂದ ಅಮೆರಿಕಾ ಸಂದರ್ಶನಕ್ಕಾಗಿ, ಅಲ್ಲಿ ಬಂದು ಸೇರಿದರು. ಅಳಿಯನಿಗೆ ಬಿಡುವಿಲ್ಲದ್ದರಿಂದಲೂ ಈ ಹಿಂದೆ ಅಮೆರಿಕಾ ನೋಡಿದ್ದರಿಂದಲೂ ಡೆಲ್ಲಿಗವರು ಹಿಂದಿರುಗಿದರು. ಹಾಗಾಗಿ ನಮ್ಮ ಅಮೆರಿಕಾದ ಮಹಾನಗರಗಳ ಸಂದರ್ಶನ, ಮಕ್ಕಳು ಸೇರಿ ೮-೯ ಮಂದಿ ಇರುವ ಮಹಾ ಸಂಸಾರದೊಡನೆಯೇ ನಡೆಯಿತು. ಆರ್ಥಿಕವಾಗಿ ಮಗ ಸುಸ್ಥಿತಿಯಲ್ಲಿದ್ದಾನಾದ್ದರಿಂದ ಈ ವೆಚ್ಚಗಳೆಲ್ಲ ಅವನಿಗೆ ದೊಡ್ಡದಾಗಿ ತೋರಲೂ ಇಲ್ಲ.

ಹೀಗೆ ಒಂದು ಶುಕ್ರವಾರ ಬೆಳಗ್ಗೆ ಹೊರಟು ಬಫೆಲೋ ಮಹಾನಗರ ಸೇರಿದೆವು. ಎಲ್ಲೆಡೆಯಂತೆ ಸುಂದರ ನೇರ ರಸ್ತೆಗಳಾದ್ದರಿಂದ ಮೂರು ಘಂಟೆಗಳ ಪ್ರಯಾಣ ಯಾವ ಆಯಾಸವನ್ನೂ ನಮಗುಂಟು ಮಾಡಲಿಲ್ಲ. ಮಹಾಮಾರ್ಗಗಳು, ಕವಲು ಮಾರ್ಗಗಳು, ಕೆಳಕ್ಕಿಳಿಯುವ–ಮೇಲಕ್ಕೇರುವ ಮಾರ್ಗಗಳು (Under bridge & over bridge)—ಈ ಸಂಕರದಲ್ಲಿ ನಾವು ಹೋಗಬೇಕಾದ ಮಾರ್ಗ ಕಂಡುಹಿಡಿಯುವುದೂ ಸುಲಭದ ಕೆಲಸವಲ್ಲ. ಅಲ್ಲಲ್ಲಿ ಮಾರ್ಗಸೂಚೀ ಮಹಾಫಲಕಗಳು ಇವೆ. ಆದರೂ ವೇಗವಾಗಿ ಹೋಗುವಾಗ ಸರಿಯಾದ ಮಾರ್ಗದಲ್ಲೇ ಸಾಗಬೇಕು. ಅದಕ್ಕಾಗಿ ತುಂಬ ಎಚ್ಚರಿಕೆಯಿಂದಿರಬೇಕು. ದಾರಿ ತಪ್ಪಿತೆಂದು ತೋರಿದರೆ ಕೂಡಲೇ ಹಿಂದೆ ತಿರುಗುವಂತಿಲ್ಲ. ದೂರ-ಮುಂದೆ ಸಾಗಿ ಅದಕ್ಕೆ ನಿಶ್ಚಿತವಾದ ಸ್ಥಳದಲ್ಲೇ ಹಿಂದೆ ತಿರುಗಿಸಬೇಕು.

ಇದಲ್ಲದೆ ಮಾರ್ಗದರ್ಶಿಕೆಗಳೂ (Road Maps) ಈ ವಿಚಾರದಲ್ಲಿ ನಮಗೆ ಸಹಾಯಕ್ಕೆಯುತ್ತವೆ. ಮಗರಾಯ ಕಾರು ನಡೆಸುತ್ತಿದ್ದರೆ ನಾನು ಮಾರ್ಗದರ್ಶಿಕೆ ನೋಡಿಕೊಂಡು ದಿಗ್ದರ್ಶನ ಕೊಡುತ್ತಿದ್ದೆ. ಅಂತು ಸಕಾಲದಲ್ಲಿ ಬಫೆಲೋ ಸೇರಿದೆವು.

ನಯಾಗರಾ ಜಲಪಾತದ ಪ್ರಮುಖ ಭಾಗವಿರುವುದು ಕೆನಡಾ ದೇಶದೊಳಗೆ.

ಹಾಗಾಗಿ, ಜಲಪಾತದ ಸಂಪೂರ್ಣ ಸಂದರ್ಶನವಾಗಬೇಕಾದರೆ ಕೆನಡಾ ಸರ್ಕಾರದ ಅನುಮತಿ ಪತ್ರ–'ವೀಸಾ' ಬೇಕು. ಅದಕ್ಕಾಗಿ ಬಫೆಲೋ ನಗರ ದಲ್ಲಿರುವ ಕೆನೆಡಿಯನ್ ರಾಯಭಾರಿ ಕಛೇರಿಗೆ ಹೋದೆವು. ನಲ್ವತ್ತು ಅಂತಸ್ತಿನ ಮೆರೀನ್ ಮಿಡ್ಲಾಂಡ್ ಎಂಬ ಗಗನಚುಂಬಿ ಕಟ್ಟಡದ ೩೫ನೇ ಮಹಡಿಯಲ್ಲಿ ಆ ರಾಯಭಾರಿ ಕಛೇರಿ ಇದೆ. ಒಂದು ವಾರದ ಮಟ್ಟಿಗೆ ಕೆನಡಾ ದೇಶ ಸಂದರ್ಶಿ ಸಲು ಅನುಮತಿ ಕೊಡಬೇಕೆಂದು ನಾವು ಪ್ರಾರ್ಥಿಸಿಕೊಂಡೆವು. ನಮ್ಮ ವಿಚಾರಣೆ ನಡೆದು, ನಾವು ಪರಿಶುದ್ಧ ಯಾತ್ರಾರ್ಥಿಗಳೆಂದು ಖಚಿತವಾದ ಮೇಲೆ ನಮಗೆ ಅನುಮತಿ ಪತ್ರ ಕೊಟ್ಟರು. ಅಂದರೆ, ಕೆನಡಾದವರಿಗೆ ಅನಧಿಕೃತ ವಲಸೆಗಾರರ ಭಯ ಬಹಳವಾಗಿದೆ. ಈಗಾಗಲೇ ಸುಮಾರು ೫೦,೦೦೦ಕ್ಕೂ ಮಿಕ್ಕಿದ ವಿದೇಶೀಯರು ಕೆನಡಾದಲ್ಲಿ ಅನಧಿಕೃತವಾಗಿದ್ದು ತಲೆನೋವು ತರುತ್ತಿರುವರಂತೆ. ಅದರಲ್ಲಿ ಭಾರತೀಯರೂ ಸಾಕಷ್ಟಿದ್ದಾರೆ. ಹಾಗಾಗಿ ಎಲ್ಲ ಯಾತ್ರಿಕರ ವಿಚಾರದಲ್ಲೂ ಅವರು ಸಂಶಯ ತೋರುವುದು ಸ್ವಾಭಾವಿಕ.

ಅಂತೂ ವೀಸಾ ಪಡೆದು ಮತ್ತೆ ಸಾಮಾನ್ಯ ಅರ್ಧ ಗಂಟೆಯ ಕಾರು ಪ್ರಯಾಣ ಮುಗಿಸಿ ಸಂಧ್ಯಾಕಾಲದಲ್ಲಿ ನಯಾಗರಾ ಸೇರಿದೆವು. ಆ ನಗರ ಬಹು ದೊಡ್ಡ ಪ್ರವಾಸಿಗಳ ಆಕರ್ಷಕ ಕೇಂದ್ರ. ಹಲವಾರು ದೊಡ್ಡ ದೊಡ್ಡ ಹೋಟೆಲುಗಳಿವೆ. ನಾವು ಮೊದಲೇ ಏರ್ಪಡಿಸಿದ್ದಂತೆ 'ಹೋಟೆಲ್ ಹಾವರ್ಡ್ ಜಾನ್ಸನ್'ನಲ್ಲಿ ಹೋಗಿ ಇಳಿದೆವು. ಅಲ್ಲಿ ಕಿಟಕಿಗಳ ಮೂಲಕವೂ ಜಲಪಾತ ನೋಡಲು ಅನುಕೂಲವಿದೆ.

ವೇಷ ಬದಲಾಯಿಸಿ ಜಲಪಾತದ ಸಂಧ್ಯಾ ಸೌಂದರ್ಯ ನೋಡಹೊರಟೆವು. ಅಷ್ಟರಲ್ಲಿ ಬಣ್ಣಬಣ್ಣದ ದೀಪಗಳ ಮಹಾಪ್ರಭೆಯನ್ನೂ ಆ ಭಯಂಕರ ಜಲಪಾತದ ಮೇಲೆ ಬೀರತೊಡಗಿದರು. ಮೊದಲು ಬಿಳಿದಾದ ಕ್ಷೀರಸಾಗರ ಪಾತವಾದರೆ, ಈಗ ಬಣ್ಣಬಣ್ಣದ ಜಲಪಾತ! ಆ ಕಾಮನಬಿಲ್ಲಿನ ಸೊಬಗನ್ನು ಕಂಡಾಗ ಕಪಿಯೂ ಕವಿಯಾಗಿ ಹಾಡುವಂತಾಗಬೇಕು. ದೊಡ್ಡದೊಡ್ಡ ನಾಲ್ಕು ವಿಶಾಲ ಸರೋವರಗಳಿಂದ ಹೊರಟು ಸೇರಿದ ಬಹುರಭಸದ ಅಪಾರ ಜಲರಾಶಿ ಒಂದೇಸಮನೆ ಭೋರ್ಗರೆಯುತ್ತ ಹಾರುತ್ತದೆ. ೨,೬೦೦ ಅಡಿಗಳಷ್ಟು ವಿಶಾಲವಾದ ಬಂಡೆಗಳ ಮೇಲಿಂದ, ಮಿನಿಟಿಗೆ ೩೩·೫ ಮಿಲಿಯ ಗೆಲನ್ ಗಳಷ್ಟು ಜಲರಾಶಿ ೧೯೦ ಅಡಿ ಆಳದ ಬಂಡೆಗಳ ರಾಶಿಗೆ ಧುಮುಕುತ್ತದೆ. ಆಗ ಒದಗುವ ಘೋರ ಗರ್ಜನೆ, ಅಲ್ಲಿಂದೇಳುವ ತುಂತುರು ಮಳೆ, ಅದರಿಂದಾ

ಗುವ ಚರ್ಮಕುಕ್ಕುವ ಚಳಿ,-ಒಂದೊಂದೂ ಹೊಸಹೊಸ ಅನುಭವ ಒದಗಿಸುತ್ತಿದ್ದುವು. ಕುದುರೆಯ ಗೊರಸಿನಾಕಾರದ ಆ ಅತ್ಯದ್ಭುತ ಜಲಪಾತ ನೋಡುತ್ತಿದ್ದಂತೆಯೇ ಪ್ರಕೃತಿ ದೇವಿಯ ಮಹಾತ್ಮೆಗೆ ಮರುಳಾಗಿ ಪರವಶರಾಗಿ ಹೋಗುತ್ತೇವೆ. ಈ ಅದ್ಭುತದ ಸೊಗಸು ಕೆನಡಾ ಭಾಗದ ಜಲಪಾತದ್ದಾದರೆ, ಅದಕ್ಕೆ ಒಂದೆರಡು ಫರ್ಲಾಂಗ್ ದೂರದಲ್ಲಿ ಸೌಮ್ಯಾಕಾರದ, ಅಮೆರಿಕಾ ಭಾಗದ ೧,೪೦೦ ಅಡಿ ವಿಶಾಲವಾದ ಜಲಪಾತವನ್ನು ಕಾಣಬಹುದು. ಹಿಂದಿನದರಲ್ಲಿ ಭಯಂಕರತೆಯಾದರೆ ಇಲ್ಲಿ ಸೌಮ್ಯತೆಯನ್ನು ನೋಡಬಹುದು.

ಅಂತು ಈ ಜಲಪಾತಗಳೆರಡೂ ಮರೆಯಲಾಗದ ವಿಸ್ಮಯಗಳಾಗಿ ನಮ್ಮ ಮನಸ್ಸಿನಲ್ಲಿ ಉಳಿಯುವಂತಾಯಿತು.

ಇಷ್ಟಾಗುವಾಗ ಕತ್ತಲೂ ಕವಿಯಿತು. ಛಳಿಯೂ ಜೋರಾಯಿತು. ನಮಗೂ ಮಾರ್ಗಾಯಾಸವಾಗಿತ್ತು. ಉಳಿದುದನ್ನು ಮರುದಿನ ಬೆಳಿಗ್ಗೆ ಕಾಣಬಹುದೆಂದು ಹೋಟೆಲಿಗೆ ಹೋಗಿ ಊಟ, ವಿಶ್ರಾಂತಿ ಪಡೆದೆವು. ಹೋಟೆಲ್ ಕೋಣೆಗಳು ಚೊಕ್ಕವಾಗಿ ಸುಸಂಪನ್ನವಾಗಿದ್ದುವು. ದಿನಕ್ಕೆ ೭೫ ಡಾಲರ್ ಬಾಡಿಗೆ. ನಮ್ಮ ಎರಡು ಕೋಣೆಗಳಿಗೆ ದಿನಕ್ಕೆ ೧೫೦ ಡಾಲರ್ ಅಥವಾ ರೂ. ೧,೫೦೦ ಎಂದಾಗ ಮೈಬೆಚ್ಚಗಾಗಿ ಹಿಡಿದ ಛಳಿ ಒಮ್ಮೆ ದೂರವಾಯಿತು. ಊಟ, ಉಪಚಾರಗಳ ವೆಚ್ಚ ಬೇರೆಯೇ ಕೊಡಬೇಕು.

ಮರುದಿನ ಬೆಳಿಗ್ಗೆ ಪ್ರವಾಸೀ ಜನರನ್ನು ಪ್ರೇಕ್ಷಣೀಯ ಸ್ಥಳಗಳಿಗೆ ಕರೆದೊಯ್ಯುವ ಬಸ್ಸಿನ ಮೂಲಕ ನಗರ ಸಂದರ್ಶನ, ಜಲಪಾತ ಸಂದರ್ಶನ—ಮುಂತಾದುವನ್ನು ನಡೆಸಹೊರಟೆವು. ಅಲ್ಲಿಯ ಸುಪ್ರಸಿದ್ಧ ಚರ್ಚ್, ನಾನಾ ತರದ ಉದ್ಯಾನಗಳು, ಅದ್ಭುತ ಸೇತುವೆಗಳು, ಪುಷ್ಪರಚಿತ ಗಡಿಯಾರ (Floral clock), ಜಲಪಾತದಡಿಯ ನೌಕಾಸಂಚಾರ—ಮುಂತಾದ ರೋಮಾಂಚಕ ಸ್ಥಳಗಳನ್ನು ನೋಡಿ 'ಭಯಂಕರ' ಆನಂದವನ್ನನುಭವಿಸಿದೆವು. ಸುರಂಗ ಮಾರ್ಗದ ಮೂಲಕ ಹೋಗಿ ಜಲಪಾತದ ಮೂಲವನ್ನೂ ಸಂದರ್ಶಿಸಿದೆವು. ಕೊನೆಗೆ ಸುಮಾರು ೭೭೫ ಅಡಿಗಳಷ್ಟು ಎತ್ತರದ 'ಸ್ಕೈ-ಲಾನ್' (Sky-lon) ಟವರ್ ಮೇಲೇರಿ ಅಲ್ಲಿಂದ ಸುತ್ತಣ ನಗರ ಹಾಗೂ ವಿಶಾಲ ಸುಂದರ ಭೂಭಾಗಗಳನ್ನು ನೋಡಿ ಆನಂದಿಸಿದೆವು. ಕೆಲವು ನೆನಪಿನ ಕಾಣಿಕೆಗಳನ್ನು ಕೊಂಡು ಮಧ್ಯಾಹ್ನ ಎರಡು ಘಂಟೆಯ ವೇಳೆ ಊಟ ವಿಶ್ರಾಂತಿಗಾಗಿ ಹೋಟೆಲ್ ಸೇರಿದೆವು.

ಟೊರೆಂಟೋ: ಆರಾಮವಿರಾಮಗಳಾದ ಮೇಲೆ, ಕೆನಡಾದ ಅತಿ ದೊಡ್ಡ

ನಗರಗಳಲ್ಲೊಂದಾದ ಟೊರೆಂಟೋ–ನೋಡುವುದಕ್ಕಾಗಿ ಹೊರಟೆವು. ನಾವು ಹೋಗಬೇಕಿದ್ದ ಎಂಭತ್ತು ಮೈಲು ದೂರದ ವಿಶಾಲ ರಸ್ತೆ ಸದಾ ಕಾರುಮಯ ವಾಗಿ ಕಾಣುತ್ತಿತ್ತು. ಒಂದರ ಹಿಂದೊಂದು ವೇಗವಾಗಿ ಸಾಗುವ ಕಾರುಗಳ ಹತ್ತಾರು ಸಾಲುಗಳು ಆಕರ್ಷಕವಾಗಿದ್ದುವು. ಆ ಮಹಾ ನಗರದ ಕೇಂದ್ರ ಭಾಗಕ್ಕೆ ಸೇರುವುದೆಂದರೆ—ಮಹಾಭಾರತ ಯುದ್ಧದಲ್ಲಿ ಬರುವ ಚಕ್ರವ್ಯೂಹ ಕೋಟೆಯ ನಡುವನ್ನು ಸೇರಿದಂತೆಯೇ. ಅಲ್ಲಿ ನಾವಿರುವುದಕ್ಕೆ ಸ್ಥಳ ರಿಸರ್ವ್ ಮಾಡಿಟ್ಟಿದ್ದ ಹೋಟೆಲ್ ಶೆರ್ಟನ್ ಸೇರಬೇಕಾದರೆ ತಕ್ಕಮಟ್ಟಿಗೆ ಸಾಕು ಸಾಕಾಗಿಹೋಯಿತು. ಆ ಮಹಾ ಹೋಟೆಲ್ ಶೆರ್ಟನಿನ ೩೫ ನೆಯ ಮಹಡಿ ಯಲ್ಲಿ ಎರಡು ವಿಶಾಲ ಕೋಣೆಗಳು ನಮಗಾಗಿ ಸಿದ್ಧವಾಗಿದ್ದುವು. ಸಾವಿರಕ್ಕೂ ಮಿಕ್ಕ ಕೋಣೆಗಳು ಆ ಹೋಟೆಲಲ್ಲಿ ಇದ್ದರೂ ಸ್ಥಳ ಸಿಗುವುದು ಅಲ್ಲಿ ಕಷ್ಟವಂತೆ.

ನಾವಿರುವ ಆ ಕೋಣೆಗಳ ವೈಭವ, ಆ ಹಾಸಿಗೆಗಳು, ಸ್ನಾನಗೃಹಗಳು, ಸುಖಾಸನಗಳು, ಟಿ.ವಿ., ರೇಡಿಯೋ, ಫೋನ್, ಫ್ರಿಜ್–ಮುಂತಾದ ಸಲಕರಣೆ ಗಳು ಬಹು ಮೋಜಿನವಾಗಿದ್ದುವು. ಅದೊಂದು ಪಂಚತಾರಾ ಹೋಟೆಲ್ಲಾದ್ದ ರಿಂದ ದಿನಕ್ಕೆ ಕೋಣೆಯೊಂದಕ್ಕೆ ನೂರು ಡಾಲರುಗಳ ಬಾಡಿಗೆ. ಕೋಣೆ ಯೊಂದರಲ್ಲಿ ಎರಡಕ್ಕಿಂತ ಹೆಚ್ಚು ಜನರಿರುವಂತಿಲ್ಲ. ಮಕ್ಕಳಿಗೆ ಮಾತ್ರ ವಿನಾಯಿತಿ ಇತ್ತು.

ಆ ನಗರದಲ್ಲಿ ಸಾಕಷ್ಟು ಭಾರತೀಯ ಪ್ರಜೆಗಳೂ ಇದ್ದಾರೆ. ಆದ್ದರಿಂದ ಒಂದು ಮಹಾ ರಸ್ತೆಯ ಕೊನೆಯ ಭಾಗದಲ್ಲಿ ಭಾರತೀಯರ–ಅಂಗಡಿ, ರೆಸ್ಟೋರೆಂಟ್, ಸಿನೆಮಾ ಗೃಹ–ಮುಂತಾದುವೆಲ್ಲ ಒಳ್ಳೆಯ ಲಾಭದಾಯಕ ವ್ಯಾಪಾರ ನಡೆಸುತ್ತಿದ್ದುವು. ನಾವೂ ಅಲ್ಲಿ ಹೋಗಿ ಚಪಾತಿ, ಮಸಾಲದೋಸೆ, ತಾಂಬೂಲ—ಇತ್ಯಾದಿಗಳ ರುಚಿಯನ್ನನುಭವಿಸಿದೆವು. ಹಿಂದೀ ಸಿನೆಮಾ 'ತಕ್‌ದೀರ್'–ಸಹ ನೋಡಿ ಆನಂದಿಸಿದೆವು.


ಮರುದಿನ, ನಗರ ಸಂದರ್ಶನ ಮಾಡಿಸುವ ಬಸ್ ಮೂಲಕ ನೋಡಬೇಕಾ ದ್ದನ್ನು ನೋಡ ಹೊರಟೆವು. ದೊಡ್ಡ ದೊಡ್ಡ ಗಗನ ಚುಂಬೀ ಕಟ್ಟಡಗಳು, ಪುರಾತನ ನಿವಾಸಗಳು, ವಿಶ್ವವಿದ್ಯಾಲಯ, ವಸ್ತು ಪ್ರದರ್ಶನಾಲಯ–ಇವನ್ನೆಲ್ಲ ನೋಡಿದೆವು. ಕೊನೆಗೆ ೫೫೦ ಮೀಟರ್ ಎತ್ತರದ ಅತ್ಯದ್ಭುತ ಸಿ. ಯನ್. ಟವರ್ ತುದಿಗೇರಿ ಅಲ್ಲಿಂದ ಇಡೀ ಟೊರೆಂಟೋ ನಗರ ನೋಡಿ ಆನಂದಿಸುವುದೇ ಒಂದು ದೊಡ್ಡ ಅನುಭವವಾಗಿತ್ತು. ಹಾಗೆ ದಿನವಿಡೀ ಸುತ್ತಾಡಿ ನೋಡಿದ ಮೇಲೆ ರಾತ್ರಿ ವಿಶ್ರಮಿಸಿದೆವು. ಮರುದಿನ ಬೆಳಗ್ಗೆ ಅಲ್ಲಿಯ ವಿಶಾಲ ಪುರಭವನದ

ವೈಭವ ನೋಡಿ ವಿಸ್ಮಯಗೊಂಡೆವು. ನಂತರ ಬಿಂಘೂಂಟನ್ನಿನತ್ತ ಪಯಣ ಬೆಳೆಸಿದೆವು.

ರಾತ್ರಿ ಹತ್ತು ಘಂಟೆಗೆ ಮನೆ ಸೇರಿದೆವು. ಹೀಗೆ ಮೂರು ದಿನಗಳ ಸುತ್ತಾಟ, ಸಂದರ್ಶನಗಳೆಲ್ಲ ಅಳಿಸಲಾಗದ ನೆನಪಾಗಿ ಉಳಿಯುವಂತಾಯಿತು. ಮಗನನ್ನು ವಿಚಾರಿಸಿದಾಗ ಸುಮಾರು ೨೦೦೦ ಡಾಲರ್ (೨೦೦೦೦ರೂ.) ಖರ್ಚಾಯಿತೆಂದು ಹೇಳಿದ. ಆಗ ಹವಾ ನಿಯಂತ್ರಿತ ಮನೆಯಲ್ಲೂ ಮೈಬೆವರಿತು. 'ನೀರೊಳಗಿರ್ದುಂ ಬೆಮರ್ತ ನುರಗ ಪತಾಕಂ'—ಎಂಬಂತಾಯಿತು. ಅಷ್ಟರಲ್ಲಿ ಸುಧಾಕರ—ಸೊಂಟದ, ಮುರಿದ ಮೂಳೆ ಸರಿಪಡಿಸುವ ಒಂದು ಕೇಸ್ ದೊರೆತರೆ ಈ ಖರ್ಚು ತುಂಬಿ ಬರುತ್ತದೆ. ಅಂತಹ ಕೇಸುಗಳು ತಿಂಗಳಿಗೆ ಐದಾರಾದರೂ ಬರುವುದು. ಹಾಗಾಗಿ ಇದೊಂದು ದೊಡ್ಡ ವಿಚಾರವಲ್ಲ ಎಂದನು. ಇದು ಅಮೇರಿಕಾ !

(ಮುಂದುವರಿಯುವುದು)

ಪ್ರೊ॥ ಕೆ. ಆರ್. ಉಡುಪ



ಶೀಲವೆಂಬುದು ಅಲುಗದ ಆಧಾರ. ಅದನ್ನು ಹಿಡಿದು ನಿಂತವನನ್ನು ಜಗತ್ತಿನ ಯಾವ ಶಕ್ತಿಯೂ ಅಲ್ಲಾಡಿಸದು,

—ಡಾ॥ ರಾಜೇಂದ್ರಪ್ರಸಾದ್

ದೇಶವು ಆ ದೇಶದಲ್ಲಿ ವಾಸಿಸತಕ್ಕ ಜನರದು. ಅದನ್ನು ಆಳುವ ಸರಕಾರವನ್ನು ತಿದ್ದಲು ಅವರೇ ನಿಜವಾದ ಹಕ್ಕುಳ್ಳವರು.

—ನೇತಾಜಿ

ಗುಣಪಡಿಸಬಹುದಾದ ಅಂಧತ್ವದ ವಿರುದ್ಧ ಡಾ|| ಮೋದಿಯವರ ಸಮರ

"ನನ್ನ ಬದುಕಿನ ಒಂದು ನಿಮಿಷ ಹಳ್ಳಿಯ ಬಡವನೊಬ್ಬ ತನ್ನ ಅಂಧತ್ವದಿಂದ ಮುಕ್ತನಾಗುವಂತೆ ಮಾಡಬಲ್ಲ ಶಕ್ತಿಯನ್ನು ಪಡೆದಿದ್ದಾಗ ನಾನು ಹೇಗೆ ವಿಶ್ರಾಂತಿಯನ್ನು ಪಡೆಯಲಿ?" ಎಂದು ಪ್ರಶ್ನಿಸುತ್ತಾರೆ ನೇತ್ರ ಚಿಕಿತ್ಸಾತಜ್ಞ ಡಾ|| ಮೋದಿ.

ಡಾ|| ಮುರುಗಪ್ಪಾ ಚನ್ನವೀರಪ್ಪಾ ಮೋದಿಯವರು ನಂದಗೋಣ ತಾಲ್ಲೂಕಿನಲ್ಲಿ (ಮಹಾರಾಷ್ಟ್ರದ ನಾಸಿಕ ಜಿಲ್ಲೆ) ಏರ್ಪಡಿಸಿದ್ದ ತಾತ್ಕಾಲಿಕ ನೇತ್ರಚಿಕಿತ್ಸಾ ಶಿಬಿರದಲ್ಲಿ ಎರಡು ಸಾಲುಗಳಲ್ಲಿ ಮಲಗಿದ್ದ ಅಂಧ ರೈತರಿಗೆ ಶಸ್ತ್ರಚಿಕಿತ್ಸೆಯನ್ನು ಮಾಡುತ್ತಿದ್ದರು. ನಾಲ್ವರು ಹೆಂಗಸರನ್ನು ಅಲ್ಲಿನ ಕಿರಿದಾದ ಟೇಬಲ್ಲಿನ ಮೇಲೆ ಮಲಗಿಸಿದ್ದರು. ಅವರ ಬದಿಗೆ ಪ್ಯಾರಾಮೆಡಿಕ್ಸ್ ಅರೇನ್ಜಸ್ಕ್ಯಾಪಲ್ಸ್ ಮತ್ತು ಔಷಧದ ಬಾಟಲಿಗಳು ಇದ್ದವು.

ಇದು ಮೋದಿಯವರ ವಿಶಿಷ್ಟ ತೆರನಾದ ನೇತ್ರಚಿಕಿತ್ಸಾ ಕೇಂದ್ರ. ಸ್ಥಳೀಯ ಸಿಂಹ ಸಂಘ ಒಂದು ಶಾಲೆಯಲ್ಲಿ ಈ ಶಿಬಿರವನ್ನು ಏರ್ಪಡಿಸಿತ್ತು. ಇದಕ್ಕೆ ರೋಗಿಗಳಿಂದ ದೇಣಿಗೆಯನ್ನು ಮಾತ್ರ ಪಡೆದಿದ್ದರು. ಡಾ|| ಮೋದಿ ಇಲ್ಲಿಗೆ ತಮ್ಮ ಚಲಿಸುವ ಆಸ್ಪತ್ರೆಯೊಂದಿಗೆ ಬಂದಿದ್ದರು. ಒಂದು ಬಸ್ಸು ಮತ್ತು ಒಂದು ವ್ಯಾನು, ೧೬ ಜನ ತಜ್ಞ ಸಹಾಯಕರು ಮತ್ತು ೪೧ ಔಷಧದ ಪೆಟ್ಟಿಗೆಗಳು.

ಮೊದಲೇ ಪ್ರಜ್ಞೆ ತಪ್ಪಿಸಿದ್ದ ರೋಗಿಗಳ ಬಳಿ ಡಾ|| ಮೋದಿಯವರು ಬಿಳಿ ಬಟ್ಟೆ ತೊಟ್ಟು, ಬಿಳಿ ಟೊಪ್ಪಿ ಹಾಕಿಕೊಂಡು, ಮುಖಕ್ಕೆ ಬಿಳಿ ಬಟ್ಟೆ ಕಟ್ಟಿಕೊಂಡು ದಾಪುಗಾಲು ಹಾಕುತ್ತಿದ್ದರು. ಅವಳ ಕಣ್ಣಿಗೆ ಪರೆ (ಹೂ ಕೂಡುವುದು ಎಂದೂ ನಾವು ಅನ್ನುತ್ತೇವೆ) ಕಟ್ಟಿದ್ದರಿಂದ ಅವಳಿಗೆ ಕಣ್ಣು ಕಾಣಿಸುತ್ತಿರಲಿಲ್ಲ. ಇದು ವೃದ್ಧಾಪ್ಯದಲ್ಲಿ ಸಾಮಾನ್ಯ ಸಂಗತಿ. ಡಾ|| ಮೋದಿ ಅದನ್ನು ಕ್ಷಣಾರ್ಧದಲ್ಲಿ ಶಸ್ತ್ರಚಿಕಿತ್ಸೆ ಮಾಡಿದರು. ಅವರ ಒಂದು ತೆಳುವಾದ ಚಾಕು ಮತ್ತು ಅನಂತರ ಕಣ್ಣುಗುಡ್ಡೆಯ ಮೇಲೆ ಅದರ ಕೆಲಸ. ಅವರು ನಿಧಾನವಾಗಿ ಆ ಪರೆಯನ್ನು ತಮ್ಮ ಚಿಮ್ಮಟಿಕೆಯಿಂದ ತೆಗೆದರು. ಒಂದು ನಿಮಿಷ ಪೂರ್ಣಗೊಳ್ಳುವ ಪೂರ್ವದಲ್ಲೇ ಅವರು ಅವಳಿಗೆ ಕಣ್ಣು ಕಾಣುವಂತೆ ಮಾಡಿದ್ದರು.

೧೯೮೪ರ ಆಗಸ್ಟ್ ತಿಂಗಳ 'ರೀಡರ್ಸ್ ಡೈಜೆಸ್ಟ್'ನಲ್ಲಿ ಪ್ರಕಟವಾದ ಶ್ರೀ ಅರವಿಂದ ಕಲಾರರ ಲೇಖನದ ಭಾಷಾಂತರ.

ಒಬ್ಬ ನೇತ್ರಚಿಕಿತ್ಸೆ ಮಾಡಿಸಿಕೊಂಡ ಮಹಿಳೆಯ ಕಣ್ಣಿಗೆ ಔಷಧ ಹಾಕಿ, ಕಣ್ಣಿಗೆ ಪಟ್ಟಿ ಕಟ್ಟುವುದರೊಳಗಾಗಿ ಮೋದಿಯವರು ಸಾಮಾನ್ಯವಾಗ ಇನ್ನೊಬ್ಬ ರೋಗಿಗೆ ಚಿಕಿತ್ಸೆಯನ್ನು ಪೂರೈಸಿರುತ್ತಾರೆ. ಮುಂಜಾನೆಯಿಂದ ಅವರ ಎರಡೂ ಕೈಗಳು ಚಲಾಕಿಯಿಂದ ತಡೆರಹಿತವಾಗಿ ಕೆಲಸಮಾಡುತ್ತಲೇ ಇರುತ್ತವೆ. ಕೊನೆಯ ರೋಗಿಯ ಬಳಿ ಅವರು ಹೋದಾಗ ಮಧ್ಯಾಹ್ನ ಒಂದು ಘಂಟೆ. ಅವರ ಸಹಾಯಕ ನನ್ನ ಕಿವಿಯಲ್ಲಿ ಪಿಸುರಿದ "ಇಂದು ಬಹಳ ಕಡಿಮೆ. ಕೇವಲ ೩೦೬."

ಒಂದು ವಾರದ ಅನಂತರ ಮೋದಿ ಶಸ್ತ್ರಚಿಕಿತ್ಸೆ ಪಡೆದ ಪ್ರತಿಯೊಂದೂ ರೋಗಿಯ ಕಣ್ಣಿಗೆ ಕಟ್ಟಿದ್ದ ಹಸಿರು ಪಟ್ಟಿಯನ್ನು ತೆಗೆದಾಗ ಅವರ ಮುಖದಲ್ಲಿ ಮುಗುಳುನಗೆ ಒಡೆದಿರುತ್ತದೆ. ಅವರ ಸಿಬ್ಬಂದಿಯವರಿಗೆ ಹೆಸರಿಗೆ ಮಾತ್ರ ರೂ. ೧೦ನ್ನು ಶುಲ್ಕವನ್ನಾಗಿ ನೀಡಿ ಪಡೆದ ಕನ್ನಡಕದಿಂದ ಪ್ರತಿಯೊಬ್ಬನೂ ಪುನಃ ಜಗತ್ತನ್ನು ನೋಡಬಲ್ಲವನಾಗಿರುತ್ತಾನೆ. ಒಬ್ಬ ಸುಕ್ಕುಗಟ್ಟಿದ ಮುಖದ ಮುದುಕ ನೆಲದ ಮೇಲೆ ಬಿದ್ದು ಮೋದಿಯವರ ಕಾಲನ್ನು ಕೃತಜ್ಞತಾಪೂರ್ವಕವಾಗಿ ಮುಟ್ಟಿ ನಮಸ್ಕರಿಸುತ್ತಾನೆ. ಇನ್ನೊಬ್ಬ ರೋಗಿ ಉದ್ಗಾರ ತೆಗೆಯುತ್ತಾನೆ—"ಐದು ವರ್ಷದ ಹಿಂದೆ ಆಡುತ್ತಿದ್ದಾಗ ನೋಡಿದ ಮೊಮ್ಮಗನನ್ನು ಪುನಹ ನಾನೀಗ ನೋಡಬಲ್ಲೆ !".

ಇಷ್ಟಕ್ಕೆ ರೋಗಿಗಳ ಪಾಲಿನ ಕೆಲಸ ಮುಗಿದಿರುತ್ತದೆ. ಆದರೆ ಮೋದಿ ಮತ್ತು ಅವರ ಸಹಾಯಕರಿಗೆ ಒಂದು ಶಿಬಿರದ ಮುಕ್ತಾಯ ಅಂದರೆ ಇನ್ನೊಂದು ಶಿಬಿರದ ಉದ್ಘಾಟನೆ. ಮೂರು ದಿನಗಳ ನಂತರ ಮೋದಿಯವರ ಚಲಿಸುವ ಆಸ್ಪತ್ರೆ ಇಲ್ಲಿಂದ ೪೩೦ ಕಿ.ಮೀ. ದೂರದಲ್ಲಿರುವ ಸತಾರಾ ಸೇರಿತ್ತು.

ನಲವತ್ತು ವರ್ಷಗಳಿಂದ ನೇತ್ರದ ಶಸ್ತ್ರಚಿಕಿತ್ಸೆಗೇ ತಮ್ಮನ್ನು ಮುಡುಪಾಗಿಟ್ಟುಕೊಂಡ ಮೋದಿ ಏಕಾಂಗ ವೀರನಾಗಿ ಗುಣಪಡಿಸಬಹುದಾದ ಈ ಅಂಧತ್ವದ ವಿರುದ್ಧ ಸಮರವನ್ನು ಸಾರಿದ್ದಾರೆ. ಕರ್ನಾಟಕ, ಕೇರಳ, ತಮಿಳುನಾಡು, ಆಂಧ್ರಪ್ರದೇಶ, ಗುಜರಾತ್ ಮತ್ತು ಮಹಾರಾಷ್ಟ್ರದ ಅನೇಕ ಹಳ್ಳಿಗಳಲ್ಲಿ ಸಂಚರಿಸಿ ಅನೇಕ ಬಡಜನತೆಗೆ ಹೊಸದಾಗಿ ಇವರು ಕಣ್ಣು ನೀಡಿದ್ದಾರೆ. ಇವರು ಹೀಗೆ ಮಾಡದಿದ್ದಲ್ಲಿ ಬಹುಶಃ ಅವರೆಲ್ಲ ಇನ್ನೂ ಅಂಧರಾಗಿಯೇ ಉಳಿಯಬೇಕಾಗುತ್ತಿತ್ತು.

ಮೋದಿ ತಮ್ಮ ೬೬ನೆಯ ವಯಸ್ಸಿನಲ್ಲಿಯೂ ತುಂಬಾ ಚಟುವಟಿಕೆಯಿಂದ, ಜವಾಬ್ದಾರಿಯುತವಾಗಿ ಅಲ್ಲಲ್ಲಿ ಎಡಬಿಡದೆ ಶಿಬಿರಗಳನ್ನು (ಕ್ಯಾಂಪ್) ನಡೆಸು

ತ್ತಿದ್ದಾರೆ. ಇವರು ತಿಂಗಳಿಗೆ ಸಾಮಾನ್ಯವಾಗಿ ಒಂದು ಸಾವಿರ ರೋಗಿಗಳನ್ನು ಗುಣಪಡಿಸುತ್ತಾರೆ.

ತಿರುಪತಿಯ ದೇವಸ್ಥಾನದ ಉತ್ಸವ ಸಂದರ್ಭದಲ್ಲಿ ಇವರು ಒಂದೇ ದಿನದಲ್ಲಿ ೮೩೩ ರೋಗಿಗಳಿಗೆ ಶಸ್ತ್ರಚಿಕಿತ್ಸೆ ನಡೆಸಿದ್ದಾರೆ. ಒಟ್ಟಾರೆ ಇವರು ೨೦೦೦ಕ್ಕೂ ಹೆಚ್ಚು ಶಿಬಿರದಲ್ಲಿ ಭಾಗವಹಿಸಿ ಐದು ಲಕ್ಷಕ್ಕೂ ಹೆಚ್ಚು ನೇತ್ರ ರೋಗಿಗಳಿಗೆ ಶಸ್ತ್ರಚಿಕಿತ್ಸೆ ನಡೆಸಿದ್ದಾರೆ. ಆದರೆ ಆಶ್ಚರ್ಯವೆಂದರೆ ಮೋದಿಯವರಿಗೆ ತಾವಿನ್ನೂ ಸಾಕಷ್ಟು ಮಾಡಿಲ್ಲ ಎಂಬ ಅಸಮಾಧಾನ ಉಂಟು. ವರ್ಷಕ್ಕೆ ಸಹಸ್ರಾರು ಕಿ.ಮೀ. ದೂರವನ್ನಿವರು ಕ್ರಮಿಸುತ್ತಾರೆ. ಹಳ್ಳಿಗಳ ಕೆಸರಿನ ರಸ್ತೆಯನ್ನೂ ಬಿಟ್ಟವರಲ್ಲ. ಇದು ಹಳ್ಳಿಗಾಡಿನವರಿಗೆ ಒಂದು ಸುವರ್ಣಾವಕಾಶ.

ಮನೆಯಿಂದ ಹೊರಗೆ: ಡಾ|| ಮೋದಿಯವರ ವಿಪರೀತ ಕಾರ್ಯಬಾಹುಳ್ಯ ಅವರು ತಮ್ಮ ಕುಟುಂಬದ ಕಡೆ ಲಕ್ಷ್ಯ ಹಾಕಲು ವೇಳೆಯಿಲ್ಲದಂತೆ ಮಾಡಿದೆ. ಅವರ ಮಡದಿ ಲೀಲಾ ತಮ್ಮ ತಂದೆ-ತಾಯಿಯರೊಂದಿಗೆ ಕರ್ನಾಟಕ ರಾಜ್ಯದ ದಾವಣಗೆರೆ ಜಿಲ್ಲೆಯಲ್ಲಿ ವಾಸಿಸುತ್ತಿದ್ದಾರೆ.

ಮೂವತ್ತೈದು ವರ್ಷದ ಅವರ ಮಗ ಅಮರನಾಥ ಕೂಡ ತಂದೆಯವರಂತೆಯೇ ನೇತ್ರಚಿಕಿತ್ಸಾ ತಜ್ಞ. ಇವರು ಕೂಡಾ ಹತ್ತು ಸಾವಿರಕ್ಕಿಂತ ಹೆಚ್ಚು ಜನರಿಗೆ ಶಸ್ತ್ರಚಿಕಿತ್ಸೆಯನ್ನು ನೆರವೇರಿಸಿದ್ದಾರೆ. ಅವರು ತಮ್ಮ ತಂದೆಯ ಶಿಬಿರದಲ್ಲೇ ಕೆಲಸ ಮಾಡುತ್ತಿದ್ದಾಗೊಮ್ಮೆ ಹೇಳಿದ್ದು "ನಮ್ಮ ಅಪ್ಪ ನಮ್ಮೊಂದಿಗೆ ವರ್ಷದಲ್ಲಿ ಕೆಲವೊಂದು ದಿನಗಳನ್ನು ಮಾತ್ರ ಕಳೆದಿದ್ದಾರೆ. ಅದೂ ನಮ್ಮ ಊರಿನ ಹತ್ತಿರವೇ ಅವರ ಶಿಬಿರ ಏರ್ಪಟ್ಟಿದ್ದಾಗ ಮಾತ್ರವೇ ಸರಿ".

ವರ್ಷದಲ್ಲಿ ಒಂದು ತಿಂಗಳ ಮಳೆಗಾಲದಲ್ಲಿ ಹೆಚ್ಚಾಗಿ ಮೋದಿ ತಮ್ಮ ಕೆಲಸವನ್ನು ನಿಲ್ಲಿಸುತ್ತಾರೆ. ಯಾಕೆಂದರೆ ಆ ಕಾಲದಲ್ಲಿ ಹಳ್ಳಿಗಳ ರಸ್ತೆಯಲ್ಲಿ ಹೋಗುವುದು ದುಸ್ಸಾಧ್ಯವಾಗಿರುತ್ತದೆ. ಆಗ ಅವರು ತಮ್ಮ ಸಂಸ್ಥೆಗೆ ದೇಣಿಗೆ ನೀಡುವವರನ್ನು ಅರಸುತ್ತಾ ಅಮೇರಿಕಾ ಅಥವಾ ಯುರೋಪ್ ಕಡೆಗೆ ಪ್ರವಾಸ ಮಾಡುತ್ತಾರೆ. ಮೋದಿಯವರು ಕರ್ನಾಟಕ ಸರಕಾರದಿಂದ ವರ್ಷಕ್ಕೆ ೮೦,೦೦೦ ರೂ.ಗಳನ್ನು ಪಡೆಯುತ್ತಾರೆ. ಆದರೆ ಅವರ ಮೂಲಬಂಡವಾಳ ಭಾರತೀಯ ಸಿಂಹ ಸಂಘ ಮತ್ತು ಇನ್ನಿತರ ಸೇವಾ ಸಂಸ್ಥೆಗಳು. ಅವೂ ಕೂಡ ಅನೇಕ ನೇತ್ರಚಿಕಿತ್ಸಾ ಶಿಬಿರಗಳನ್ನು ಏರ್ಪಡಿಸುತ್ತವೆ.

ಕಾಮನ್‌ವೆಲ್ತ್ ಸೊಸೈಟಿಯ ದಕ್ಷಿಣ ಏಷಿಯಾ ವಿಭಾಗದ ಪ್ರತಿನಿಧಿಯಾದ ರಾಜೇಂದ್ರವ್ಯಾಸರು ಹೇಳುತ್ತಾರೆ "ಸಾಮೂಹಿಕ ನೇತ್ರಚಿಕಿತ್ಸೆಯನ್ನು ನಡೆಸು

ವುದು ಮಾತ್ರ ನಾವು ಗುಣಪಡಿಸಬಹುದಾದ ಅಂಧತ್ವದ ವಿರುದ್ಧ ಹೋರಾಡಬಹುದಾದ ಏಕೈಕ ಮಾರ್ಗ". ಭಾರತದಲ್ಲೀಗ ಒಂಭತ್ತು ಮಿಲಿಯನ್ ಜನರು ಅಂಧರು. ಅವರಲ್ಲಿ ಕನಿಷ್ಟಪಕ್ಷ ಐದು ಮಿಲಿಯನ್ ಜನರು ಕಣ್ಣಿಗೆ ಪರೆ ಕೂಡ್ರಿಸಿಕೊಂಡವರು ಮತ್ತು ಗುಣಹೊಂದಬಲ್ಲಂಥವರು. ವ್ಯಾಸರ ಅಭಿಪ್ರಾಯದಂತೆ "ನಮ್ಮಲ್ಲಿರುವ ೪,೫೦೦ ನೇತ್ರತಜ್ಞರು ಹಳ್ಳಿಗಳಿಗೆ ದೌಡಾಯಿಸಿ ಶಸ್ತ್ರಚಿಕಿತ್ಸೆ ನೀಡದಹೊರತೂ ನಮ್ಮಲ್ಲಿ ಅಂಧರ ಸಂಖ್ಯೆ ಇಳಿಮುಖವಾಗುವುದಿಲ್ಲ. ಬದಲಿಗೆ ಹೆಚ್ಚಬಹುದು".

ಭಾರತದಲ್ಲಿ ಅಂಧತ್ವವೆಂದರೆ ಕೇವಲ ದೃಷ್ಟಿಶೂನ್ಯವಾಗುವುದು ಎಂದಷ್ಟೇ ಅರ್ಥವಾಗುವುದಿಲ್ಲ. ಅಂದರೆ ಇದು ಬಡವರು ತಮ್ಮ ಕೆಲಸವನ್ನು ಮಾಡಲಾಗದೆ ಹಸಿವಿನಿಂದ ನರಳುವುದು ಎಂದೂ ಅರ್ಥ. ಮೋದಿಯವರಿಗೆ ಈ ಅರ್ಥ ಚೆನ್ನಾಗಿ ಗೊತ್ತು. ಮೋದಿ ಹೇಳುತ್ತಾರೆ—"ಅಂಧತ್ವದಿಂದ ಬಳಲುತ್ತಿರುವ ಪ್ರತಿಯೊಬ್ಬ ಭಾರತೀಯನೂ ಶಾಪದಿಂದ ಬದುಕುತ್ತಿದ್ದಾನೆ. ಅಂಥವರು ಕುಟುಂಬಕ್ಕೆ ಮತ್ತು ಸಮಾಜಕ್ಕೆ ನಿರುಪಯೋಗಿಗಳಾಗಿಬಿಡುತ್ತಾರೆ. ನನ್ನ ಬದುಕಿನ ಒಂದು ನಿಮಿಷ ಅಂತಹ ಬಡ ರೋಗಿಯೊಬ್ಬ ತನ್ನ ಅಂಧತ್ವದಿಂದ ದೂರಾಗಿ ಹೊರಜಗತ್ತನ್ನು ನೋಡಲು ಸಾಧ್ಯ ಮಾಡಿಕೊಡುತ್ತದೆಯಾದ್ದರಿಂದ ನಾನು ಹೇಗೆ ವಿಶ್ರಾಂತಿಯನ್ನು ಪಡೆಯಲಿ?

ಮೋದಿಯವರು ಬಡವರ ಬಗ್ಗೆ ಹೊಂದಿದ ಮಾನವೀಯ ಕಾಳಜಿ ಅವರ ಬದುಕಿನ ಹಿನ್ನೆಲೆಯಿಂದಲೇ ಬಂದಿದ್ದು. ಕರ್ನಾಟಕ ರಾಜ್ಯದ ಬಿಜಾಪುರ ಜಿಲ್ಲೆಯ ಲೋಕಾಪುರ ಎಂಬ ಗ್ರಾಮದಲ್ಲಿ ಓರ್ವ ಜವಳಿ ವ್ಯಾಪಾರಿಯ ಮಗನಾಗಿ ಮೋದಿ ೧೯೧೬ರ ಅಕ್ಟೋಬರ್ ೪ರಂದು ಜನಿಸಿದರು. ಇಲ್ಲಿಂದ ಎರಡು ಕಿ.ಮೀ. ದೂರದಲ್ಲಿದ್ದ ಶಾಲೆಗೆ ಬರಿಗಾಲಲ್ಲಿ ಹೋಗಿ ಬರುತ್ತಿದ್ದರು.

ನಾನು ಸ್ವಲ್ಪ ದೊಡ್ಡವನಾದ ಕೂಡಲೇ "ನನ್ನ ತಂದೆ ಪಠ್ಯಪುಸ್ತಕಗಳನ್ನು ಖರೀದಿಸಲು ಹಣ ನೀಡಲು ಸಾಧ್ಯವಾಗುವುದಿಲ್ಲ" ಎಂದದ್ದನ್ನು ಇಂದಿಗೂ ಮೋದಿ ಜ್ಞಾಪಿಸಿಕೊಳ್ಳುತ್ತಾರೆ. ಇದಾದ ಅನಂತರ ಅವರು ತಾವೇ ಸ್ವತಃ ದುಡಿದು ಸಂಪಾದಿಸಿಕೊಂಡು ಓದನ್ನು ಮುಂದುವರಿಸಲು ನಿಶ್ಚಯಿಸಿದರು.

ದಿಟ್ಟಹೆಜ್ಜೆ : ಅನಂತರ ಮುಂದಿನ ರವಿವಾರ ಅವರು ತಮ್ಮ ತಂದೆಯವರಿಂದ ಸ್ವಲ್ಪ ಹಣ ಪಡೆದು ದವಸ-ಧಾನ್ಯ, ಸೀಮೆಎಣ್ಣೆ, ಉಪ್ಪು, ತುಪ್ಪ ಮುಂತಾದ ಸಾಮಾನುಗಳನ್ನು ಸಗಟು ವ್ಯಾಪಾರಿಗಳಿಂದ ಖರೀದಿಸಿಕೊಂಡು ಬಂದರು. ಅನಂತರ ಒಂದು ಆಲದ ಮರದ ಬುಡದಲ್ಲಿ ಕುಳಿತು ಅವನ್ನು ವ್ಯಾಪಾರ

ಮಾಡಿದರು. ಮತ್ತು ನಾಲ್ಕು ರೂಪಾಯಿ ಲಾಭ ಗಳಿಸಿದರು. ಮೋದಿ ಹೇಳುತ್ತಾರೆ "ನನಗೆ ನೆನಪಿದೆ ಅನಂತರ ಐದು ವರ್ಷ ನಾನು ಚಿಲ್ಲರೆ ವ್ಯಾಪಾರಿಯಾಗಿಯೇ ಉಳಿದೆ. ಮತ್ತೆಂದೂ ತಂದೆಯುವರಲ್ಲಿ ಹಣ ಕೇಳಲಿಲ್ಲ."

೧೯೩೫ರಲ್ಲಿ ಮೋದಿ ಬೆಳಗಾವಿಯಲ್ಲಿ ೫ ವರ್ಷ ಅಭ್ಯಾಸಿಸಿ Licentiate in Integrated Medicine (LIM) ಸರ್ಟಿಫಿಕೇಟ್ ಪಡೆದರು: ಅನಂತರ ಬೊಂಬಾಯಿ ಸೇರಿ ಖಾನ್ ಬಹದೂರ್ ಹಾಜಿ ಬಾಚೂಅಲಿಯುವರ ನೇತ್ರಚಿಕಿತ್ಸಾಲಯ ಸೇರಿದರು. ಅಲ್ಲೇ ಅವರು ಅಂಧರ ಬಗ್ಗೆ ಯೋಚಿಸು ವಂತಾದದ್ದು, "ಅವರು ತಮ್ಮ ಚಿಕಿತ್ಸೆಗಾಗಿ ತಮ್ಮ ಜಮೀನು, ಜಾನುವಾರು ಮತ್ತು ಮಡದಿಯ ಒಡವೆಯನ್ನು ಕೂಡ ಮಾರಿ ಬೊಂಬಾಯಿಗೆ ಬರಬೇಕಿತ್ತು. ಮೋದಿ ಹೇಳುತ್ತಾರೆ. "ತಕ್ಷಣ ನನಗೆ ಪರಿಸ್ಥಿತಿಯ ಅರಿವಾಗಿ, ಅವರು ನನ್ನಲ್ಲಿಗೆ ಬರುವುದಕ್ಕಿಂತ ನಾನು ಅವರಿದ್ದಲ್ಲಿಗೆ ಹೋಗುವುದು ವಾಸಿ ಎಂದು ನಿರ್ಧರಿಸಿದೆ."

ಇದಾದ ಕೆಲವೇ ದಿನಗಳಲ್ಲಿ ಬೊಂಬಾಯಿಯ ಖ್ಯಾತ ನೇತ್ರ ಶಸ್ತ್ರಚಿಕಿತ್ಸಕ ಡಿ. ಎಸ್. ಸರ್‌ದೇಸಾಯಿ ತಮ್ಮ ನೇತ್ರ ಚಿಕಿತ್ಸಾ ಶಿಬಿರಕ್ಕೆ ಬರುವಂತೆ ಮೋದಿಯುವರಲ್ಲಿ ಕೇಳಿಕೊಂಡರು. ಆ ಶಿಬಿರವನ್ನು ಸರ್‌ದೇಸಾಯಿ ಗುಜರಾತ್‌ದ ಪಠಾನದಲ್ಲಿ ಏರ್ಪಡಿಸಿದ್ದರು. ಮೋದಿ ತಕ್ಷಣ ಅವರ ಕರೆಗೆ ಒಪ್ಪಿಕೊಂಡರು. ಅನಂತರ ಅವರ ಶಿಬಿರದಲ್ಲಿ ೨೦ ಜನರ ಕಣ್ಣಿನ ಪರೆಗೆ ಶಸ್ತ್ರಚಿಕಿತ್ಸೆ ನಡೆಸಿದರು. ಸರ್‌ದೇಸಾಯಿ ೧೩೦ ಜನಕ್ಕೆ ಈ ಕೆಲಸವನ್ನು ಮಾಡಿದ್ದರು. ಈ ಶಿಬಿರ ಡಾಕ್ಟರ್ ಆದವರು ಭಾರತದ ಗ್ರಾಮಾಂತರ ಪ್ರದೇಶಗಳಿಗೆ ಹೋಗಿ ಜನಸೇವೆ ಮಾಡಬೇಕೆಂಬ ಮೋದಿಯುವರ ಸಂಕಲ್ಪಕ್ಕೆ ಇಂಬುಗೊಟ್ಟಿತು. ಹಾಗಾಗಿಯೇ ಮೋದಿಯುವರು ಕರ್ನಾಟಕದ ಧಾರವಾಡ ಜಿಲ್ಲೆಯ ನರೇಗಲ್ಲಿನಲ್ಲಿರುವ ತಮ್ಮ ಮಿತ್ರರಿಗೆ ಈ ಕುರಿತು ಪತ್ರ ಬರೆದರು. ಅವರೂ ಶಿಬಿರ ನಡೆಸಲು ಒಪ್ಪಿ ಕೊಂಡರು. ಅನಂತರ ಮೋದಿಯುವರು ಅಲ್ಲಿಗೆ ಹೋದಾಗ ನೈಜ ಪರಿಸ್ಥಿತಿಯು ಅರಿವಾಯಿತು. ಯಾವೊಬ್ಬ ಅಂಧರೂ ಇವರ ಶಸ್ತ್ರ ಚಿಕಿತ್ಸೆಗೆ ಒಪ್ಪಲಿಲ್ಲ. ಇವರು ಸುದೀರ್ಘವಾಗಿ ಆ ಕುರಿತು ವ್ಯಾಖ್ಯಾನಮಾಡಿದ ತರುವಾಯ ಒಬ್ಬನೇ ಒಬ್ಬ ವೃದ್ಧ ಮುಂದೆ ಬಂದ.

ಆತನಿಗೆ ಶಸ್ತ್ರಚಿಕಿತ್ಸೆ ಮುಗಿದ ಬಳಿಕ ಮೋದಿ ಉಳಿದ ಜನರನ್ನು ಲಕ್ಷ್ಯದಲ್ಲಿ ಇಟ್ಟುಕೊಂಡು ಆ ವೃದ್ಧನಿಗೆ "ಶಸ್ತ್ರಚಿಕಿತ್ಸೆಯ ಸಮಯದಲ್ಲಿ ನೋವು ಉಂಟಾಯಿತೇ?" ಎಂದು ಪ್ರಶ್ನಿಸಿದರು.

"ಇಲ್ಲ" ಎಂದು ಆತ ಉತ್ತರಿಸಿದ.

ಅನಂತರ ಎರಡು ಗಂಟೆಗಳಲ್ಲಿ ಮೋದಿಯುವರು ೨೦ ಜನ ರೋಗಿಗಳಿಗೆ ಶಸ್ತ್ರ ಚಿಕಿತ್ಸೆ ನಡೆಸಿದರು.

ಮಾನ್ಯತೆ: ಈ ರೀತಿ ಏಳು ವರ್ಷ ಮೋದಿ ಎಲ್ಲಿಗೇ ಹೋದರೂ ಅವರು ಇದೇ ತೆರನಾಗಿ ಪ್ರಾರಂಭದಲ್ಲಿ ರೋಗಿಗಳ ಸಂದೇಹ ಪ್ರವೃತ್ತಿಯನ್ನು ಎದುರಿಸುತ್ತಿದ್ದರು. ಆದರೆ ನಿಧಾನವಾಗಿ ಅವರ ಖ್ಯಾತಿ ಸುತ್ತೆಲ್ಲ ಹರಡಿತು. ಇಂದು ಈ ಖ್ಯಾತ ಶಸ್ತ್ರವೈದ್ಯರನ್ನು ಹಳ್ಳಿಗರು ಸಿಹಿ ಮತ್ತು ತೆಂಗಿನಕಾಯಿಗಳೊಂದಿಗೆ ಸ್ವಾಗತಿಸುತ್ತಾರೆ. ಅದಕ್ಕೆ ಪ್ರತಿಯಾಗಿ ಮೋದಿಯುವರು ಹಳ್ಳಿಗರಿಗೆ ತಮ್ಮ ಮತ್ತು ತಮ್ಮ ಸಿಬ್ಬಂದಿ ಹಾಗೂ ರೋಗಿಗಳಿಗೆ ಒಂದುವಾರ ಆಹಾರ ಮತ್ತು ವಸತಿ ಸೌಕರ್ಯ ಏರ್ಪಡಿಸುವಂತೆ ಕೇಳಿಕೊಳ್ಳುತ್ತಾರೆ. "ಇದು ದೂರದಿಂದ ಬಂದ ಬಡರೋಗಿಗಳಿಗೆ ಸಹಾಯ ಮಾಡಲಿಕ್ಕೆ" ಎಂದು ಇವರು ವಿವರಿಸುತ್ತಾರೆ. ಡಾ॥ ಮೋದಿಯುವರ ಪ್ರಾರ್ಥನೆಯನ್ನು ಯಾರೂ ಯಾವತ್ತೂ ಕಡೆಗಣಿಸಿಲ್ಲ. ಅದಕ್ಕಿಂತ ಮಿಗಿಲಾಗಿ ಪ್ರತಿಯೊಂದು ನೇತ್ರಚಿಕಿತ್ಸಾ ಶಿಬಿರ ನಡೆದಲ್ಲಿ ಅಲ್ಲಿನ ಭೂಮಾಲೀಕರು ಮತ್ತು ವರ್ತಕರು ಹಣವನ್ನು ಸಹ ದಾನ ನೀಡಿದ್ದು ಉಂಟು. ೧೯೫೬ರಲ್ಲಿ ಬೆಂಗಳೂರು ಮಹಾನಗರಸಭೆ ಇವರಿಗೆ ಬೆಡ್ ಫೋರ್ಡ್ ವ್ಯಾನನ್ನು ಗೌರವವಾಗಿ ನೀಡಿದಾಗಲೇ ಅವರು ಅಧಿಕಾರದ ಮಾನ್ಯತೆ ಪಡೆದರು. ಅಲ್ಲಿಂದೀಚೆಗೆ ಅವರು ಭಾರತ ಸರಕಾರದ ಪದ್ಮಶ್ರೀ ಮತ್ತು ಪದ್ಮಭೂಷಣ ಪ್ರಶಸ್ತಿಗಳನ್ನೂ ಪಡೆದಿದ್ದಾರೆ.

ಜನರಿಂದ ಮತ್ತು ಸರಕಾರದಿಂದ ವಿಶ್ವಾಸ ಮತ್ತು ಮಾನ್ಯತೆಯನ್ನು ಗಳಿಸಿದ್ದಾಗ್ಯೂ ಉಳಿದ ಕೆಲವೊಂದು ನೇತ್ರ ಶಸ್ತ್ರವೈದ್ಯರ ಗುಂಪೊಂದರ ದ್ವೇಷವನ್ನು ಮೋದಿಯುವರು ಎದುರಿಸಬೇಕಾಯಿತು. ಈ ಗುಂಪಿನವರು "ಮೋದಿಯುವರು ಆರೋಗ್ಯಕರವಲ್ಲದ ಸ್ಥಿತಿಯಲ್ಲಿ ಶಸ್ತ್ರಚಿಕಿತ್ಸೆ ನಡೆಸುತ್ತಿದ್ದಾರೆ" ಎಂದು ದೂರಿದರಲ್ಲದೆ ತಮ್ಮಂತೆ L.C.P.S. (Licentiate of the College Physians and Surgeon) ಡಿಗ್ರಿ ಪಡೆಯದೆ ಕೇವಲ L.I.M. ಪಡೆದಿದ್ದಾರೆ. ಆದ್ದರಿಂದ ಅವರು ಅರ್ಹ ಶಸ್ತ್ರತಜ್ಞರಲ್ಲ ಎಂಬ ಪುಕಾರನ್ನೆಬ್ಬಿಸಿದರು.

ಇದಕ್ಕೆ ಪ್ರತಿಯಾಗಿ ಮೋದಿಯುವರು ಅಂತಹ ಟೀಕಾಕಾರರಿಗೆ "ತಮ್ಮೊಂದಿಗೇ ತಜ್ಞ ನಿಷ್ಪಕ್ಷಪಾತ ನ್ಯಾಯವಾದಿಗಳ ಸಮ್ಮುಖದಲ್ಲೇ ಶಸ್ತ್ರಚಿಕಿತ್ಸೆಯನ್ನು ನಡೆಸಬೇಕೆಂದು ಕೇಳಿಕೊಂಡರು. ಒಬ್ಬರೂ ಈ ಸವಾಲನ್ನು ಎದುರಿಸಲಿಲ್ಲ.

ಗಾಂಧೀಜಿಯವರ ಸ್ವಾತಂತ್ರ್ಯದಿನದ ಪವಾಡ

[illegible]

([illegible])

—[illegible]

ಕಲ್ಕತ್ತೆ ನಗರ. ಅಂದು ೧೯೪೭ರ ಆಗಸ್ಟ್ ೧೫ನೇ ತಾರೀಖು. ಹಿಂದೂ ಮತ್ತು ಮುಸ್ಲಿಮರ ನಡುವೆ ಪ್ರಜ್ವಲಿಸುತ್ತಿದ್ದ ದ್ವೇಷ ಧರ್ಮಯುದ್ಧವಾಗಿ ಪರಿಣಮಿಸಿದ ಸಮಯ. ಆಗ ಮಹಾತ್ಮಗಾಂಧಿಯವರು ಅಸಾಧಾರಣ ಸ್ನೇಹ ಸೌಹಾರ್ದ ಸಂಧಿಯಿಂದ ಸಕಲರಿಗೂ ಅಪ್ಪಟ್ಟದ್ದಕ್ಕೆ ಶಾಂತಿಯನ್ನು ತಂದರು.

ಆದರೆ ಆದಿನ ಆಗಸ್ಟ್ ೧೫ರಂದು ಮಹಾತ್ಮಾಗಾಂಧಿ ಎಲ್ಲಿದ್ದರು? ಭಾರತದಾಗಿ ಸ್ವಾತಂತ್ರ್ಯ ಚಳವಳಿಯ ಮುಂದಾಳುತನ ವಹಿಸಿದ ಆ ಮಹಾತ್ಮರು ಆ ದಿನ ನವದೆಹಲಿಯಲ್ಲಿ ರಾಷ್ಟ್ರೀಯ ಉತ್ಸವಾಚರಣೆಯಲ್ಲಿ ಇರಬೇಕಿತ್ತು. ಬದಲು ಅವರು ಅಂದು ತಮ್ಮ ಮಹತ್ತ್ವಪೂರ್ಣ ಜೀವನದಲ್ಲಿ ಒಂದು ಅಸಾಧಾರಣ ಘಟನೆಯನ್ನುಆಗಮಾಡಿದರು. ಆ ಕಥೆ ಇಲ್ಲಿದೆ.

ಇತ್ತೀಚೆಗೆ ೧೯೪೬ರಲ್ಲಿ ಬಿಹಾರ ಮತ್ತು ಪೂರ್ವ ಬಂಗಾಲ ಭಯಂಕರ ಕೋಮು ಯುದ್ಧದಿಂದ ತೀವ್ರ ಸಂಕಟ, ತೊಂದರೆಗಳನ್ನು ಅನುಭವಿಸಿದ್ದವು. ಮುಸಲ್ಮಾನರೇ ಅಧಿಕ ಸಂಖ್ಯೆಯಲ್ಲಿರುವ ಪೂರ್ವ ಬಂಗಾಲದ ನೌಖಾಲಿ ಜಿಲ್ಲೆಯಲ್ಲಿ, ಮುಸಲ್ಮಾನರು, ತಮ್ಮ ನೆರೆಯವರಾದ ಹಿಂದೂಗಳ ಮೇಲೆ ಅತ್ಯಾಚಾರ ಮಾಡಿ, ಅವರ ಮನೆ ಮಠಗಳನ್ನು ಸುಟ್ಟು ಧ್ವಂಸ ಮಾಡಿದ್ದರು. ಗಾಂಧೀಜಿಯವರು ಆ ಎರಡು ಭಾಗಗಳಲ್ಲಿ, ಸೌಹಾರ್ದವೇರ್ಪಡಿಸಿ ಮತ್ತೆ ಒಗ್ಗೂಡಿಸಲು ತತ್‌ಕ್ಷಣ ಅಲ್ಲಿಗೆ ಹೊರಟರು.

ತತ್‌ಕ್ಷಣದಲ್ಲೇ! ಮುಸಲ್ಮಾನರು, ಅಲ್ಪ ಸಂಖ್ಯಾತರಾಗಿರುವ ಬಿಹಾರದಲ್ಲಿ ಹಿಂದೂಗಳು ಬಹುಮತದಿಂದ, ತಮ್ಮ ನೆರೆಯವರಾದ ಮುಸಲ್ಮಾನರ ಮೇಲೆ ಹತ್ಯಾಕಾಂಡ ನಡೆಸಿದರು. ಗಾಂಧಿಯವರು ಅಲ್ಲಿಗೆ ಹೋಗಿ ಮುಸ್ಲಿಮರಿಗೆ ಧೈರ್ಯ ತುಂಬಿ ಹಿಂದೂಗಳ ಹೃದಯ ಪರಿವರ್ತಿಸಲು ಹೋದರು. ಬಿಹಾರದಲ್ಲಿ ಅವರ ಜೊತೆ ನಾನೂ ಸೇರಿಕೊಂಡು, ಇಬ್ಬರೂ ಸೇರಿ ಕಲ್ಕತ್ತೆಗೆ ಪಯಣ

೧೯೬೨ರ ಆಗಸ್ಟ್ ತಿಂಗಳ ರೀಡರ್ಸ್ ಡೈಜೆಸ್ಟ್‌ನಲ್ಲಿ ಶ್ರೀ ಹೊರೇಸ್ ಅಲೆಕ್ಸಾಂಡರ್ ರವರು ಬರೆದಿದ್ದ "ಗಾಂಧೀಜೀಸ್ ಇಂಡಿಪೆಂಡೆನ್ಸ್ ಡೇ ಮಿರಕಲ್" ಎಂಬ ಲೇಖನದ ಭಾವಾನುವಾದ.

ಸಿದೆವು. ಆಗಸ್ಟ್ ೧೧ರಂದು ನಾವು ಪೂರ್ವಬಂಗಾಲಕ್ಕೆ ಹೋಗಲಿದ್ದೆವು. ಏಕೆಂದರೆ ಗಾಂಧೀಜಿಯುವರು, ಪೂರ್ವಬಂಗಾಲದ ನೋಖಾಲಿಯ ಭಯಭೀತ ಹಿಂದೂ ಬಾಂಧವರಿಗೆ, ಪೂರ್ವಬಂಗಾಲ ಪಾಕಿಸ್ತಾನದಲ್ಲಿ ಸೇರಿಹೋಗುವ ದಿನ ದಂದು, ತಾವು ಅಲ್ಲಿಯ ಹಿಂದೂಗಳ ಜೊತೆಗಿರುವೆನೆಂದು ರಾಮವಚನವ ನ್ನಿತ್ತಿದ್ದರು.

ನಾವು ಅಲ್ಲಿ ಹೋದ ಕೆಲ ಗಂಟೆಗಳ ನಂತರ ಮುಸ್ಲಿಂ ಪ್ರಮುಖರು, ಗಾಂಧೀಜಿಯವರನ್ನು ಭೇಟಿ ಮಾಡಿ ಪೂರ್ವಬಂಗಾಲಕ್ಕೆ ಹೋಗಬೇಡಿರೆಂದು ಬೇಡಿಕೊಂಡರು. ಗಾಂಧೀಜಿಯವರು ಕಲ್ಕತ್ತೆಯಲ್ಲೇ ಇದ್ದು ಆ ಮಹಾನಗರಕ್ಕೆ ಶಾಂತಿ ತರಲು ಯತ್ನಿಸಬೇಕೆಂದು ವಿನಂತಿಸಿಕೊಂಡರು. ಕಲ್ಕತ್ತೆಯಲ್ಲಿ ಶಾಂತಿ ಉಂಟಾದರೆ ಇಡೀ ಬಂಗಾಲದಲ್ಲೇ ಶಾಂತಿ ಉಂಟಾಗುವುದೆಂದು, ಗಾಂಧೀಜಿ ಯವರಲ್ಲಿ ಅವರು ಭಿನ್ನಯಿಸಿಕೊಂಡರು. ಗಾಂಧೀಜಿಯವರು ಈ ಬೇಡಿಕೆಗೆ ಸುಲಭದಲ್ಲಿ ಒಪ್ಪಲಿಲ್ಲ. ಅವರು ಮುಸ್ಲಿಂ ನಾಯಕರುಗಳನ್ನು, ನೋಖಾಲಿಯ ತ್ರಸ್ತ ಹಿಂದೂಗಳನ್ನು ರಕ್ಷಿಸುತ್ತೇವೆಂಬ ಸಂಪೂರ್ಣ ಭರವಸೆ ಕೊಡಬೇಕೆಂದು ಕೇಳಿದರು. ಕಾಲ ತೀರಾ ಅಲ್ಪವಿತ್ತು, ಆದರೂ ಮುಸ್ಲಿಮರು ಹಾಗೇ ಮಾಡು ವುದಾಗಿ ಒಪ್ಪಿಗೆ ಕೊಟ್ಟದ್ದರಿಂದ ಗಾಂಧೀಜಿ ಕಲ್ಕತ್ತೆಯಲ್ಲೇ ಉಳಿದರು.

ಗಾಂಧೀಜಿ ಒಂದು ಯೋಜನೆ ಹಾಕಿದ್ದರು. ಅವರು ಬಂಗಾಲದ ಹಿಂದಿನ ಮುಖ್ಯ ಮಂತ್ರಿಗಳೂ ಗಾಂಧೀಜಿಯ ಕಟು ವಿಮರ್ಶಕರೂ (ದೇಶಭಕ್ತ) ಆದ ಷಹೀದ್ ಸುಹ್ರವರ್ದಿಯುವರನ್ನು, ಕಲ್ಕತ್ತೆಯಲ್ಲಿ ಶಾಂತಿಯನ್ನು ತರುವ ಸಲು ವಾಗಿ ನಡೆಸುವ ಯತ್ನದಲ್ಲಿ ಅವರೂ ಪಾಲ್ಗೊಳ್ಳಬೇಕೆಂದು ಆಹ್ವಾನಿಸಿದರು. ಮೊದಲು ಅವರು ಜನವಿಹೀನ ಮುಸ್ಲಿಂ ಗೃಹಗಳಿಗೆ ಹೋಗಿ ಆ ಊರಿನ ಮುಸ್ಲಿಂ ಬಾಂಧವರು ತಮ್ಮ ತಮ್ಮ ಪರಿತ್ಯಕ್ತ ಗೃಹಗಳಿಗೆ ಹಿಂದಿರುಗುವಂತೆ ಹಿಂದೂಗಳು ಅವರನ್ನು ಆಹ್ವಾನಿಸಬೇಕೆಂದು ಒತ್ತಾಯಿಸಿ, ಅನಂತರ ಮುಸ್ಲಿ ಮರ ಪ್ರಾತಿನಿಧ್ಯವಿರುವೆಡೆ ಹೋಗಿ, ಅವರ ನೆರೆಯವರಾದ ಹಿಂದೂಗಳನ್ನು ಅವರವರ ಗೃಹಗಳಿಗೆ ಹಿಂದಿರುಗಲು ಕೇಳಿಕೊಳ್ಳಬೇಕೆಂದು, ಹಾಗೆ ಮಾಡಿ ಹಿಂದೂ ಮತ್ತು ಮುಸ್ಲಿಂ ಬಾಂಧವರು ಸೌಹಾರ್ದ ಮತ್ತು ಶಾಂತಿಯಿಂದ ಒಗ್ಗಟ್ಟಾಗಿ ಇಡೀ ನಗರದಲ್ಲಿ ಶಾಂತಿ ಹರಡುವಂತೆ ಮಾಡಬೇಕೆಂದರು. ಸುಹ್ರವರ್ದಿ ಒಪ್ಪಿದರು.

ಪರಿತ್ಯಕ್ತ ಮುಸ್ಲಿಂ ಗೃಹವೊಂದು ನಗರದ ಬೆಲಿಯಾಘಾಟ್ ಪ್ರದೇಶದಲ್ಲಿ ಕಾಣಬಂತು. ಇಲ್ಲಿ ಆಗಸ್ಟ್ ೧೩ರಂದು ಗಾಂಧೀಜಿ ಮತ್ತವರ ಸಹಭಾಗಿ

ಸುಹ್ರವರ್ದಿಯವರನ್ನು ಕೂಡಿಕೊಂಡು ಅಲ್ಲಿಗೆ ನಾವು ಹೋದೆವು. ಅಲ್ಲಿ ನಾವು ಹೋದಾಗ ಒಂದು ಗುಂಪು ಕಿರುಚಾಡುವ ಯುವಕರಿಂದ ಎದುರುಗೊಳ್ಳಲ್ಪಟ್ಟೆವು. ನಾನು ಗಾಂಧೀಜಿಯವರ ಒಬ್ಬ ಗೆಳೆಯನೆಂದು ಅವರಿಗೆ ವಿವರಿಸಿ ಹೇಳಿದಾಗ, ಅವರು "ಗಾಂಧೀ ಹಿಂದಿರುಗು" ಎಂದು ಕೂಗಾಡಲಾರಂಭಿಸಿದರು. ಗಾಂಧೀಜಿಯವರ ವಿರುದ್ಧ ಪ್ರದರ್ಶನ ಮುಂದುವರೆದು ಕಿಟಕಿ ಗಾಜುಗಳಿಗೆಲ್ಲ ಕಲ್ಲುಗಳು ತೂರಲ್ಪಟ್ಟವು. ಕೊನೆಗೆ ಕೆಲ ಯುವಜನ ಗಾಂಧೀಜಿಯವರ ಜೊತೆ ಮಾತಾಡಲು ಒಳಹೋದರು.

ಅಲ್ಲಿಯ ಹಿಂದೂ ಯುವಕರು, ಎಲ್ಲಾ ಮುಸ್ಲಿಮರು ಪಾಕಿಸ್ಥಾನಕ್ಕೆ ಹೊರಟುಹೋಗಿ, ತಮ್ಮ ಇಂಡಿಯಾ, ಬರೀ ಹಿಂದೂ ಇಂಡಿಯಾ, ಆಗುವ ಸುದಿನಕ್ಕಾಗಿ ಕಾಯುತ್ತಾ ಸಿದ್ಧತೆ ಮಾಡಿಕೊಳ್ಳುತ್ತಿದ್ದರು. ಸ್ವತಂತ್ರ ಬಂದ ತಕ್ಷಣ ಮುಸ್ಲಿಂ ಮತ್ತು ಹಿಂದೂಗಳ ನರಮೇಧವಾಗಬಹುದೆಂದು ಎಲ್ಲ ಎಣಿಸಿದ್ದರು. ಆದರೆ ಗಾಂಧೀಜಿಯವರು ಎಲ್ಲದರಲ್ಲೂ ಉತ್ತಮವಾದುದನ್ನು ಆಶಿಸುತ್ತಾ ಆ ಯುವಕರಿಗೆ ಸ್ವತಂತ್ರ ಹಿಂದೂಸ್ಥಾನದ ಜೀವನಾರಂಭವನ್ನು ಈ ರೀತಿ ಆಚರಿಸುವುದು ಉಚಿತ ಮಾರ್ಗವಲ್ಲ ಎಂದು ಅವರಿಗೆ ತಿಳಿಯಹೇಳಿದರು. ಜಗತ್ತು ಭಾರತದ ಸಹಿಷ್ಣುತೆ ಮತ್ತು ಔದಾರ್ಯಗಳ ನಾಡೆಂಬುದನ್ನು ನೋಡಬೇಕೆಂದರು. ಹೀಗಿರುವಾಗ ಅವರು ಗಾಂಧೀಜಿಯವರನ್ನು ಹಿಂದೂಗಳ ಪರಮವೈರಿ ಎಂದು ಹೇಗೆ ಹೇಳಿಯಾರು ?

ಕೊನೆಯದಾಗಿ ಗಾಂಧೀಜಿ ಆ ಯುವಕರಿಗೆ ಮನೆಗೆಹೋಗಿ ನಿಧಾನವಾಗಿ ಯೋಚಿಸಿ ಎಂದು ಬುದ್ಧಿವಾದ ಹೇಳಿ ಕಳುಹಿಸಿದರು. ಮರುದಿನ ಆ ಯುವಕರು ಗಾಂಧೀಜಿಯವರು ಕಲ್ಕತ್ತೆಯಲ್ಲಿರುವವರೆಗೂ ಅವರ ಶಾಂತಿ ಪ್ರಯತ್ನಗಳಿಗೆ ಪೂರ್ಣ ಬೆಂಬಲ ನೀಡುವುದಾಗಿ ಭರವಸೆ ಇತ್ತರು.

ಆಗಸ್ಟ್ ೧೪ರಂದು ಅನೇಕ ಜನ ಗಾಂಧೀಜಿಯವರ ದಿನನಿತ್ಯದಂತೆ ಸಾಯಂಕಾಲ ಪ್ರಾರ್ಥನೆಗೆ ಸೇರಿದರು. ಪ್ರಾರ್ಥನೆ ಕೊನೆಗೊಳ್ಳುವ ಸಮಯದಲ್ಲಿ ಕೆಲ ಯುವಕರು ಸುಹ್ರವರ್ದಿಯವರು ಆ ಸಭೆಯಲ್ಲಿಲ್ಲದಿರುವುದನ್ನು ಕಂಡು ಆತ ಮನೆಯೊಳಗೆ ಇರಬೇಕೆಂದು ಊಹಿಸಿದರು. ಹೀಗಾಗಿ ಅವರು ಆತನ ರಕ್ತಕ್ಕಾಗಿ ಹಾತೊರೆಯುತ್ತಾ ಬಂದರು. ಒಬ್ಬ ಪೋಲೀಸ್ ಪೇದೆ ಮತ್ತು ನಾನು ಸುಹ್ರವರ್ದಿಯವರ ಜೊತೆ ಒಳಗಿದ್ದೆವು. ಬೇಗ ಬೇಗ ಕಿಟಕಿ ಬಾಗಿಲುಗಳನ್ನು ಹಾಕಿದೆವು. ಆದರೆ ಗಾಂಧೀಜಿಯವರು ಹಿಂದಿರುಗಿ ಕೆಲಸಮಯ ಕಳೆದಿದ್ದರೂ ಸಹ ಹೊರಗಿನ ಗಲಾಟೆ ಕಿಂಚಿತ್ತೂ ಕಮ್ಮಿಯಾಗಿರಲಿಲ್ಲ. ನಂತರ ಹೊರಗಿದ್ದ

ಜನಗಳೊಂದಿಗೆ ಗಾಂಧೀಜಿಯವರು ಮಾತಾಡಲಾರಂಭಿಸಿದರು. ತಕ್ಷಣ ಅಲ್ಲಿ ಶಾಂತಿ ಪಸರಿಸಿತು. ಏಕೆಂದರೆ ಗಾಂಧೀಜಿಯವರು ಏನು ಹೇಳುತ್ತಾರೋ ಎಂಬುದನ್ನು ಕೇಳಲು ಎಲ್ಲರೂ ತವಕದಿಂದಿದ್ದರು. ಅವರು ಸುಹ್ರವರ್ದಿಯವರ ಮೇಲೆ ಹಗೆತನ ತೋರಿಸುತ್ತಿರುವುದಕ್ಕೆ ಅವರನ್ನು ಛೀಮಾರಿ ಮಾಡಿ ಆತನ ಹಿಂದಿನ ವಿಷಯ ಎಂತದೇ ಆಗಿರಲಿ, ಆತ ಏನೇ ಆಗಿರಲಿ, ಆತ ಈಗ ತಮ್ಮ ಜೊತೆ ಶಾಂತಿಯನ್ನು ಹರಡಲು ಶ್ರಮಿಸುತ್ತಿರುವರೆಂದು ಹೇಳಿದರು. ಆ ಯುವಕರು ಗಾಂಧೀಜಿಯನ್ನು ಒಪ್ಪಿಕೊಂಡರೆ ತಮ್ಮ ಸಹಭಾಗಿಯನ್ನು ಒಪ್ಪಿಕೊಳ್ಳಬೇಕೆಂದು ಕೇಳಿಕೊಂಡರು.

ಗಾಂಧೀಜಿಯವರು ಸುಹ್ರವರ್ದಿಯವರನ್ನು ಮುಂದಕ್ಕೆ ಕರೆತಂದು, ಅವರ ಭುಜದ ಮೇಲೆ ಕೈಯಿರಿಸಿ ನಿಂತರು. ಆ ಯುವಕರು "ನೀವು ಹಿಂದಿನ ವರ್ಷದ ಅಮಾನುಷ ಹತ್ಯಾಕಾಂಡದ ಹೊಣೆಯನ್ನು ಹೊತ್ತುಕೊಳ್ಳುವಿರಾ ?" ಎಂದು ಒಬ್ಬ ಯುವಕ ಅವರನ್ನು ಕೇಳಿದ. ಜೋರಾಗಿ ಉದ್ರೇಕದಿಂದ ಕಿರುಚುತ್ತಾ. 'ನಾನು ಆ ಹೊಣೆಯನ್ನು ಒಪ್ಪಿಕೊಳ್ಳುತ್ತೇನೆ, ಅದಕ್ಕಾಗಿ ಲಜ್ಜೆಯಿಂದ ಪರಿತಪಿಸುತ್ತೇನೆ" ಎಂದರು ಸುಹ್ರವರ್ದಿ.

'ಆ ಘಳಿಗೆ', ಗಾಂಧೀಜಿ ನನ್ನೊಂದಿಗೆ ಕೆಲನಿಮಿಷಗಳ ನಂತರ ಹೇಳಿದರು, "ಅದೊಂದು ನಿರ್ಣಾಯಕ ಘಳಿಗೆ", ಇಂತಹ ಬಿಗಿ ವಾತಾವರಣವನ್ನು ತಿಳಿಗೊಳಿಸಲು ಸಾರ್ವಜನಿಕವಾಗಿ ತಪ್ಪೊಪ್ಪಿಕೊಳ್ಳುವುದಕ್ಕಿಂತ, ಮತ್ತಿನ್ನೊಂದು ಪರಿಣಾಮಕಾರಿಯಾದ ವಿಧಿ ಇಲ್ಲ. ಆ ಕ್ಷಣವಲ್ಲಿ ಆತ ಆ ಪ್ರಕ್ಷುಬ್ಧ ಜನರನ್ನು ಗೆದ್ದಿದ್ದರು.

ಸುಹ್ರವರ್ದಿ ಮಾತಾಡುತ್ತಿದ್ದಾಗ, ನಗರದ ಮತ್ತೊಂದೆಡೆಯಿಂದ ಸುದ್ದಿ ಬಂತು. ಕೆಲ ಮುಸ್ಲಿಮರು ಭಾರತದ ರಾಷ್ಟ್ರೀಯ ಧ್ವಜವನ್ನು ಹಾರಿಸಲು ಹಿಂದೂಗಳಿಗೆ ಸಹಾಯ ಹಸ್ತವನ್ನು ನೀಡಿದರೆಂದು. ಗಾಂಧೀಜಿಯವರ ಗೃಹದ ಹೊರಗಿದ್ದ ಜನರ ಗುಂಪು ಇದನ್ನು ಕೇಳಿ ಜಯಕಾರಗೈದಿತು.

ಗಾಂಧೀಜಿಯವರಿಗೆ ಭಾರತೀಯರು ಮೊದಲಿನ ಕೆಲಸ ಮೊದಲು ಮಾಡಬೇಕು ಮತ್ತೆ ಸ್ವತಂತ್ರದಿನವನ್ನು ಬರೀ ಮಜಾ ಮಹೋತ್ಸವವನ್ನಾಗಿ ಪರಿವರ್ತಿಸಬಾರದೆಂದು ತೀವ್ರವಾಗಿ ಆಲೋಚಿಸುತ್ತಿದ್ದರು. ಅವರೊಂದಿಗೆ ಆಗಸ್ಟ್ ೧೫ರಂದು ಇದ್ದ ಜನ ಪ್ರಾರ್ಥನೆ ಮತ್ತು ಉಪವಾಸದಲ್ಲಿ ಭಾಗಿಯಾಗಿದ್ದರು. ರಾಷ್ಟ್ರೀಯ ಜೀವನದ ಪ್ರತಿಯೊಂದು ನಿರ್ಣಾಯಕ ಕ್ಷಣದಲ್ಲಿ ಮೊದಲು ದೇವದೇವನಿಗೆ ಹೃತ್ಪೂರ್ವಕ ಪ್ರಣಾಮಗಳನ್ನರ್ಪಿಸುವುದು ಯೋಗ್ಯವಾದ ವಿಧಿ.

ಅಂದು ಉಪವಾಸ ಮಾಡುವುದು ಸಹ ಉಚಿತವಾದದ್ದೇ. ಏಕೆಂದರೆ ಭಾರತದ ಹಳ್ಳಿಹಳ್ಳಿಗಳಲ್ಲಿರುವ ದಶದಶಲಕ್ಷ ಬಡಜನ, ತಮಗೆಷ್ಟೇ ಇಚ್ಛೆಯಾದರೂ ಆ ದಿನ ಹೆಚ್ಚು ಹೆಚ್ಚು ತಿಂದು, ಸ್ವಾತಂತ್ರ್ಯದಿನವನ್ನಾಚರಿಸಲಾಗುತ್ತಿರಲಿಲ್ಲವೆಂಬುದನ್ನು ನೆನಪಿಗೆ ತರಲು ಈ ಉಪವಾಸ ಅಗತ್ಯ. ಪಾಶ್ಚಾತ್ಯರ ಆಡಳಿತದಿಂದ ಮುಕ್ತಿಹೊಂದಿ ಸ್ವತಂತ್ರರಾದ, ನಮ್ಮ ಮೂಲೋದ್ದೇಶ ನಮ್ಮ ಮಹಾ ದಾರಿದ್ರ್ಯವನ್ನು ಜಯಿಸುವುದೇ ಆಗಿದೆ. ನಮ್ಮ ಸ್ವಾತಂತ್ರ್ಯದ ಮೊದಲ ದಿನ, ನಾವು ಬಡವರನ್ನು ಮತ್ತು ಹಸಿವವರನ್ನು ಮರೆಯಬಾರದು.

ನಾವು ಬ್ರಾಹ್ಮೀ ಮುಹೂರ್ತದ ಮೂರು ಘಂಟೆಗೆ ಪ್ರಾರ್ಥನೆಯನ್ನಾರಂಭಿಸಿದೆವು. ತಕ್ಷಣ ನಾವು ಹಾಡುಗಳನ್ನು ಕೇಳಿದೆವು. ಮಹರ್ಷಿ ರವೀಂದ್ರನಾಥ ಟಾಗೋರ್‌ರವರಿಂದ ರಚಿಸಲ್ಪಟ್ಟ, ಸ್ವಾತಂತ್ರ್ಯ ಗೀತೆಗಳನ್ನು ಹಾಡುತ್ತಾ ಮಹಾತ್ಮರನ್ನು ಸ್ವಾಗತಿಸಲು ಶಾಲಾ ಬಾಲಕಿಯರು ಖುಷಿಯಿಂದ ಬರುತ್ತಿದ್ದರು. ಅವರು ನಾವು ಪ್ರಾರ್ಥನಾಶ್ಲೋಕಗಳನ್ನು ಹಾಡುತ್ತಿದ್ದುದನ್ನು ನೋಡಿ ನಮ್ಮೊಂದಿಗೆ ತಮ್ಮ ಸುಕೋಮಲ ಧ್ವನಿಯನ್ನು ಸೇರಿಸಿ, ಮಹಾತ್ಮರಿಂದ ಆಶೀರ್ವಾದ ಪಡೆದು ಹೊರಟುಹೋದರು. ಅನಂತರ ನಾವೆಲ್ಲ, ನಮ್ಮ ನಿತ್ಯವಿಧಿಗಳನ್ನು ಎಂದಿನಂತೆ ಮಾಡುತ್ತಾ, ನಗರದಲ್ಲೆಲ್ಲಾ ಏನೇನು ನಡೆಯುತ್ತಿದೆ ಎಂದು ಆಶ್ಚರ್ಯಗೊಳ್ಳುತ್ತಿದ್ದೆವು. ಹಿಂದೂಗಳು ಮುಸ್ಲಿಮರನ್ನು ಕೊಚ್ಚಿಹಾಕುತ್ತಿದ್ದಾರಾ?

ಬೆಳಗ್ಗೆ ೧೦ ಘಂಟೆಯ ಹೊತ್ತಿಗೆ ನನ್ನಗೆಳೆಯರಾರೋ ನನ್ನನ್ನು ನೋಡಲು ಬಂದರು "ನೀನು ಅಲ್ಲೇ ಇಡೀ ದಿನ ಕಳೆಯಬಾರದು. ಹೊರಗೆ ಬಂದು ನೋಡು" ಎಂದು ಹೇಳಿ ನನ್ನನ್ನು ಹೊರಗೆ ಕರೆದೊಯ್ದರು. ಮತ್ತೆ ಆಗ ನಾನು ನೋಡಿದೆ, ಅದ್ಭುತ ಪವಾಡ ನಡೆದಿತ್ತು! ಒಂದು ವರ್ಷದ ಗಾಢಾಂಧಕಾರದ ನಂತರ ಸೂರ್ಯ ಭಗವಾನ್ ತನ್ನೆಲ್ಲ ದಿವ್ಯೋಜ್ವಲ ಪ್ರಭೆ ಇಂದ ಬೆಳಗುತ್ತಿದ್ದ, ಎಂದಾದರೂ ಯಾವಾಗಲಾದರೂ ಒಂದು ಇಡೀ ಮಹಾನಗರ ಅತ್ಯಂತ ಸಂತಸದಿಂದ ಮತ್ತೇರಿ ಉನ್ಮತ್ತವಾಗಿತ್ತೆಂದರೆ ಅದು ಆಗಸ್ಟ್ ೧೫ ನೇ ತಾರೀಖಿನ ೧೯೪೭ ನೇ ಇಸವಿಯ ಮಹಾನಗರ ಕಲ್ಕತ್ತ!

ಪ್ರತಿಯೊಬ್ಬರೂ ಕಲ್ಕತ್ತದ ಪವಾಡದ ಬಗೆಗೆ ಮಾತಾಡುತ್ತಿದ್ದರು. ಮತ್ತೆ ಪೂರ್ವಬಂಗಾಲದ ಒಡೆಯರು ತಮ್ಮ ತಮ್ಮ ಪಾತ್ರವನ್ನು ಸಮರ್ಪಕವಾಗಿ ನಿರ್ವಹಿಸಿದ್ದರು. ಇಡೀ ಬಂಗಾಲ ಈ ಮಹಾದಿನವನ್ನು ಶಾಂತಿಯಿಂದ, ವೈಭವದಿಂದ ಆಚರಿಸುತ್ತಿತ್ತು. ನವದೆಹಲಿಯಲ್ಲಿ ಸ್ವತಂತ್ರ ದಿನಾಚರಣೆ

ಮಹೋತ್ಸವದಲ್ಲಿ ಪಾಲ್ಗೊಂಡ ಲಾರ್ಡ್ ಮೌಂಟ್‌ಬೇಟನ್ನರು 'ಏಕವ್ಯಕ್ತಿ ಶಕ್ತಿ' ಯ ಪರಿಣಾಮದ ಬಗೆಗೆ ಮಾತನಾಡಿದರು.

ಕಲ್ಕತ್ತಾ ನಗರದಲ್ಲಿ ಆಗಸ್ಟ್ ೧೫ ರಂದು ನಡೆದ ಅದ್ಭುತ ಬದಲಾವಣೆ ಯನ್ನು 'ಅಸದೃಶ ಪವಾಡ' ವೆಂದು ಕರೆಯಬಹುದೇ ಹೇಗೆ ಎಂಬುದು ಆ ಪದಕ್ಕೆ ಇರುವ ಅರ್ಥದ ಮೇಲೆ ನಿಂತಿದೆ. ಆದರೆ ಎರಡು ಮಹಾನ್ ಧಾರ್ಮಿಕ ಪಂಗಡಗಳು, ಪರಸ್ಪರ ದ್ವೇಷವನ್ನು ತ್ಯಜಿಸಿ, ಮಹಾತ್ಮಾಗಾಂಧಿಯವರು ಮತ್ತು ಅವರ ಕಟುಟೀಕಾಕಾರರಾದ ಸುಹ್ರವರ್ದಿಯವರ 'ಅದ್ವಿತೀಯ ಸೌಜನ್ಯಪೂರ್ಣ ಸ್ನೇಹದ ಒಪ್ಪಂದದ ಉನ್ನತ ಮೇಲ್ಪಂಕ್ತಿ ಇಲ್ಲದಿದ್ದಲ್ಲಿ, ಅಷ್ಟು ಶೀಘ್ರವಾಗಿ ಈ ಪರಿವರ್ತನೆ ನಡೆಯುತ್ತಿತ್ತೆಂಬುದು ನಂಬಲಸಾಧ್ಯ.

ಹಾಗೆಂದರೆ ಇಡೀ ಕಲ್ಕತ್ತೆಯ ಜನ ಇದ್ದಕ್ಕಿದ್ದಂತೆ ಸಂತರಾದರೆಂದರ್ಥವಲ್ಲ. ವಾಸ್ತವವಾಗಿ ಮುಸ್ಲಿಮರ ಮೇಲೆ ಬದ್ಧ ವೈರತ್ವವಿದ್ದ ಕೆಲ ಹಿಂದೂ ಯುವಕರು ಕಲ್ಕತ್ತೆಯ ಹೊಸ ಶಾಂತಿಯನ್ನು ಛಿದ್ರಗೊಳಿಸಲು ಬದ್ಧಕಂಕಣರಾಗಿ, ಗಾಂಧೀಜಿಯವರ ಮೇಲೆ ಆಕ್ರಮಣಗೈಯಲು ವಿಫಲ ಯತ್ನಗೈದರು. ಈ ಅಮಾನುಷ ವರ್ತನೆಯನ್ನು ಸಹಿಸಲಾರದ ಗಾಂಧೀಜಿಯರು ಅಮರಣಾಂತ ಉಪವಾಸಗೈಯಲಾರಂಭಿಸಿದರು. ಆದರೆ ಕಲ್ಕತ್ತೆಯ ಜನತೆ, ಹಿಂಸಾಚಾರದ ಮೇಲೆ ಯಾವ ಆಸಕ್ತಿಯನ್ನೂ ತೋರಿಸದಿದ್ದುದರಿಂದ ಶೀಘ್ರವೇ ಶಾಂತಿ ಉಪ ಸ್ಥಿತವಾಯಿತು.

ಕಳೆದ ೩೬ ವರ್ಷಗಳಿಂದಲೂ ಮತೀಯ ಹಿಂಸಾಚಾರದ ಪ್ರಕರಣಗಳು, ಅಲ್ಲಲ್ಲಿ ನಡೆಯುತ್ತಿದ್ದರೂ ಒಟ್ಟಿನಲ್ಲಿ ಕಲ್ಕತ್ತಾ ನಗರ ಭಯ ಮತ್ತು ದ್ವೇಷ ಗಳಿಂದ ಆಳಲ್ಪಟ್ಟು ಹಗೆತನ ಮತ್ತು ವಿರೋಧಗಳಿಂದ ಇಬ್ಭಾಗವಾಗಲು ತಿರಸ್ಕರಿಸಿದೆ.

ಹೆಚ್ಚಾಗಿ ಜನ ತಮ್ಮ ನೆರೆಯವರೊಂದಿಗೆ ಶಾಂತಿ ಸೌಹಾರ್ದದಿಂದಲೇ ಇನ್ನೂ ವಾಸಿಸುತ್ತಿದ್ದಾರೆ.

ಶ್ರೀಮತಿ ಗೌರಮ್ಮ ಕೆ. ಬಸವಯ್ಯ

ಪೂರ್ವಿಕರ ಉತ್ತಮತ್ವವನ್ನು ಹೇಳಿಕೊಂಡು ಅದರಿಂದಲೇ ನಾವು ಉತ್ತಮರೆಂದು ತಿಳಿದು ಸುಮ್ಮನಾಗುವುದಕ್ಕಿಂತ ಈಗ, ಈಗಿನ ಸ್ವಪರಿ ಶ್ರಮದಿಂದ ಉತ್ತಮರೆನಿಸಿಕೊಳ್ಳಬೇಕಾಗಿದೆ.

—ಡಾ॥ ರಾಧಾಕೃಷ್ಣನ್

ನಿಷ್ಕಾಮ ಕರ್ಮಯೋಗಿ
ತಗಡೂರು ರಾಮಚಂದ್ರರಾವ್‌ರಿಗೆ ಪ್ರಶಸ್ತಿ

ಅದ್ವಿತೀಯ ರೀತಿ ರಚನಾತ್ಮಕ ಕಾರ್ಯಕ್ಷೇತ್ರದಲ್ಲಿ ಆರೂವರೆ ದಶಕಗಳಿಂದ ಅವ್ಯಾಹತ ಸೇವೆ ಸಲ್ಲಿಸಿಕೊಂಡು ಬಂದಿರುವ ಕನ್ನಡಿಗ ಶ್ರೀ ತಗಡೂರು ರಾಮಚಂದ್ರರಾವ್ ಅವರಿಗೆ ಜಮ್ನಾಲಾಲ್ ಬಜಾಜ್ ಪ್ರತಿಷ್ಠಾನದ ೧೯೮೬ರ ಒಂದು ಲಕ್ಷ ರೂ. ಬಹುಮಾನ ಮತ್ತು ಪ್ರಶಸ್ತಿ ನೀಡಲು ನಿರ್ಧರಿಸ ಲಾಗಿದೆ.

೧೮೯೮ರ ಅಕ್ಟೋಬರ್ ೬ ರಂದು ನಂಜನಗೂಡು ಸಮೀಪದ ಹನುಮನಪುರ ದಲ್ಲಿ ಶ್ಯಾನುಭೋಗ್ ಸೂರ್ಯನಾರಾಯಣಪ್ಪ ಮತ್ತು ಲಕ್ಷ್ಮಮ್ಮ ದಂಪತಿಗಳ ಮಗನಾಗಿ ಜನಿಸಿದ ರಾಮಚಂದ್ರರಾಯರು ಪ್ರೌಢಶಾಲಾ ಶಿಕ್ಷಣದ ಹಂತ ದಲ್ಲಿರುವಾಗಲೆ ಸ್ವಾತಂತ್ರ್ಯ ಸಮರಕ್ಕೆ ಧುಮುಕಿ, ಸ್ವದೇಶಿ ಚಳುವಳಿಯ ಕಾರ್ಯವನ್ನು ವ್ಯಾಪಕವಾಗಿ ಕೈಗೊಂಡರು! ನಮ್ಮ ಬಟ್ಟೆ ನಾವೆ ನೇಯ್ದು ಕೊಳ್ಳಬೇಕು ಎಂದು ಮರಾತ ಹಚ್ಚಿ, ತಗಡೂರು ಗ್ರಾಮವನ್ನೆ ಆ ಕಾರ್ಯಕ್ಕೆ ಕೇಂದ್ರವಾಗಿಸಿ, ಆ ಊರಿಗೆ ರಾಷ್ಟ್ರವ್ಯಾಪಿ ಪುರಸ್ಕಾರ ದೊರಕಿಸಿಕೊಟ್ಟರು. ತಾವು ಸಹ ತಮ್ಮ ಹೆಸರಿನ ಮುಂದೆ ಆ ಊರಿನ ಹೆಸರನ್ನೆ ಅಂಕಿತವಾಗಿಟ್ಟು ಕೊಂಡು ರಾರಾಜಿಸಿದರು.

ಅಹಿಂಸೆಯ ಪ್ರತಿಮೂರ್ತಿ ಮಹಾತ್ಮ ಗಾಂಧೀಜಿ ಅವರ ನಿಕಟವರ್ತಿಯಾಗಿ, ಸೇವಾಗ್ರಾಮಕ್ಕೂ ತೆರಳಿ ರಚನಾತ್ಮಕ ಸೇವೆಯನ್ನು ಮೈಗೂಡಿಸಿಕೊಂಡರು.

ವೈಯಕ್ತಿಕ ಜೀವನ ಹಾಗೂ ಸಾಮಾಜಿಕ ಜೀವನದಲ್ಲೂ ಕ್ರಾಂತಿಕಾರಿಯಾಗಿ ನಡೆದುಕೊಂಡ ತಗಡೂರರು, ವಿಧವೆಯೊಬ್ಬರನ್ನು ಬಂಧುಮಿತ್ರ ಅಡೆತಡೆ ಧಿಕ್ಕರಿಸಿ ವಿವಾಹವಾದರು.

ಬಹಳ ಮಡಿವಂತಿಕೆಯಿದ್ದ ಈ ಶತಮಾನದ ಎರಡು ಮೂರನೆ ದಶಕದಲ್ಲಿ ನಂಜನಗೂಡು ಶ್ರೀಕಂಠೇಶ್ವರ ದೇವಾಲಯ ಮತ್ತು ಟಿ. ನರಸೀಪುರದ ಶ್ರೀ ಗುಂಜಾನರಸಿಂಹಸ್ವಾಮಿ ದೇವಾಲಯಕ್ಕೆ ಹರಿಜನ ಪ್ರವೇಶ ಮಾಡಿಸುವಲ್ಲಿ ಅಗ್ರ ನಾಯಕತ್ವ ವಹಿಸಿದ್ದರು. ಅಲ್ಲದೆ ತಗಡೂರಿನಲ್ಲಿ ಹರಿಜನರಿಗಾಗಿ ಸ್ವತಃ ವಿದ್ಯಾರ್ಥಿನಿಲಯ ಪ್ರಾರಂಭಿಸಿ ಇತರೆ ವಿದ್ಯಾರ್ಥಿಗಳೊಡನೆ ಸಹಾಧ್ಯಯನಕ್ಕೆ

ಆಸ್ಪದ ಮಾಡಿಸಿದ ಕೀರ್ತಿ ತಗಡೂರು ರಾಮಚಂದ್ರರಾಯರದ್ದು.

ಮೈಸೂರಿಗೆ ೧೯೨೭ ಮತ್ತು ೧೯೩೪ ರಲ್ಲಿ ಎರಡು ಸಲ ಮಹಾತ್ಮ ಗಾಂಧಿಯವರನ್ನು ಕರೆಸಿ ಅನುಕ್ರಮವಾಗಿ "ಖಾದಿ ಪ್ರವಾಸ" ಹಾಗೂ "ಹರಿಜನ ಪ್ರವಾಸ" ಮಾಡಿಸಿದರು. ಅಷ್ಟೇ ಅಲ್ಲ ಮಹಾತ್ಮಗಾಂಧಿಯವರನ್ನು ತಗಡೂರಿಗೆ ಕರೆದೊಯ್ದ ದಿಟ್ಟತನ ರಾಯರದ್ದು.

ತಗಡೂರು ರಾಮಚಂದ್ರರಾಯರು ೧೯೩೮ ರಲ್ಲಿ ಮಂಡ್ಯ ಬಳಿಯ ಶಿವಪುರದಲ್ಲಿ ನಡೆದ ಐತಿಹಾಸಿಕ ಧ್ವಜ ಸತ್ಯಾಗ್ರಹದಲ್ಲಿ ವಹಿಸಿದ ಸೂತ್ರಧಾರನ ಪಾತ್ರ ಆಗಿನ ಆಂಗ್ಲ ಆಳರಸರ ಬೇಹುಗಾರರಿಗೆ ಚಳ್ಳೆಹಣ್ಣು ತಿನ್ನಿಸಿದರು. ರಾಯರು ಧ್ವಜಾರೋಹಣ ಮಾಡಿದರಲ್ಲದೆ, ಇತರ ಸ್ವಾತಂತ್ರ್ಯ ಹೋರಾಟಗಾರರು ಬಂಧಿತರಾಗುತ್ತಿದ್ದ ಗಡಿಬಿಡಿಯಲ್ಲಿ ಪೋಲೀಸರ ಕಣ್ತಪ್ಪಿಸಿ ಬಂದು, ತೆರೆಮರೆಯಲ್ಲಿ ನಿಂತು, ಮತ್ತಷ್ಟು ಜನರನ್ನು ಜಮಾಯಿಸಿ ಇನ್ನಷ್ಟು ದಿನ ಸತ್ಯಾಗ್ರಹ ಮುಂದುವರಿಯುವಂತೆ ಸಾಹಸ ಮಾಡಿದರು.


ಮೈಸೂರಿನ ಅಶೋಕ ರಸ್ತೆಯಲ್ಲಿರುವ ಈಗಿನ ಕೇಂದ್ರ ಪೋಲೀಸ್ ಠಾಣೆಗೆ ವಿದೇಶೀಯ "ಹ್ಯಾಮಿಲ್ಟನ್"ನ ಹೆಸರಿಟ್ಟಾಗಲೂ ಉಗ್ರ ಪ್ರತಿಭಟನಾ ಚಳುವಳಿ ನಡೆಯಿತು. ಆಗ ನಡೆಸಿದ ಪ್ರತಿಭಟನಾ ಪ್ರದರ್ಶನ ಕಾಲದಲ್ಲಿ ಸ್ಥಿರವಾಗಿ ನಿಂತ ರಾಮಚಂದ್ರರಾಯರಿಗೆ ಲಾಠಿಯಲ್ಲಿ ಹೊಡೆಯುತ್ತಿದ್ದ ಪೋಲೀಸ್ ಪ್ಯಾದೆ, ಅನೇಕ ಸಲ ಲಾಠಿ ಬೀಸಿ ಬೀಸಿ ಸುಸ್ತಾಗಿ ಬಿದ್ದರೂ ರಾಯರು ನಿಂತ ಕಡೆಯಿಂದ ಅಲುಗಾಡದೆ ದೇಶಭಕ್ತಿಯ ಘೋಷಣೆ ಕೂಗುತ್ತಿದ್ದುದು ಅವರ ಸ್ಥೈರ್ಯಕ್ಕೊಂದು ನಿದರ್ಶನ. ಒಮ್ಮೆ ಬ್ರಿಟಿಷರು ತ್ರಿವರ್ಣ ಧ್ವಜವನ್ನೇ ನಿಷೇಧಿಸಿದಾಗ ರಾಯರು ತ್ರಿವರ್ಣದಲ್ಲೇ ಜುಬ್ಬಾ ಹೊಲಿಸಿ, ಧರಿಸಿ ಆಂಗ್ಲರನ್ನು ನಿಬ್ಬೆರಗಾಗಿಸಿದರು.

೧೯೪೭ ರಲ್ಲಿ ಭಾರತಕ್ಕೆ ಸ್ವಾತಂತ್ರ್ಯ ಬಂದ ಬಳಿಕ ಬಂದ ತಾಮ್ರಪತ್ರಗಳು, ಸ್ವಾತಂತ್ರ್ಯ ವೇತನಗಳೊಂದನ್ನೂ ಸ್ವೀಕರಿಸದ ರಾಮಚಂದ್ರರಾಯರು, ಪತ್ರ ಹಾಗೂ ಹಣಕ್ಕಾಗಿ ನಾನು ಹೋರಾಟ ಮಾಡಲಿಲ್ಲ. ನಮ್ಮ ನಾಡಿನ ಆಡಳಿತವನ್ನು ನಾವೇ ನೋಡಿಕೊಳ್ಳಬೇಕೆಂಬ "ಸ್ವರಾಜ್ಯ ಸ್ಥಾಪನೆ" ಆಗಬೇಕೆಂಬುದೊಂದೆ ನನ್ನ ಆಜೀವ ಹಂಬಲವಾಗಿದೆ ಎನ್ನುವ ರಾಯರು, ಯಾವ ರಾಜಕೀಯ ಅಧಿಕಾರ ಸ್ಥಾನಕ್ಕೂ ಆಸೆ ಪಡದೆ ಯಾವ ಪಕ್ಷದ ಸದಸ್ಯರು ನಿಷ್ಕಾಮ ಕರ್ಮಯೋಗಿ ರಚನಾತ್ಮಕ ಕಾರ್ಯ ಮುಂದುವರಿಸಿದವರು.

ಈಗ ದೇಹಾಲಸ್ಯದಿಂದ ಹಾಸಿಗೆ ಹಿಡಿದು, ಲಕ್ಷರ ಅಂಚಿಗೆ ಬಂದಿರುವ

ತಗಡೂರರು "ಆಂಗ್ಲರ ಆಡಳಿತವೇನೋ ಹೋಯಿತು. ಆಡಳಿತ ನಮ್ಮ ಜನರದ್ದೇ ಆಯಿತು. ಆದರೆ ಆಗಲೇಬೇಕಾದ ಸುಧಾರಣೆಗಳು ಆಗಲಿಲ್ಲ. ಏರುಪೇರುಗಳು ಸರಿಪಡಿಸಲಿಲ್ಲ. ಜನಸಾಮಾನ್ಯರ ಹಿತಚಿಂತನೆ ಮೊದಲು ಆಗಬೇಕು. ಅಧಿಕಾರ ಸೂತ್ರ ಹಿಡಿದವರು, ನಾವು ಜನರ ಸೇವಕರು ಎಂದು ಅರಿತು ನಡೆಯಬೇಕು ಎಂದು ಸಂಕಲ್ಪಚಿತ್ತರಾಗಿ ಇಂದಿಗೂ ಹೇಳುತ್ತಾರೆ ರಾಯರು. ಅವರ ಜೀವನ ಗುರಿ, ಕಾರ್ಯ ಸದಾ ಆದರ್ಶಕರ.

ಹ. ಲ. ಶ್ರೀಕಂಠಮೂರ್ತಿ



ಒಬ್ಬರನ್ನು ಇನ್ನೊಬ್ಬರು ಸುಲಿಗೆ ಮಾಡದೆ, ದೇವರು, ಜಾತಿ, ಮತಗಳೆಂಬ ಒತ್ತಾಯಗಳಿಲ್ಲದ ಸ್ವತಂತ್ರ ಬಾಳುವೆ ಹಾಗೂ ಸಿರಿತನದ ಸೊಕ್ಕಿಲ್ಲದ ಸರಳ ನಡೆ-ನುಡಿಯ ಜೀವನವೇ ಪ್ರಜಾಪ್ರಭುತ್ವದ ಲಕ್ಷಣಗಳು.

—ವಾಲ್ಟ್ ವಿಟ್‌ಮನ್


ಮಾನವನು ಮಾಡುವ ಪ್ರತಿಯೊಂದು ಕೆಲಸಕ್ಕೂ ಉಚಿತ ಸಮಯವೊಂದಿದೆ ಮತ್ತು ಪ್ರತಿ ಸಮಯಕ್ಕೆ ಆತನು ಮಾಡಬೇಕಾದ ಉಚಿತ ಕೆಲಸವೂ ಒಂದಿದೆ.

—ಲಾಂಗ್‌ಫೆಲೊ

ಮೂರ್ಖನು ಸ್ವಲ್ಪವನ್ನು ತಿಳಿಸಲು ಹೆಚ್ಚು ಮಾತಾಡುತ್ತಾನೆ, ಜ್ಞಾನಿಯು ಸ್ವಲ್ಪ ಮಾತು ಬಳಸಿ ಹೆಚ್ಚು ತಿಳಿಸುತ್ತಾನೆ.

—ಸಾಕ್ರಟೀಸ್

ಮೂಗೂರು ಜೇಜಮ್ಮ



ಕರ್ನಾಟಕದ ನಾಟ್ಯ ಪರಂಪರೆಯ ಆಧಾರಸ್ತಂಭಗಳಲ್ಲಿ ಒಬ್ಬರೂ ಹಳೆಯ ತಲೆಮಾರಿನ ಪಳೆಯುಳಿಕೆಯಾಗಿದ್ದ ರಾಜ್ಯ ಅಕಾಡೆಮಿ ಪ್ರಶಸ್ತಿ ವಿಜೇತೆ ಶ್ರೀಮತಿ ಮೂಗೂರು ಜೇಜಮ್ಮನವರು ತಮ್ಮ ೮೬ ವರ್ಷಗಳ ತುಂಬು ಬಾಳನ್ನು ಬಾಳಿ, ಮೈಸೂರಿನಲ್ಲಿರುವ ತಮ್ಮ ನಿವಾಸದಲ್ಲಿ ೧೫—೮—೧೯೮೩ ರಂದು ಮುಂಜಾನೆ ಇನ್ನಿಲ್ಲವಾದರು.

ಕರ್ನಾಟಕದ ನಾಟ್ಯ ಸಂಪ್ರದಾಯಗಳಲ್ಲಿ ನಾಟ್ಯಸರಸ್ವತಿ ಜೆಟ್ಟಿ ತಾಯಮ್ಮನವರು ಪಂಥ ಅಭಿನಯಕ್ಕೆ ಹೆಸರಾಗಿದ್ದರೆ ಮೈಸೂರು ಮಹಾರಾಜರ ಆಸ್ಥಾನದಲ್ಲಿ ಇತಿಹಾಸದಲ್ಲೇ ಏಕೈಕ ನಟುವಾಂಗದವರಾಗಿದ್ದ ಮೂಗೂರು ಅಮೃತಪ್ಪನವರ ನಾಟ್ಯಶೈಲಿ ವೈವಿಧ್ಯಪೂರ್ಣ, ಖಚಿತ ಪದವಿನ್ಯಾಸಗಳಿಗೆ ಹೆಸರಾದುದು. ಮೂಗೂರು ತಿಬ್ಬಾದೇವಿ ದೇವಸ್ಥಾನದ ಒಕ್ಕಲಾಗಿದ್ದ ದೇವದಾಸೀ ಸಂಪ್ರದಾಯದ ಹಿರಿಯ ಕಲಾವಿದೆ ಶ್ರೀಮತಿ ಜೇಜಮ್ಮ ಅಮೃತಪ್ಪನವರ ಶೈಲಿಯನ್ನು ಉಳಿಸಿಕೊಂಡು ಬಂದವರು.

ಸಂಗೀತದಲ್ಲಿ ಹಠಸಾಧಕರಾದ ದಿವಂಗತ ಮೂಗೂರು ಸುಬ್ಬಣ್ಣನವರ ಭಾವಮೈದುನ ಶ್ರೀ ಮೂಗೂರು ನಟುವಾಂಗದ ಅಮೃತಪ್ಪನವರ, ಗುರುಗಳು ತಂಜಾವೂರಿನ ಶ್ರೀ ಗುಂಡಪ್ಪನವರು. ೧೨–೫–೧೮೯೭ರಲ್ಲಿ ಜನಿಸಿದ ಜೇಜಮ್ಮ ತಾತ ಅಮೃತಪ್ಪನವರಲ್ಲಿ, ಅನಂತರ ತಮ್ಮ ತಾಯಿ ಗೌರಮ್ಮನವರಲ್ಲಿ ನಾಟ್ಯಾಭ್ಯಾಸವನ್ನೂ, ಕೀರ್ತಿಶೇಷ ಮಳವಳ್ಳಿ ಸುಬ್ಬಣ್ಣ ಹಾಗೂ ಸಂಗೀತ ವಿದ್ವಾನ್ ತಮ್ಮಯ್ಯ ಅವರಲ್ಲಿ ಸಂಗೀತಾಭ್ಯಾಸವನ್ನೂ, ಮರಿಯಾಲ ಮಠದ ಮಹಾಂತ ಸ್ವಾಮಿಯವರಿಂದ ಸಂಸ್ಕೃತ ಭಾಷಾಭ್ಯಾಸವನ್ನೂ ಮಾಡಿದರು.

ನಾಟಕ-ಚಲಚ್ಚಿತ್ರ :

ಇಂದಿಗೆ ೬೩ ವರ್ಷಗಳ ಹಿಂದೆ ಮೂಗೂರು ತಿಬ್ಬಾದೇವಿಯ ಹೆಸರಿನಲ್ಲಿ ಸ್ತ್ರೀನಾಟಕ ಕಂಪನಿಯನ್ನು ಆರಂಭಿಸಿದ ಜೇಜಮ್ಮನವರು 'ಹಿರಣ್ಯಕಶಿಪು' ಹಾಗೂ 'ಮಂದಾರವಲ್ಲಿ' (ಗುಲೇಬಕಾವಲಿಯಲ್ಲಿ) ಪಾತ್ರಗಳನ್ನು ವಹಿಸಿದ್ದರು. ೧೯೭೦ರಲ್ಲಿ ಶ್ರೀ ಪಂತಲು ಅವರ 'ಗಂಡೊಂದು ಹೆಣ್ಣಾರು' ಎಂಬ ಚಲಚ್ಚಿತ್ರದಲ್ಲೂ ಪಾತ್ರ ವಹಿಸಿದ್ದರು.

ಗೌರವ–ಪ್ರಶಸ್ತಿ :

೧೯೫೬ರಿಂದ ಮಡಿಕೇರಿ ಸಂಗೀತ ನಾಟಕ ಅಕಾಡೆಮಿಯಲ್ಲಿ ನಾಟ್ಯ ಶಿಕ್ಷಕರಾಗಿ ಸುಮಾರು ೧೦ ವರ್ಷ ದುಡಿದ ಜೇಜಮ್ಮನವರಿಗೆ ರಾಜ್ಯ ಸಂಗೀತ ನಾಟಕ ಅಕಾಡೆಮಿ ೧೯೬೩ರಲ್ಲಿ ಪ್ರಶಸ್ತಿ ನೀಡಿ ಗೌರವಿಸಿತು. ೧೯೭೦ರಲ್ಲಿ ಗಾನವಿಶಾರದ ಶ್ರೀ ಬಿ. ದೇವೇಂದ್ರಪ್ಪನವರ ಮಾರುತಿ ಮಂದಿರದಲ್ಲಿ ಸೇರಿದ ವಿದ್ವಾಂಸರ ಸಭೆ ಇವರಿಗೆ 'ಭರತನಾಟ್ಯ ಪ್ರವೀಣೆ' ಎಂದು ಬಿರುದು ನೀಡಿ ಗೌರವಿಸಿತು.

ಶ್ರೀಮತಿ ಜೇಜಮ್ಮ ತಮ್ಮ ಬಾಳಿನ ಕೊನೆಯ ದಿನಗಳಲ್ಲೂ ಕಲೆಯ ಬಗ್ಗೆ ಶಿಷ್ಯರೊಡನೆ ಚರ್ಚಿಸುತ್ತಿದ್ದರು. ತಮ್ಮ ದೇವದಾಸೀ ಸಂಪ್ರದಾಯದ ಬಗ್ಗೆ ಹೆಮ್ಮೆಪಡುತ್ತಿದ್ದರು. ಇವರ ನೂರಾರು ಶಿಷ್ಯರಲ್ಲಿ ಶ್ರೀ ಕೆ. ಬಿ. ಮಾಧವ ರಾವ್, ಶ್ರೀಮತಿಯರಾದ ಉಷಾ ದಾತಾರ್, ಲಲಿತಾ ಶ್ರೀನಿವಾಸನ್ ಪ್ರಮುಖರಾಗಿದ್ದಾರೆ. ಹಿರಿಯ ಚೇತನದ ಅಗಲಿಕೆಯಿಂದ ನಾಟ್ಯರಂಗ ಬರಿದಾದಂತೆನಿಸಿದೆ.

ಕೆ. ಶಿವರಾಮ ಐತಾಳ

ಸ್ವರ್ಗವನ್ನು ಸಂಪಾದಿಸಬೇಕೆಂದಿದ್ದರೆ, ಚಿತ್ತಶುದ್ಧಿಯನ್ನು ಹೊಂದು. ಆಗ ನೀನು ಸತ್ತು ಸ್ವರ್ಗ ಪಡೆಯಬೇಕಾಗಿಲ್ಲ, ಅದು ನಿನ್ನಲ್ಲಿಯೇ ಬೆಳಗುವುದು.

—ಕಬೀರ್‌ದಾಸ

ತನ್ನಂತೆ ಪರರನ್ನು ಗೌರವಿಸಲು ಕಲಿಯದಿದ್ದರೆ ನಾವು ಎಂದೂ ದೊಡ್ಡ ಮನುಷ್ಯರಾಗಲಾರೆವು.

—ವಲ್ಲಭಬಾಯಿ ಪಟೇಲ

ಕವಿ ಮತ್ತು ಸಾಹಿತಿಗಳು ಏಕೆ ಆತ್ಮಹತ್ಯೆ ಮಾಡಿಕೊಳ್ಳುತ್ತಾರೆ?

ಮಾನಸಿಕ ದೌರ್ಬಲ್ಯಕ್ಕೆ ಒಳಗಾಗಿ ಆತ್ಮಹತ್ಯೆ ಮಾಡಿಕೊಂಡ ಹೆಸರಾಂತ ಕವಿಗಳ, ಕಲಾವಿದರ ಲೇಖಕರ, ದೊಡ್ಡ ಪಟ್ಟಿಯೇ ಉಂಟು. ಉಪವಾಸಮಾಡಿ, ವಿಷ ಸೇವಿಸಿ, ನೀರಿನಲ್ಲಿ ಮುಳುಗಿ, ನೇಣುಹಾಕಿಕೊಂಡು, ಅನಿಲ ಸೇವಿಸಿ, ಬೇರೆ ಉಪಾಯಕಾಣದೆ ಆತ್ಮಹತ್ಯೆಗೆ ಶರಣು ಹೋದ ಇಂಥ ಹೆಸರಾಂತ ವ್ಯಕ್ತಿಗಳ ಮಾನಸಿಕ ಸ್ಥಿತಿಯನ್ನು ಮನೋವಿಜ್ಞಾನದ ಹಿನ್ನೆಲೆಯಲ್ಲಿ ಇಲ್ಲಿ ಬಣ್ಣಿಸಲಾಗಿದೆ.

ಆತ್ಮಹತ್ಯೆ ಅವರ ಪಾಲಿಗೆ ಅನಿವಾರ್ಯವಾಗಿತ್ತು, ಏಕೈಕ ಮಾರ್ಗವಾಗಿತ್ತು.

ಶಾಲೆಯ ದಿನಗಳಲ್ಲಿ ನಾನು ಇಂಗ್ಲಿಷ್ ಸಾಹಿತ್ಯದ ವಿದ್ಯಾರ್ಥಿನಿಯಾಗಿದ್ದೆ. ಆಗ ನನಗೆ ಥಾಮಸ್ ಚಟರ್‌ಟನ್ ಎಂಬ ಎಳೆಯುವಯಸ್ಸಿನ ಕವಿಯ ಕೃತಿಗಳ ಪರಿಚಯವಾಗಿತ್ತು. ಚಟರ್‌ಟನ್ ಕೇವಲ ಹದಿನೇಳು ವರ್ಷ ವಯಸ್ಸಿನಲ್ಲಿಯೇ ವಿಷವುಂಡು ಆತ್ಮಹತ್ಯೆಮಾಡಿಕೊಂಡಿದ್ದ. ಭೀಕರ ಬಡತನ ಮತ್ತು ಹಸಿವೆಯೇ ಆತ್ಮಹತ್ಯೆಗೆ ಕಾರಣವಾಗಿತ್ತು. ಲಂಡನ್ನಿನ ಟೇಟ್ ಗ್ಯಾಲರಿಯಲ್ಲಿ ಅವನ ಕಡೆಯ ಕ್ಷಣಗಳನ್ನು ಮೂರ್ತರೂಪವಾಗಿ ತೋರಿಸುವ ಒಂದು ಕಲಾಕೃತಿ ನೇತಾಡುತ್ತಿದೆ. ಹೊಂಗೂದಲಿನ ಈ ಕಿಶೋರಕವಿ ಹಾಸಿಗೆಯ ಮೇಲೆ ಮಲಗಿರುವುದು ಕಂಡುಬರುತ್ತದೆ. ತಲೆ ಒಂದೆಡೆಬಾಗಿದೆ, ಮುಖದಮೇಲೆ ಒಂದುರೀತಿಯ ರೊಮ್ಯಾಂಟಿಕ್ ಕಳೆ ಮೂಡಿದೆ, ಇನ್ನೊಂದು ಕೈಯಿಂದ ಅಂಗಿಯ ತುದಿಯನ್ನು ಹಿಡಿದುಕೊಂಡಿದ್ದಾನೆ. ಉದ್ದದ ಬೆರಳುಗಳು ಯಾವುದೋ ಕವನದ ಹರಿದ ಹಾಳೆಯೊಂದನ್ನು ಹಿಡಿದಿವೆ. ಏನೇ ಆದರೂ ವಿಷಸೇವನೆಯಿಂದ ಉಂಟಾದ ಸಾವು ಈ ಕಲಾಕೃತಿಯ ಮುಖ ನೋಡಿದಾಗ ಉಂಟಾಗುವಷ್ಟು ಪ್ರಶಾಂತ ಹಾಗೂ ರೊಮಾಂಟಿಕ್ ಆಗಿ ಇರಲಂತೂ ಸಾಧ್ಯವಿಲ್ಲ.

ಆತ್ಮಹತ್ಯೆ ಮಾಡಿಕೊಂಡು ಬದುಕನ್ನು ಕೊನೆಗಾಣಿಸುವುದನ್ನು ಉಚಿತವೆಂದು ಭಾವಿಸಿದ ಕವಿ ಮತ್ತು ಸಾಹಿತಿಗಳ ಒಂದು ದೊಡ್ಡ ಪಟ್ಟಿಯೇ ಉಂಟು. ಅರ್ನೆಸ್ಟ್ ಹೆಮಿಂಗ್ವೆ, ಸಿಲ್ವಿಯಾ ಪ್ಲಥ್, ವರ್ಜೀನಿಯಾ ವೂಲ್ಫ್, ಜಾನ್ ಬೈರಿಮನ್, ಸೀಜರ್‌ಪೇವ್ಸೆ, ರೆಂಡಲ್ ಜಾರೆಲ್, ರೋಮೇನ್ ಗ್ಯೆರಿ, ಯೂಕಿಯೋ ಮಿಷಿಮಾ, ಸಿಮೋವೀಲ್, ಹಾರ್ಟ್‌ಕ್ರೇನ್, ಯೆಸೆನಿನ್,

---

೧೯೮೨ರ ಸೆಪ್ಟಂಬರ್ ತಿಂಗಳ 'ನವನೀತ'ದಲ್ಲಿ ಪ್ರಕಟವಾದ ನರ್ಗೀಸ್‌ದಲಾಲ್ ಅವರ 'ಕವಿ ಔರ್ ಸಾಹಿತ್ಯಕಾರ್ ಆತ್ಮಹತ್ಯಾಂ ಕ್ಯೋಂ ಕರತೇ ಹೈ' ಲೇಖನದ ಸಂಗ್ರಹಾನುವಾದ.

ಮಾಯಾಕೋವಸ್ಕಿ ಪಾಬ್ಲೋ ಯಾಷವಿಲಿ,ಶಶಾಫೇದಯೇವ್ ಮೊದಲಾದವರು ಈ ಪಟ್ಟಿಯಲ್ಲಿ ಸೇರಿದ್ದಾರೆ. ನೀರಿನಲ್ಲಿ ಮುಳುಗಿ, ಕುತ್ತಿಗೆಗೆ ನೇಣುಹಾಕಿಕೊಂಡು, ವಿಷಸೇವಿಸಿ ಅಥವಾ ದೀರ್ಘ ಉಪವಾಸಮಾಡಿ ಈ ಪೈಕಿ ಕೆಲವರು ಆತ್ಮಹತ್ಯೆ ಮಾಡಿಕೊಂಡಿದ್ದಾರೆ. ಮತ್ತೆ ಕೆಲವರು ತಮಗೆ ತಾವೇ ಗುಂಡಿಟ್ಟುಕೊಂಡಿದ್ದಾರೆ. ಬೇಕೆಂತಲೇ ದುಸ್ಸಾಹಸಕ್ಕೆ ಕೈ ಹಾಕಿದ್ದಾರೆ. ರಷ್ಯನರ ಕೋಲೆಟ್ ಆಡುತ್ತಾ ಸಾವನಪ್ಪಿದ್ದಾರೆ. ಮಿಷಿಮಾ ಆತ್ಮಹತ್ಯೆ ಮಾಡಿಕೊಳ್ಳುವ ಸಲುವಾಗಿ ಜಪಾನಿನ ಪರಂಪರಾಗತವಾದ 'ಹರಾಕಿರಿ' ಎಂಬ ಉಪಾಯವನ್ನು ಅನುಸರಿಸಿದ್ದ. ಇವರಲ್ಲಿ, ಬಹುಶಃ ಎಲ್ಲರೂ ವಿಖ್ಯಾತರಾದವರು, ಯಶಸ್ವಿ ಬರಹಗಾರರು, ಕೆಲವರಂತೂ ಅನೇಕ ಸಾಹಿತ್ಯಿಕ ಬಹುಮಾನ ವಿಜೇತರು. ಮತ್ತೆ ಕೆಲವರು ತಮ್ಮ ಆತ್ಮಹತ್ಯೆಯ ಕಡೆಗಳಿಗೆಯವರೆಗೂ ತಮ್ಮನ್ನು ತಾವೇ ನಾಶಗೊಳಿಸಿಕೊಳ್ಳುವ ಯಾವ ಪ್ರಯತ್ನವನ್ನೂ ಮಾಡಿರಲಿಲ್ಲ. ಎಡ್‌ಗರ್ ಅಲೆನ್ಪೋ, ಬ್ರೆಂಡೆನ್ ಬಿಹೆನ್, ಸ್ಕಾಟ್ ಫಿಜೆರಾಲ್ಡ್ ಮೊದಲಾದವರು ಅತಿಯಾಗಿ ಮದ್ಯಪಾನಮಾಡಿ ಜೀವನದುದ್ದಕ್ಕೂ ನಿರಾಶೆ ಮತ್ತು ಉನ್ಮಾದಗಳ ತೂಗುಯ್ಯಾಲೆಯಲ್ಲಿ ತೂಗಾಡುತ್ತಿದ್ದರು. ಅವರೂ ಆತ್ಮಹತ್ಯೆಯನ್ನೇ ಮಾಡಿಕೊಂಡಿದ್ದು, ಆದರೆ ಮೆಲ್ಲಮೆಲ್ಲನೆ.

ಕಾನ್‌ರೇಡ್, ಹರ್ಮನ್‌ಹೇಸ್ ಮತ್ತು ಗ್ರಾಹಂಗ್ರೀನರ ಬದುಕಿನಲ್ಲಿ ತುಂಬ ವಿಷಾದದ ನಿರಾಶೆಯ ಇಂತಹ ಅನೇಕ ಗಳಿಗೆಗಳು ಅನೇಕಬಾರಿ ಬಂದವು. ಆತ್ಮಹತ್ಯೆಯ ಮೂಲಕವೇ ಇವುಗಳಿಗೆಲ್ಲಾ ಒಂದು ಉತ್ತರ ಸಿಗುತ್ತದೆಂದು ಅವರಿಗೆ ಅನಿಸಿತು. ಗ್ರಾಹಂಗ್ರೀನ್ ಈ ಬಗ್ಗೆ ಹೀಗೆ ಬರೆದಿದ್ದಾನೆ—'ಸಾಹಿತಿಗಳೂ ಅಲ್ಲದ, ಸಂಗೀತಜ್ಞರೂ ಅಲ್ಲದ, ಕಲಾವಿದರೂ ಅಲ್ಲದ ಜನ ಅದು ಹೇಗೆ ಹುಚ್ಚರಾಗದೆ. ತಪ್ಪಿಸಿಕೊಳ್ಳುತ್ತಾರೆ? ಅವರು ವಿಷಾದ ವಿಷಣ್ಣತೆಗಳಿಂದ ಪೀಡಿತರಾಗದೆ ಅದು ಹೇಗೆ ಉಳಿದುಕೊಳುತ್ತಾರೆಂಬು ನನಗೆ ಆಶ್ಚರ್ಯ.

ಫ್ರಾಯ್ಡ್ ಆತ್ಮಹತ್ಯೆಯ ಬಗೆಗೆ ಸಿದ್ಧಾಂತರೂಪವಾಗಿ ಹೇಳುವುದೇನೆಂದರೆ ಮನುಷ್ಯನಲ್ಲಿ ಮೊದಲಿನಿಂದಲೂ ತನ್ನನ್ನು ತಾನೇ ನಾಶಗೊಳಿಸಿಕೊಳ್ಳುವ ಮನೋವೃತ್ತಿ ಇದ್ದೇ ಇರುತ್ತದೆ. ಜೀವಂತ ಸ್ಥಿತಿಯಿಂದ ನಿರ್ಜೀವ ಸ್ಥಿತಿಯೆಡೆಗೆ ಸಾಗಲು ಯಾವಾಗಲೂ ಹಾತೊರೆಯುತ್ತಿರುತ್ತಾನೆ. ಫಿಲಿಪ್‌ಲಾರ್ಕಿನ್ಸ್ ಇದೇ ಮಾತನ್ನು ತುಂಬ ಸೊಗಸಾಗಿ ಮುಂದಿನ ಸಾಲುಗಳಲ್ಲಿ ಹೀಗೆ ವ್ಯಕ್ತಪಡಿಸಿದ್ದಾನೆ.

'ಇವೆಲ್ಲಕ್ಕಿಂತಲೂ ಮಿಗಿಲಾಗಿ ಮರೆವಿನ ಆಕಾಂಕ್ಷೆ ಜೀವಂತವಾಗಿದೆ. ಕ್ಯಾಲೆಂಡರ್, ಜೀವವಿಮೆ, ಭೂಮಿಕಾಣಿ ವಿಷಯಕ್ಕೆ ಸಂಬಂಧಪಟ್ಟ ಗಳಿಕೆಗಳು

ಹಾಗೂ ಸಾವಿಗಿಂತಲೂ ತುಟ್ಟಿಯಾದ ವಿಮುಖತೆಯ ಹಿನ್ನೆಲೆಯಲ್ಲಿ ಮರೆವಿನ ಆಕಾಂಕ್ಷೆ ಜೀವಂತವಾಗಿರುತ್ತವೆ.'

ವಾಸ್ತವವಾಗಿ ಸಾವಿನ ಮೂಲಪ್ರವೃತ್ತಿ ಬಹಳಷ್ಟು ಮಟ್ಟಿಗೆ ಮನುಷ್ಯನ ಮನಸ್ಸಿನಲ್ಲಿಯೇ ಯಾವಾಗಲೂ ಜಾಗ್ರತವಾಗಿರುತ್ತದೆ. ಯಾವುದೇ ಸಣ್ಣ ಸಣ್ಣ ಘಟನೆಗಳು ಅವನ ಮನಸ್ಸಿನಲ್ಲಿ ವಿಸ್ಫೋಟಕ ಸ್ಥಿತಿಯನ್ನು ಉಂಟುಮಾಡಿ ಬದುಕಿನತ್ತ ಬೇಸರ ಹುಟ್ಟಿಸುವ ಸಂಭವ ಇರುತ್ತದೆ. ಅವನ ಬದುಕಿನ ಬಳಗನ್ನು ಚೂರುಚೂರು ಮಾಡಿ ಕಿತ್ತೆಸೆಯುವ ಮನೋವೃತ್ತಿಯನ್ನು ಹುಟ್ಟಿಸುತ್ತದೆ.

ಹಾಗೆಯೇ ಕವಿ, ಸಾಹಿತಿ ಮತ್ತು ಕಲಾವಿದರು ತಮ್ಮ ಈ ಬದುಕಿನಲ್ಲಿಯೇ ಇಣುಕಿ ಸೃಜನಾತ್ಮಕ ರಚನೆಗೆ ಪ್ರೇರಣೆಯನ್ನು ಪಡೆಯುತ್ತಾರೆ. ಮಾನವೀಯತೆಗೆ ಒಂದು ಹೊಸ ಪರಿಭಾಷೆ ನೀಡುತ್ತಾರೆ—ತನ್ನನ್ನು ಜಗತ್ತಿನೊಡನೆ ಸೇರಿಸಿಕೊಂಡು ಸೃಜನಾತ್ಮಕವಾಗಿ ಒಟ್ಟುಗೂಡಿಸಿಕೊಳ್ಳುವುದು.'

ಆದರೆ ಈ ಒಟ್ಟುಗೂಡುವಿಕೆ ಮುಗಿದಾಗ ಏನಾಗುತ್ತದೆ, ತನ್ನತನದ ಎಲ್ಲೆಕಟ್ಟುಗಳು ಮತ್ತು ಅವಬೋಧನೆಯ ಕ್ಷೇತ್ರ ಸಂಕುಚಿತವಾಗುತ್ತಾ ಹೋದಂತೆ ಒಳಗೆ ಒಂದು ರೀತಿಯ ಭಯಂಕರ ಶೂನ್ಯಸ್ಥಿತಿ ಹಬ್ಬತೊಡಗುತ್ತದೆ. ಒಂದು ವೇಳೆ ಸೃಜನಾತ್ಮಕತೆ ಹಾಗೂ ಓಜಸ್ಸುಗಳ ಮೂಲ ಕಡಿಮೆಯಾಗುತ್ತಾ ಬಂದು ಪ್ರಪಂಚ ಅಂಧಕಾರಮಯವಾಗಿಯೂ ಅಶಾಂತಿಯುತವಾಗಿಯೂ ನಿಷ್ಠುರವಾಗಿಯೂ ಕಂಡುಬಂದಾಗ ಹಾಗೂ ಆಶಾವಾದ ಮತ್ತು ಆದರ್ಶವಾದ ಇಳಿಮುಖವಾಗುತ್ತಿರುವುದು. ದೃಷ್ಟಿಗೋಚರವಾದಾಗ ಈ ಕುಚಕ್ರದಿಂದ ತನ್ನನ್ನು ತಾನು ಉಳಿಸಿಕೊಳ್ಳುವ ಉಪಾಯ ತೀವ್ರಸಂವೇದನಶೀಲ ಕವಿ ಅಥವಾ ಸಾಹಿತಿಗೆ ಹೊಳೆಯುವುದೆಂದರೆ ಒಂದೇ ಒಂದು—ಆತ್ಮಹತ್ಯೆ.

ಇದಕ್ಕೆ ಸಂಬಂಧಿಸಿದಂತೆ ಒಬ್ಬ ಮನೋರೋಗ ವಿಶೇಷಜ್ಞ ಹೀಗೆ ಹೇಳುತ್ತಾನೆ—'ಆತ್ಮಹತ್ಯೆ ಮಾಡಿಕೊಳ್ಳುವ ಮುಂದಿ ಹಾಗೆ ಮಾಡಿಕೊಳ್ಳುವ ಸಮಯದಲ್ಲಿ ಖಿನ್ನರಾಗಿ ಕಾಣದೆ ಹೋಗಲುಬಹುದು. ಆದರೆ ಅವರ ಬದುಕಿನಲ್ಲಿ ಯಾವುದೇ ಆಸೆ ಆಕಾಂಕ್ಷೆಗಳು ಉಳಿದಿರಲಿಲ್ಲ. ಎಂಬುವರಲ್ಲಿ ಯಾವ ಸಂದೇಹವೂ ಇರಲಿಲ್ಲ. ಬದುಕಿನ ಎಲ್ಲಾ ಧ್ಯೇಯೋದ್ದೇಶಗಳು ನಷ್ಟವಾಗಿ ಹೋಗಿತ್ತು. ಬೇರೆ ಯಾವ ವ್ಯಕ್ತಿಯೊಡನೆಯೂ ಶಾಶ್ವತವಾದ ಸಂಬಂಧವನ್ನು ಉಳಿಸಿಕೊಳ್ಳುವುದು ಅವರ ಪಾಲಿಗೆ ಅಸಾಧ್ಯವಾಗಿತ್ತು.'

ಹೆಮಿಂಗ್‌ವೇಯ ತಂದೆ ಸಹ ಅವನಂತೆಯೆ ಆತ್ಮಹತ್ಯೆಮಾಡಿಕೊಂಡಿದ್ದ. ಹೆಮಿಂಗ್‌ವೇ ತನ್ನ ಇಳಿ ವಯಸ್ಸಿನಲ್ಲಿ ತನ್ನ ಬರವಣಿಗೆಯ ಶಕ್ತಿ ಕುಂದಿರುವುದೇ

ಅಲ್ಲದೆ ಮೈಯಿನ ಶಕ್ತಿ ಸಹ ಇಳಿದುಹೋಗಿರುವುದನ್ನು ಮನಗಂಡ. ಈ ಪರಿಸ್ಥಿತಿ ತುಂಬ ಅಸಹನೀಯವಾಗಿ ಕಂಡು ಅವನನ್ನು ಆತ್ಮಹತ್ಯೆಗೆ ಪ್ರೇರೇಪಿಸಿತು. ತನ್ನ ಆತ್ಮಕಥೆಯನ್ನು ಬರೆದ ಹಾಚಗರ್‌ನೊಡನೆ ತಾನು ಸಾಯುವುದಕ್ಕೆ ಸ್ವಲ್ಪ ದಿನ ಮುಂಚೆ ಹೀಗೆ ಹೇಳಿದ್ದ—“ಮನುಷ್ಯನಿಗೆ ಏನು ಆಸೆ ಇರುತ್ತದೆ? ಆರೋಗ್ಯಕರವಾಗಿ ಬದುಕುವುದು ತಾನೆ. ಚೆನ್ನಾಗಿ ಕೆಲಸ ಮಾಡಬೇಕು. ಸ್ನೇಹಿತರೊಡನೆ ತಿಂದುಉಂಡು ಮಾಡಿ ಖುಷಿಯಾಗಿರಬೇಕು. ಒಳ್ಳೆಯದನ್ನೆಲ್ಲಾ ಅನುಭವಿಸಬೇಕು. ನನ್ನ ಈ ಎಲ್ಲಾ ಆಸೆಗಳೂ ಸತ್ತುಹೋಗಿವೆ, ಗೊತ್ತಾಯಿತೇ! ನನ್ನಲ್ಲಿ ಈಗ ಯಾವ ಆಸೆಗಳು ಉಳಿದಿಲ್ಲ.”

ವಾಸ್ತವವಾಗಿ ಹೆಮಿಂಗ್ವೆ ಆ ದಿನಗಳಲ್ಲಿ ‘ಡಿಪ್ರೆಸಿವ್ ಪರ್ಸಿಕ್ಯೂಟರಿ’ ಎಂಬ ತೀವ್ರಸ್ವರೂಪದ ಮನೋರೋಗಕ್ಕೆ ಗುರಿಯಾಗಿದ್ದ. ಮೇಯೋ ಕ್ಲಿನಿಕ್ಕಿನಲ್ಲಿ ಈ ರೋಗಕ್ಕಾಗಿ ಚಿಕಿತ್ಸೆ ಪಡೆಯುತ್ತಿದ್ದ. ಯಾವಾಗಲೂ ಆತ್ಮಹತ್ಯೆ ಮಾಡಿಕೊಳ್ಳುವ ಮಾತನಾಡುತ್ತಿದ್ದ. ಒಂದೆರಡು ಬಾರಿ ಅಂತಹ ಕೈಗೂಡದ ಪ್ರಯತ್ನಗಳನ್ನು ನಡೆಸಿಯೂ ಇದ್ದ. ಮೂರನೇ ಬಾರಿ ಅವನು ಉಪಾಯದಿಂದ ಕೆಲಸ ಸಾಧಿಸಿದ. ಮೇಯೋ ಕ್ಲಿನಿಕ್ಕಿನ ವೈದ್ಯರ ಎದುರಿಗೆ ತಾನು ಸಂಪೂರ್ಣವಾಗಿ ಆರೋಗ್ಯವಾಗಿದ್ದೇನೆಂದು ತೋರಿಸಿಕೊಂಡ. ಅಲ್ಲಿಂದ ಬಿಡುಗಡೆ ಪಡೆದು ಮನೆಗೆ ಬಂದು ಊಟ ಮಾಡಿದ. ಕುಟುಂಬದ ಜನರೊಡನೆ ತನಗೆ ಇಷ್ಟವಾದ ಹಾಡುಗಳನ್ನು ಹಾಡಿದ. ಈಗ ಯಾರಿಗೂ ಅವನ ಆರೋಗ್ಯದ ಬಗ್ಗೆ ಸಂದೇಹ ಬೀಳಲಿಲ್ಲ. ಮಾರನೆ ಬೆಳಿಗ್ಗೆಯೇ ಎಲ್ಲರೂ ಮಲಗಿದ್ದಾಗ ಅವನು ತನ್ನ ಮೇಲೆಯೇ ಗುಂಡು ಹಾರಿಸಿಕೊಂಡು ಆತ್ಮಹತ್ಯೆ ಮಾಡಿಕೊಂಡ.

*　　　*　　　*

ಮನೋವಿಜ್ಞಾನಿಗಳ ಅಭಿಪ್ರಾಯದಂತೆ ಪ್ರಪಂಚದಲ್ಲಿ ಆತ್ಮಹತ್ಯೆಯ ವಿಚಾರವನ್ನೇ ಮಾಡದ ಜನ ಬಹಳ ಕಡಿಮೆ. ಎಂದಾದರೊಂದು ದಿನ ಇಂತಹ ಭಾವನೆ ಬಹಳಷ್ಟು ಮಂದಿಯ ಮನಸ್ಸಿನಲ್ಲಿ ಸುಳಿದಿದ್ದಿರಬೇಕೆಂದು ಅವರ ಅಂಬೋಣ. ಕಾಮೂ ಹೀಗೆ ಹೇಳಿದ್ದಾನೆ—‘ಒಂದು ಹಿರಿದಾದ ಕಲಾಕೃತಿಯ ಸೃಷ್ಟಿಯಂತೆಯೇ ಆತ್ಮಹತ್ಯೆಯ ವಿಚಾರ ಮನಸ್ಸಿನ ಮೂಕವಾದ ಆಳಗಳಲ್ಲಿ ಹುಟ್ಟಿಕೊಳ್ಳುತ್ತದೆ.’

೧೯೬೩ ರಲ್ಲಿ ೩೦ ವರ್ಷದ ಕವಯಿತ್ರಿ ಸಿಲ್ವಿಯಾಪ್ಲಥ್ ಒಂದು ಅನಿಲದ ಜಾಡಿಯಲ್ಲಿ ತಲೆಯಿಟ್ಟು ತನ್ನ ಇಹಲೀಲೆಯನ್ನು ಕೊನೆಗಾಣಿಸಿಕೊಂಡಳು. ಆ ಘಟನೆ ಯಾವುದೇ ಆಕಸ್ಮಿಕ ಅಪಘಾತವಾಗಿರಲಿಲ್ಲ. ಆತ್ಮಹತ್ಯೆಯ ಅನಿಸಿಕೆಯ

ಪರಿಣತಿ ಮಾತ್ರವಾಗಿತ್ತು. ಅದರ ಪ್ರಾರಂಭ ಅವಳ ಬದುಕಿನಲ್ಲಿ ಅನೇಕ ವರ್ಷಗಳ ಮೊದಲೇ ಉಂಟಾಗಿತ್ತು. ಇಂದು ಅವಳು ಪಾಶ್ಚಾತ್ಯ ರಾಷ್ಟ್ರಗಳಲ್ಲಿ ಆತ್ಮ ಹತ್ಯೆಯ ಒಂದು ಹೊಸಪಂಥದ ಜನ್ಮದಾತೆಯೆಂದು ಹೆಸರು ಪಡೆದಿದ್ದಾಳೆ.

*　　　*　　　*

ಬಿನ್ ಬೇರಿಮನ್ ಸೀಜರ್ ಪೇವಸೆ ಮತ್ತು ಯಾಕಿಯೋ ಮಿಷಿಮಾ ಜನಪ್ರಿಯತೆಯ ತುತ್ತತುದಿಯಲ್ಲಿದ್ದಾಗಲೇ ಆತ್ಮಹತ್ಯೆ ಮಾಡಿಕೊಂಡವರು. ೫೭ ವರ್ಷದ ಜೇರಿಮನ್ ಪುಲಿಟ್ಜರ್ ಬಹುಮಾನವನ್ನೇ ಅಲ್ಲದೆ 'ನ್ಯಾಶನಲ್ ಬುಕ್ ಅವಾರ್ಡ್' ಸಹ ಪಡೆದಿದ್ದ. ಅವನು ಸೇತುವೆಯಿಂದ ಮಿಸಿಸಿಪ್ಪಿ ನದಿಯ ನೀರಿಗೆ ಹಾರಿ ಪ್ರಾಣತ್ಯಾಗ ಮಾಡಿದ.

ಜಪಾನಿನ ಮಿಷಿಮಾ ಪ್ರತಿಭಾನ್ವಿತ ಲೇಖಕನೇ ಆಗಿದ್ದನಲ್ಲದೆ ಜಪಾನಿನ ಪ್ರಾಚೀನ ಯುದ್ಧಕಲೆಯಲ್ಲಿ ನಿಸ್ಸೀಮನಾಗಿದ್ದ. 'ಹರಾಕಿರಿ' ತಂತ್ರದ ಮೂಲಕ ಪ್ರಾಣಬಿಡುವ ಮೊದಲು ಅವನು ತನ್ನ ಒಂದು ಲೇಖನದಲ್ಲಿ ಹೀಗೆ ಬರೆದಿದ್ದ— 'ನಾನು ನನ್ನ ಕಳೆದ ೪೫ ವರ್ಷಗಳ ಜೀವನದತ್ತ ದೃಷ್ಟಿ ಹಾಯಿಸಿದರೆ ಶೂನ್ಯ ವಲ್ಲದೆ ಇನ್ನೇನೂ ಕಾಣುವುದಿಲ್ಲ. ನಾನು ಎಂದಾದರೂ ಬದುಕಿದ್ದೆ ಎಂದು ಕೂಡ ನನಗೆ ಅನಿಸುವುದಿಲ್ಲ'. 'ಹರಾಕಿರಿ' ತಂತ್ರದ ಮೂಲಕ ಆತ್ಮಹತ್ಯೆ ಮಾಡಿಕೊಂಡ ಮಿಷಿಮಾ ಅಮರತ್ವದ ತೀವ್ರ ಅನ್ವೇಷಣೆಯಲ್ಲಿ ಇದ್ದ ಎಂದು ಒಬ್ಬ ಮನೋವಿಜ್ಞಾನಿ ಅಭಿಪ್ರಾಯಪಡುತ್ತಾನೆ.

ಮಾನವನ ಇತಿಹಾಸದಲ್ಲಿ ಆತ್ಮಹತ್ಯೆ ತುಂಬ ಗೌರವದ ಕೆಲಸ ಎಂದು ಭಾವಿಸಿದ ಕಾಲವೂ ಒಂದಿತ್ತು. ಸಾಕ್ರೆಟಿಸ್ ವಿಷ ಸೇವಿಸಿ ಸಾವನ್ನಪ್ಪಿದ ಕಾಲ ದಿಂದಲೂ ಪಾಶ್ಚಾತ್ಯ ದೇಶಗಳಲ್ಲಿ ಅವನ ಮಾದರಿ ಅನುಸರಣೆಯಲ್ಲಿತ್ತು.

ತನ್ನ ಪ್ರೀತಿಯ ಮಡದಿ ಆತ್ಮಹತ್ಯೆ ಮಾಡಿಕೊಂಡಾಗ ತೀವ್ರ ದುಃಖಕ್ಕೆ ಈಡಾದ ರೋಮೇನ್‌ಗೇರಿ ತಾನೂ ಆತ್ಮಹತ್ಯೆ ಮಾಡಿಕೊಂಡು ಸಾಯುವ ಮುನ್ನ ಹೀಗೆ ಹೇಳಿದ—'ನನ್ನ ಬರವಣಿಗೆಯಲ್ಲಿ ನಾವು ಒಬ್ಬರು ಇನ್ನೊಬ್ಬರ ನೋವನ್ನು ಹಂಚಿಕೊಳ್ಳುತ್ತೇವೆ'.

ಎಷ್ಟಾದರೂ ಲೇಖಕರು ಅತಿ ಸಂವೇದನಶೀಲರು. ಹಾಗಾಗಿ ಒಂದು ಹಂತದ ವರೆಗೆ ಮಾತ್ರ ತಮ್ಮ ಮಾನಸಿಕ ಬೇಗುದಿಯನ್ನು ಸಹಿಸಿಕೊಳ್ಳಬಲ್ಲರು. ಅದರಿಂದ ಬಿಡುಗಡೆ ಪಡೆಯಲು ಸಾವಿಗೆ ಶರಣುಹೋಗುತ್ತಾರೆ. 'ತಮ್ಮ ಸ್ವಂತ ಎಲ್ಲೆಕಟ್ಟುಗಳು ಕೇವಲ ದೇಹಕ್ಕೆ ಮಾತ್ರ ಸೀಮಿತವಲ್ಲ' ಎಂದು ಅವರ ಭಾವನೆ ಇದ್ದಿರಬಹುದು

ಉಷಾ ಅರೋರಾ

ಚೀನಾದ ಜನಸಂಖ್ಯಾ ಸ್ಫೋಟ: ಒಂದು ಸವಾಲು

ಲಿ ಮೀಲಿಂಗ್ ಗರ್ಭಿಣಿಯಾದಾಗ, ತಾನು ಕೆಲಸ ಮಾಡುತ್ತಿದ್ದ ಕ್ಯಾಂಟಾನೀಸ್ ಫ್ಯಾಕ್ಟರಿಯಿಂದ ಮಗುವಿಗೆ ಜನ್ಮ ಕೊಡುವ ಸರ್ಟಿಫಿಕೇಟ್ ಪಡೆದಳು. ಈ ಸರ್ಟಿಫಿಕೇಟ್ ಇಲ್ಲದೆ ಆಕೆ ಆಸ್ಪತ್ರೆಗೆ ದಾಖಲಾಗುವಂತಿರಲಿಲ್ಲ. ಆದರೆ ದಿ ಸ್ಟ್ರೀಟ್ ರೆಸಿಡೆಂಟ್ಸ್ ಸಂಘ ಆಕೆ ಮಗು ಹಡೆಯಲು ಅನುಮತಿ ನಿರಾಕರಿಸಿತು. ಕಾರಣ, ಆ ವರ್ಷದ ಜನನ ಕೋಟಾ ಮುಗಿದಿತ್ತು! ಹಾಗಾಗಿ ಏಳು ತಿಂಗಳ ಗರ್ಭಿಣಿ ಲಿ ಮೀಲಿಂಗ್ ಬಲಾತ್ಕಾರ ಗರ್ಭಪಾತಕ್ಕೆ ಒಳಗಾಗಬೇಕಾಯಿತು.

ವಾಂಗ್ ಅಯಿಕ್ವಾನ್ ಎಂಬಾಕೆ ಸಮುದಾಯ ಶಿಬಿರದ ಒಬ್ಬ ಕೆಲಸದಾಕೆ. ಆಕೆ ಎರಡನೆಯ ಮಗು ಪಡೆಯಲು ನಿಗದಿತವಾಗಿದ್ದ ಕಾಲ ೧೯೮೧ರ ಮೇ ತಿಂಗಳ ಕೊನೆ. ೯ ತಿಂಗಳು ತುಂಬಿದ ಗರ್ಭಿಣಿ ವಾಂಗ್‌ಳನ್ನು "ವಿಚಾರ ಶಿಬಿರ"ಕ್ಕೆ ಕಳುಹಿಸಲಾಯಿತು. ಅಲ್ಲಿ ಅವಳು ಮತ್ತು ಅವಳಂತೆ ಅಧಿಕೃತ ಒಪ್ಪಿಗೆ ಪಡೆಯದೆ ಗರ್ಭಧರಿಸಿದ ಸ್ತ್ರೀಯರಿಗೆ ಅವರು ಗರ್ಭಪಾತ ಮಾಡಿಸಿಕೊಳ್ಳುವಂತೆ ಬಲಾತ್ಕರಿಸಲಾಗುತ್ತಿತ್ತು. ವಿಚಾರ ಶಿಬಿರಕ್ಕೆ ಹೋಗಲು ಇಷ್ಟಪಡದೆ, ಯಾರನ್ನೂ ಸಂಪರ್ಕಿಸದೆ ವಾಂಗ್ ತಪ್ಪಿಸಿಕೊಂಡುಹೋಗಿ ಒಬ್ಬ ದಾದಿಯ ಬಳಿ ಹೆಣ್ಣುಮಗುವೊಂದಕ್ಕೆ ಜನ್ಮ ಕೊಟ್ಟಳು. ಈ ಸುದ್ದಿ ಅಧಿಕಾರವರ್ಗಕ್ಕೆ ತಿಳಿದಾಗ ಅದು ಆಕೆಯನ್ನು ಕೆಲಸದಿಂದ ವಜಾ ಮಾಡಿತು. ಆಕೆಯ ಗಂಡನ ಸಂಬಳದಲ್ಲಿ ಶೇ. ೧೦ ಭಾಗದಷ್ಟನ್ನು ಕಡಿತಗೊಳಿಸಿತು; ಆತನಿಗೆ ಕೊಡುತ್ತಿದ್ದ ಬೋನಸ್ ಮತ್ತು ಜೀವನೋಪಾಯ ಭತ್ಯೆಯನ್ನು ನಿಲ್ಲಿಸಿತು: ಅವರ ಮನೆಗಿದ್ದ ವಿದ್ಯುಚ್ಛಕ್ತಿ ಸರಬರಾಜನ್ನು ಕಿತ್ತುಕೊಂಡಿತು; ಚೀನದ ಕಮ್ಯೂನಿಸ್ಟ್ ಪಕ್ಷ ಆತನನ್ನು ಆಪಾದನೆಗೆ ಗುರಿಪಡಿಸಿತು.

ಪೀಕಿಂಗ್ ಕಾಲೇಜಿನ ವೈದ್ಯ ದಂಪತಿಗಳು ಎರಡನೆಯ ಮಗು ಪಡೆದಾಗ ಸಂಬಳದಲ್ಲಿ ತಿಂಗಳಿಗೆ ೨೫ ರೂಪಾಯಿನಂತೆ, ಪ್ರತಿಯೊಬ್ಬರ ಸಂಬಳದಿಂದಲೂ ಸುಮಾರು ೧೦ ವರ್ಷಗಳ ಅವಧಿಗೆ ಕಡಿತಗೊಳಿಸಲಾಯಿತು. ವಿಶ್ವವಿದ್ಯಾನಿಲಯದ ವಸತಿಗೃಹದಿಂದ ಅವರನ್ನು ಉಚ್ಚಾಟಿಸಲಾಯಿತು. ಹೆಂಡತಿಗೆ

೧೯೮೩ರ ಏಪ್ರಿಲ್ ತಿಂಗಳ 'ರೀಡರ್ಸ್ ಡೈಜೆಸ್ಟ್'ನಲ್ಲಿ ಪ್ರಕಟವಾದ "ಚೈನಾಸ್ ಚಾಲೆಂಜ್: ಡಿಫ್ಯೂಸಿಂಗ್ ದಿ ಪಾಪ್ಯುಲೇಶನ್ ಬಾಂಬ್" ಎಂಬ ಲೇಖನದ ಭಾವಾನುವಾದ.

ವೈದ್ಯ ಹುದ್ದೆಯಿಂದ ದಾದಿ ಹುದ್ದೆಗೆ ಹಿಂಬಡ್ತಿ ನೀಡಲಾಯಿತು. ಆಕೆಯ ಸಂಶೋಧನ ಪ್ರಬಂಧವನ್ನು 'ರಾಜಕೀಯ ದುರುದ್ದೇಶಿತ' ಕೃತಿ ಎಂದು ತಳ್ಳಿ ಹಾಕಲಾಯಿತು.

ಈ ಮೇಲಿನ ಪ್ರಕರಣಗಳು ಚೀನಾದೇಶದ ಜನಸಂಖ್ಯಾ ನಿಯಂತ್ರಣ ಚಳವಳಿಯ ಒಂದು ಭಾಗ. ಈಗ ಸದ್ಯದ ಚೀನದ ಜನಸಂಖ್ಯೆ ೧೦೦೦ ಮಿಲಿಯನ್. ಕ್ರಿಸ್ತಶಕ ೨೦೦೦ದ ವೇಳೆಗೆ ಜನಸಂಖ್ಯಾ ಬೆಳವಣಿಗೆಯನ್ನು ಸಂಪೂರ್ಣ ನಿಯಂತ್ರಣಕ್ಕೆ ತರಬೇಕೆಂಬುದು, ಬೆಳವಣಿಗೆಯ ದರವನ್ನು ಸ್ವಾಭಾವಿಕವಾಗಿ ಶೂನ್ಯ ಸ್ಥಿತಿಗೆ ತರಬೇಕೆಂಬುದು ಆದರ ಗುರಿಯಾಗಿದೆ. ೧.೨ ಸಾವಿರ ಮಿಲಿಯನ್ ಒಳಗೇ ಜನಸಂಖ್ಯೆಯನ್ನು ಮಿತಿಗೊಳಿಸುವ ಪ್ರಯತ್ನ ಚೀನದ್ದು. ಚಳವಳಿ ಇನ್ನೂ ಆರಂಭದೆಸೆಯಲ್ಲಿದೆ. ಪ್ರಸ್ತುತ ಚೀನ ತನ್ನ ಜನರಿಗೆ ಸಮರ್ಪಕವಾಗಿ ಆಹಾರ ಒದಗಿಸಲು ಸಾಧ್ಯವಾಗುತ್ತಿಲ್ಲ. ಒಂದು ನೂರು ಮಿಲಿಯನ್ ಚೀನಿಯರಿಗೆ ತಿನ್ನಲು ಸರಿಯಾದ ಆಹಾರವೇ ಇಲ್ಲ ಎಂಬ ಸಂಗತಿಯನ್ನು ಚೀನ ಕಮ್ಯೂನಿಸ್ಟ್ ಪಕ್ಷದ ಉಪಾಧ್ಯಕ್ಷರಾದ ಲಿ ಜೀಯಾನ್ನಿಯನ್ ಒಪ್ಪಿಕೊಳ್ಳುತ್ತಾರೆ. ಕೆಲವು ರೈತ ಕುಟುಂಬಗಳು ಕೇವಲ ಅಕ್ಕಿಯ ಗಂಜಿ ಕುಡಿದು ಜೀವಿಸಿವೆ. ಕೆಲವು ವಿಶೇಷ ಹಬ್ಬದ ದಿನಗಳಲ್ಲಿ ಮಾತ್ರ ಮಾಂಸದ ಉಪಯೋಗ ಮಾಡಲಾಗುತ್ತಿದೆ. ಬಿತ್ತನೆಯ ಸಲುವಾಗಿ ಬತ್ತವನ್ನು ರೈತರು ಕೂಡಿಡಬೇಕಾಗಿದೆ.

ಜನಸಂಖ್ಯಾ ನಿಯಂತ್ರಣದ ಬಗ್ಗೆ ಮಾವೋ ಜೇಡಾಂಗ್‌ನ ನಿಯಮಗಳು ಅಸಮರ್ಪಕವಾಗಿದ್ದು ಗೊಂದಲಕ್ಕೆ ಕಾರಣವಾಗಿವೆ. ಹಾಗಾಗಿ ೧೯೪೯ರಿಂದ ಈಚೆಗೆ ಸುಮಾರು ೬೦೦ ಮಿಲಿಯನ್ ಮಕ್ಕಳು ಹುಟ್ಟಿದ್ದಾರೆ. ೧೯೭೦ರ ವೇಳೆಗಾಗಲೇ, ಹುಟ್ಟಿದ ಮಕ್ಕಳುಗಳಲ್ಲಿ ಶೇಕಡ ೩೦ ಜನನಗಳು ಎರಡಕ್ಕಿಂತ ಹೆಚ್ಚಿನವು ಅಥವಾ ಮೂರನೆಯವು. "ಇದೇ ಪರಿಸ್ಥಿತಿ ಮುಂದುವರಿದದ್ದೇ ಆದರೆ ಈ ಶತಮಾನದ ಕೊನೆಯ ವೇಳೆಗೆ ಮತ್ತೆ ನಾವು ಜನರು ಮರದ ತೊಗಟೆಯನ್ನು ತಿಂದ ಯುದ್ಧ ಹಾಗೂ ಕ್ಷಾಮದ ಕತ್ತಲಿನ ದಿನಗಳಿಗೆ ಕಾಲಿಡಬೇಕಾಗುತ್ತದೆ" ಎಂಬುದು ಜನಸಂಖ್ಯಾತಜ್ಞರ ಅಭಿಪ್ರಾಯವಾಗಿದೆ.

ಕಠಿಣ ಕ್ರಮಗಳು : ಕುಟುಂಬದ ಗಾತ್ರವನ್ನು ಎರಡು ಮಕ್ಕಳಿಗೆ ಸೀಮಿತಗೊಳಿಸುವ ಚಳುವಳಿ ೧೯೭೦ರಲ್ಲೇ ಆರಂಭವಾದರೂ ಕಾಲ ಮಿಂಚಿಹೋಗುತ್ತಿರುವುದರ ಅರಿವು ಚೀನದ ನಾಯಕರುಗಳಿಗೆ ೧೯೭೯ರ ಅಂತ್ಯದ ವೇಳೆಗೆ ಆಯಿತು. ದಂಪತಿಗಳು ಕಡ್ಡಾಯವಾಗಿ ಒಂದೇ ಒಂದು ಮಗುವನ್ನು ಪಡೆಯಬೇಕು ಎಂದು ಶಾಸನ ವಿಧಿಸಿದರು. ನೂತನ ಕ್ರಮಗಳಿಂದಾಗಿ ಸ್ವಲ್ಪಮಟ್ಟಿನ

ಯಶಸ್ಸು ಕಂಡುಬಂತು. ೧೯೭೦ರ ಆರಂಭದಲ್ಲಿ ಸಾವಿರಕ್ಕೆ ೧೯.೬ ಇದ್ದ ಸ್ವಾಭಾವಿಕ ಜನಸಂಖ್ಯಾ ಏರಿಕೆ ೧೯೮೧ರಲ್ಲಿ ಸಾವಿರಕ್ಕೆ ೧೪ಕ್ಕೆ ಇಳಿಯಿತು. ಆದರೂ ೧೯೮೧ರಲ್ಲಿ ೧೩ ಮಿಲಿಯನ್‌ಗೂ ಹೆಚ್ಚು ಜನಸಂಖ್ಯೆ ವೃದ್ಧಿಸಿತು. ವಾರ್ಷಿಕ ಸ್ವಾಭಾವಿಕ ಬೆಳವಣಿಗೆ ಸಾವಿರಕ್ಕೆ ಒಂದು ಎಂದಿಟ್ಟುಕೊಂಡರೂ ಪ್ರತಿ ವರ್ಷ ಒಂದು ಮಿಲಿಯನ್‌ನಷ್ಟು ಹೆಚ್ಚಿನ ತುತ್ತಿನ ಚೀಲವನ್ನು ತುಂಬ ಬೇಕಾಯಿತು. ಇದರಿಂದಾಗಿ ಆರ್ಥಿಕ ಹಾಗೂ ಮಾನವಿಕ ಪರಿಸ್ಥಿತಿಯು ತತ್ತರಿಸುವಂತಾಯಿತು. ಚೀನದ ಕಮ್ಯೂನಿಸ್ಟ್ ಪಕ್ಷವು ಪ್ರೋತ್ಸಾಯದಾಯಕ ಕ್ರಮಗಳನ್ನು ಕೈಗೊಳ್ಳುವುದರ ಜೊತೆಗೆ ನಿಯಮವನ್ನು ಉಲ್ಲಂಘಿಸಿದವರಿಗೆ ದಂಡ ವಿಧಿಸುವುದರ ಮೂಲಕ ಕುಟುಂಬದ ಗಾತ್ರವನ್ನು ಸೀಮಿತಗೊಳಿಸಲು ಕ್ರಮಗಳನ್ನು ಕೈಗೊಂಡಿದೆ. ಕಾರ್ಖಾನೆಗಳಲ್ಲಿ, ಆಸ್ಪತ್ರೆಗಳಲ್ಲಿ, ಶಾಲೆಗಳಲ್ಲಿ ವಸತಿ ಸಂಘಗಳಲ್ಲಿ, ಉತ್ಪಾದನಾ ದಳಗಳಲ್ಲಿ ಕುಟುಂಬ ಯೋಜನಾ ತಂಡಗಳು ಇವೆ. ಪುರುಷರು ಹಾಗೂ ಸ್ತ್ರೀಯರು ಬಳಸುವ ಗರ್ಭನಿರೋಧಕ ಸಾಧನಗಳನ್ನು ಉಚಿತವಾಗಿ ಜನರಿಗೆ ಒದಗಿಸಲಾಗುತ್ತಿದೆ. ಸ್ತ್ರೀಯರು ಉಪಯೋಗಿಸುವ ಗರ್ಭನಿರೋಧಕ ಮಾತ್ರೆಗಳು ಮತ್ತು ಗರ್ಭಪಾತ–ಇವು ಆರೋಗ್ಯದ ಮೇಲೆ ಯಾವುದೇ ಪರಿಣಾಮ ಬೀರುವುದಿಲ್ಲವೆಂದು ಸ್ತ್ರೀಯರಿಗೆ ಮನವರಿಕೆ ಮಾಡಿ ಕೊಡಲು ಚಲನಚಿತ್ರಗಳು ಹಾಗೂ ಸ್ಲೈಡ್‌ಗಳನ್ನು ತೋರಿಸುವ ಮೂಲಕ ಅವರಲ್ಲಿ ವಿಶ್ವಾಸ ಮೂಡಿಸಲಾಗುತ್ತಿದೆ. ಆದರೆ ಮೂರು ತಿಂಗಳ ಅನಂತರದ ಗರ್ಭಪಾತ ಅಪಾಯಕರ ಎಂಬ ಅಂಶವನ್ನು ಮಾತ್ರ ಉದ್ದೇಶಪೂರ್ವಕ ವಾಗಿಯೇ ಬಹು ಎಚ್ಚರಿಕೆಯಿಂದ ಗೋಪ್ಯವಾಗಿ ಇರಿಸಲಾಗುತ್ತಿದೆ.

ಒಂದೇ ಒಂದು ಮಗುವನ್ನು ಪಡೆದಿರುವ ಕುಟುಂಬಕ್ಕೆ ಕೊಡುತ್ತಿರುವ ಸೌಲಭ್ಯಗಳು ವಿಶಿಷ್ಟವಾದುವು. ಮಗುವಿಗೆ ೧೬ ವರ್ಷಗಳು ತುಂಬುವವರೆಗೆ ಆರೋಗ್ಯರಕ್ಷಣೆ ಭತ್ಯೆಯಾಗಿ ತಿಂಗಳಿಗೆ ೨೫ ರೂಪಾಯಿಗಳಷ್ಟು ಹೆಚ್ಚು ಸಂಬಳವನ್ನು ಕೊಡಲಾಗುತ್ತಿದೆ. ಇದು ಉದ್ಯೋಗಿಯ ಸಂಬಳದ ಶೇಕಡ ೧೦ರಷ್ಟು ಹೆಚ್ಚು. ನರ್ಸರಿ ಶಾಲೆಗೆ ಸೇರಿಸುವಲ್ಲಿ ಈ ಮಗುವಿಗೆ ಆದ್ಯತೆ ನೀಡಲಾಗುವುದಲ್ಲದೆ ಮಾಧ್ಯಮಿಕ ಶಾಲೆಯವರೆಗೆ ಉಚಿತ ಶಿಕ್ಷಣ ಸೌಲಭ್ಯ ಕಲ್ಪಿಸಿಕೊಡಲಾಗುತ್ತಿದೆ. "ಒಂದು ಮಗುವಿನ ಪ್ರಮಾಣಪತ್ರ" ಹೊಂದಿರುವ ದಂಪತಿಗಳಿಗೆ ಸಾರ್ವಜನಿಕ ಗೃಹಗಳನ್ನು ಒದಗಿಸುವಾಗ ವಿಶಾಲವಾದ ಮನೆ ಗಳನ್ನು ಒದಗಿಸಲಾಗುತ್ತಿದೆ. ಪಟ್ಟಣ ಪ್ರದೇಶಗಳಲ್ಲಿ ಒಂದು ಮಗುವನ್ನು ಮಾತ್ರ ಪಡೆದಿರುವ ಕಾರ್ಮಿಕರು ನಿವೃತ್ತರಾದಾಗ ಅವರು ತಮ್ಮ ಮೂಲ

ವೇತನದ ಶೇಕಡ ೫ ಭಾಗದಷ್ಟು ಹೆಚ್ಚು ಬೋನಸ್ ಪಡೆಯುತ್ತಾರೆ.

ವ್ಯವಸ್ಥೆಯನ್ನು ಪಲ್ಲಟಗೊಳಿಸುವ ಪೋಷಕರ ಬಗ್ಗೆ ಅಧಿಕಾರವರ್ಗ ಬಿಗಿ ನೀತಿ ಅನುಸರಿಸುತ್ತದೆ. ಲೋಹದ ಕಾರ್ಖಾನೆಯಲ್ಲಿನ ಉದ್ಯೋಗಿ ಮಹಿಳೆಯೊಬ್ಬಳು, ಅಧಿಕೃತ ಒಪ್ಪಿಗೆ ಪತ್ರ ಪಡೆಯದೆ ಗರ್ಭ ಧರಿಸಿದ್ದರಿಂದ ಆಕೆಯನ್ನು ಕೆಲಸದಿಂದ ತೆಗೆದುಹಾಕಲಾಯಿತೆಂದು ತಿಳಿದುಬರುತ್ತದೆ. ಅನೇಕ ನಗರಗಳಲ್ಲಿ ಅಧಿಕೃತ ಒಪ್ಪಿಗೆ ಪಡೆಯದೆ ಮಕ್ಕಳನ್ನು ಪಡೆದ ಪೋಷಕರು ತಮ್ಮ ಸಂಬಳದಲ್ಲಿ ಶೇಕಡ ೧೦ ಭಾಗದಷ್ಟು ಸಂಬಳವನ್ನು ಸುಮಾರು ೧೪ ವರ್ಷಗಳಷ್ಟು ದೀರ್ಘಕಾಲ ಕಳೆದುಕೊಳ್ಳುತ್ತಾರೆ. ಅಲ್ಲದೆ, ಅವರನ್ನು ಕಮ್ಯುನಿಸ್ಟ್ ಪಕ್ಷದಿಂದ ಉಚ್ಚಾಟಿಸಲಾಗುತ್ತದೆ.

ಪ್ರತಿಜ್ಞೆ : ಈ ಬಗೆಯ ಕ್ರಮಗಳು ಕೂಡ ಈಗ ತುಂಬ ತಡವಾಯಿತು ಅನಿಸುತ್ತದೆ. ಏಕೆಂದರೆ ೧೯೫೦ ಮತ್ತು ೧೯೬೦ರ ದಶಕಗಳಲ್ಲಿ ಚೀನದ ಜನನದರ ಸಾವಿರಕ್ಕೆ ೩೩ ರಿಂದ ೩೮ ರಷ್ಟಿತ್ತು. ಆ ಸಂತತಿಯ ಮಕ್ಕಳು ಈಗ ವಿವಾಹಯೋಗ್ಯ ವಯಸ್ಸಿಗೆ ಬಂದಿವೆ. ಉದಾಹರಣೆಗೆ ಶಾಂಗೈ ಪ್ರಾಂತದಲ್ಲಿ ೧೯೮೧ರಲ್ಲಿ ಜನನ ದರ ಸಾವಿರಕ್ಕೆ ೧೬.೭೯ಕ್ಕೆ ಏರಿತು ; ಅಂದರೆ ಈ ದರ ೧೯೭೪ರಲ್ಲಿ ಜನಿಸಿದ ಮಕ್ಕಳಿಗಿಂತಲೂ ಎರಡು ಪಟ್ಟು ಹೆಚ್ಚು. "ಇದೇ ಪರಿಸ್ಥಿತಿ ಇನ್ನೂ ೧೦ ವರ್ಷ ಅಥವಾ ಅದಕ್ಕೂ ಹೆಚ್ಚು ಕಾಲ ಮುಂದುವರಿಯುತ್ತದೆ ಎಂದು ಅಂದಾಜು ಮಾಡಲಾಗಿದೆ. ಈ ಸಮಸ್ಯೆ ಹಿಡಿತಕ್ಕೆ ಸಿಗದೆ ಹೋದರೆ ಭಯಂಕರ ಜನಸಂಖ್ಯಾ ಸ್ಫೋಟಕ್ಕೆ ನಾಂದಿಯಾಗುತ್ತದೆ" ಎಂದು ಶಾಂಗೈನ ವರ್ಲ್ಡ್ ಎಕನಾಮಿಕ್ ಹೆರಾಲ್ಡ್ ವರದಿ ಮಾಡಿದೆ.

ನಗರವಲಯಗಳಲ್ಲಿ ಹೊಸದಾಗಿ ವಿವಾಹವಾಗುವ ದಂಪತಿಗಳಲ್ಲಿ ಬಹುಪಾಲು ಜನ 'ಒಂದೇ ಮಗು' ಎಂಬ ಪ್ರತಿಜ್ಞೆಗೆ ಸಹಿ ಹಾಕಿದ್ದಾರೆ. ಆದರೆ ಶೇ. ೮೦ ಭಾಗ ಜನ ಜೀವಿಸಿರುವ ಗ್ರಾಮೀಣ ವಲಯಗಳಲ್ಲಿ, ಸಂಪ್ರದಾಯ ಜನರಿರುವಲ್ಲಿ ಕುಟುಂಬ ಯೋಜನಾ ಪ್ರಚಾರ ತಂಡಗಳಿಗೆ ಅನೇಕ ಅಡಚಣೆಗಳಿವೆ. ದೊಡ್ಡ ಕುಟುಂಬ ಮಾತ್ರ ಏಳಿಗೆ ಪಡೆಯಲು ಸಾಧ್ಯ ಎಂಬುದು ರೈತಾಪಿ ಜನರ ನಂಬಿಕೆ. ಹೊಲದಲ್ಲಿ ಕೆಲಸ ಮಾಡಲು, ವಂಶವನ್ನು ಮುಂದುವರಿಸಿಕೊಂಡು ಹೋಗಲು, ವಯಸ್ಸಾದ ತಂದೆತಾಯಿಗಳನ್ನು ಕಡೆಗಾಲದಲ್ಲಿ ರಕ್ಷಿಸಲು, ಪೋಷಿಸಲು ಗಂಡುಮಕ್ಕಳು ಬೇಕು ಎಂಬುದು ಗ್ರಾಮೀಣರ ನಂಬಿಕೆ. ಹಾಗಾಗಿ ಚೀನಿ ಅಧಿಕಾರಿಗಳು ಕೆಲವು ಆಕರ್ಷಣೆಗಳನ್ನುಂಟುಮಾಡುವುದರ ಮೂಲಕ ಈ ನಂಬಿಕೆಯನ್ನು ದೂರ ಮಾಡಲು ಜನರನ್ನು ಪ್ರಚೋದಿಸುತ್ತಿದ್ದಾರೆ.

ಯಾಂಗ್ ಎಂಬುದು ಒಂದು ಸಮುದಾಯ ಶಿಬಿರ. ಇಲ್ಲಿನ ತರುಣ ದಂಪತಿಗಳನ್ನು ಜೋಡಿ ಕರಾರಿಗೆ ಸಹಿಹಾಕುವಂತೆ ಅಧಿಕಾರಿಗಳು ಕೇಳಿಕೊಳ್ಳುತ್ತಾರೆ. ಇಂತಿಷ್ಟು ಆಹಾರಧಾನ್ಯ ಉತ್ಪಾದಿಸುತ್ತೇವೆಂದು ಪ್ರತಿಜ್ಞೆಗೈಯುವುದರ ಜೊತೆಗೆ ತಾವು ಕುಟುಂಬ ಯೋಜನೆಯನ್ನೂ ಅನುಸರಿಸುತ್ತೇವೆಂದು ದಂಪತಿಗಳು ಪ್ರತಿಜ್ಞೆ ಕೈಗೊಳ್ಳುತ್ತಾರೆ. ಇದಕ್ಕೆ ಪ್ರತಿಯಾಗಿ ಸರ್ಕಾರ ಒಂದು ಮಗುವನ್ನು ಮಾತ್ರ ಪಡೆದಿರುವ ಕುಟುಂಬಕ್ಕೆ ತಕ್ಷಣ ೧೦೦ ರೂ.ಗಳ ಬಹುಮಾನದ ಜೊತೆಗೆ ೬೦ ಕೆ.ಜಿ.ಯಷ್ಟು ಆಹಾರ ಧಾನ್ಯಗಳನ್ನು ಉಚಿತವಾಗಿ ಕೊಡುತ್ತದೆ. ಅಲ್ಲದೆ, ವಾರ್ಷಿಕವಾಗಿ ೧೨೦ ಕೆ.ಜಿ.ಯಷ್ಟು ಆಹಾರ ಧಾನ್ಯಗಳನ್ನು ಸಹಾಯಾರ್ಥವಾಗಿ ನೀಡುತ್ತದೆ. ಇದರ ಜೊತೆಗೆ ಆ ಮಗು ವಯಸ್ಕರಂತೆಯೇ ಆಹಾರ ಪಡಿತರವನ್ನು ಪಡೆಯುತ್ತದೆ. ಇಂಥ ಕುಟುಂಬಗಳಿಗೆ ಸರ್ಕಾರ ವಿಸ್ತಾರವಾದ ವ್ಯವಸಾಯ ಭೂಮಿಯನ್ನು ಕೊಡುತ್ತದೆ. ಈ ಎಲ್ಲ ಕ್ರಮಗಳ ಪರಿಣಾಮವಾಗಿ ೧೯೭೯ ರಲ್ಲಿ ಸಾವಿರಕ್ಕೆ ೫ರಷ್ಟಿದ್ದ ಜನನ ದರ ೧೯೮೦ ರಲ್ಲಿ ಸಾವಿರಕ್ಕೆ ೧.೦೯ಕ್ಕೆ ಇಳಿಯಿತು.

ಭಯಾನಕ ಕಥೆಗಳು: ಗಂಡು ಮಕ್ಕಳು ಬೇಕೆನ್ನುವ ಸಾಂಪ್ರದಾಯಿಕ ನಂಬಿಕೆಯ ವಿರುದ್ಧ ಹೋರಾಡಲು ಸರ್ಕಾರ ನಗರ ಹಾಗೂ ಗ್ರಾಮೀಣ ಪ್ರದೇಶಗಳಲ್ಲಿ ವೃದ್ಧರಿಗೆ ಕೆಲವು ಕ್ಷೇಮಾಭಿವೃದ್ಧಿ ಸೌಕರ್ಯಗಳನ್ನು ಹೆಚ್ಚು ಹೆಚ್ಚು ಕಲ್ಪಿಸುತ್ತಿದೆ. ಅನೇಕ ಹಳ್ಳಿಗಳಲ್ಲಿ ಕುಟುಂಬದ ಆಶ್ರಯವಿಲ್ಲದಂಥ ವೃದ್ಧರು ಉಚಿತವಾಗಿ ಆಹಾರ, ಬಟ್ಟೆ, ಉರವಲು, ವೈದ್ಯಕೀಯ ಸವಲತ್ತುಗಳನ್ನು ಪಡೆಯುತ್ತಿದ್ದಾರೆ. ಜೊತೆಗೆ ಅಂಥ ವ್ಯಕ್ತಿ ಸತ್ತರೆ ಅವನ ಮರಣ ಸಂಸ್ಕಾರವನ್ನು ಕೂಡ ಸರ್ಕಾರ ಮಾನವೀಯ ದೃಷ್ಟಿಯಿಂದ ಉಚಿತವಾಗಿ ನೆರವೇರಿಸುತ್ತದೆ.

ಆದರೆ ಇಂಥ ಆಕರ್ಷಕ ಕಾರ್ಯಕ್ರಮಗಳ ಹಿಂದೆ ನಿಗೂಢವಾದ ಭಯಾನಕ ಕಥೆಗಳಿವೆ. ಸ್ತ್ರೀಯರು ಗರ್ಭನಿರೋಧಕ ಸಾಧನಗಳನ್ನು ಅಳವಡಿಸಿಕೊಳ್ಳುವಂತೆ ಬಲಾತ್ಕರಿಸಲಾಗುತ್ತಿದೆ. ಅನೇಕರು ಇಂಥ ಸಾಧನಗಳನ್ನು ನಾಟಿ ವೈದ್ಯರಲ್ಲಿ ತೆಗೆಸಲುಹೋಗಿ ನಂಜಿಗೆ ತುತ್ತಾಗಿ ಸಾಯುತ್ತಾರೆ. ೧೯೮೧ರ ಮಧ್ಯಭಾಗದಲ್ಲಿ ಗಾಂಗ್‌ಡಾಂಗ್ ಪ್ರಾಂತ್ಯದ ಎಲ್ಲ ಕಡೆ, ಮಗು ಪಡೆಯಲು ಅಧಿಕೃತ ಸರ್ಟಿಫಿಕೇಟ್ ಪಡೆಯದೆ ಗರ್ಭಧರಿಸಿದ ಗರ್ಭಿಣಿಯರನ್ನು ಬಲಾತ್ಕಾರ ಗರ್ಭಪಾತಕ್ಕೆ ನೂಕಲಾಯಿತು. ೯ ತಿಂಗಳು ತುಂಬಿದ ಗರ್ಭಿಣಿಯರಿಗೂ ಗರ್ಭಪಾತ ಮಾಡಿಸಲಾಯಿತು. ಒಂದು ಪಕ್ಷ ಹೆಂಗಸರು ಹೆದರಿ ಬಚ್ಚಿಟ್ಟು

ಕೊಂಡರೆ ಅವರು ಹೊರಗೆ ಕಾಣಿಸಿಕೊಳ್ಳುವವರೆಗೆ ಅವರ ಗಂಡಂದಿರಿಗೆ ಚಿತ್ರಹಿಂಸೆ ಕೊಡಲಾಯಿತು. ಹುಯಿಯಾಂಗ್ ಪ್ರಾಂತದಲ್ಲಿ ೫೦ ದಿನಗಳ ಅವಧಿಯಲ್ಲಿ ೧,೭೩,೦೦೦ (ಒಂದು ಲಕ್ಷ ಇಪ್ಪತ್ತಾರು ಸಾವಿರ)ಕ್ಕೂ ಹೆಚ್ಚು ಗರ್ಭಪಾತ ಹಾಗೂ ಸಂತಾನಹರಣ ಶಸ್ತ್ರಚಿಕಿತ್ಸೆ ಮಾಡಲಾಯಿತು. ಇದರಿಂದಾಗಿ ಒಂದೇ ವಾರದಲ್ಲಿ ಗರ್ಭಿಣಿಯರ ಸಂಖ್ಯೆ ಒಂದು ಲಕ್ಷದಿಂದ ೪೭ ಸಾವಿರಕ್ಕೆ ಇಳಿಯಿತೆಂದು ತಿಳಿದುಬರುತ್ತದೆ.

ಜಿಯಾಂಗ್ಸಿ ಪ್ರಾಂತ್ಯದ ಅನ್ಪು ಕೌಂಟಿಯಲ್ಲಿ ಅಧಿಕೃತ ಒಪ್ಪಿಗೆಪತ್ರ ತರಲು ಅಸಮರ್ಥರಾದ ಗರ್ಭಿಣಿಯರ ಮೇಲೆ ೫ ಸಾವಿರ ರೂಪಾಯಿಗಳ ದಂಡ ವಿಧಿಸಲಾಯಿತು ಅಥವಾ ಅವರನ್ನು ಜೈಲಿಗೆ ತಳ್ಳಲಾಯಿತೆಂದು ತಿಳಿದುಬರುತ್ತದೆ. ೧೯೮೧ರ ನವೆಂಬರ್ ವೇಳೆಯಲ್ಲಿ ತಿಂಗಳಿಗೆ ಸಾವಿರ ಸಂಖ್ಯೆಯಲ್ಲಿ ಗರ್ಭಪಾತಗಳು ನಡೆಯುತ್ತಿದ್ದವು. ತಿಂಗಳಿಗೆ ೧೦ ಸಾವಿರದಷ್ಟು ಸಂತಾನಹರಣ ಶಸ್ತ್ರಚಿಕಿತ್ಸೆಯ ತಾತ್ಕಾಲಿಕ ಗುರಿಯನ್ನು ತಲುಪಲಾಯಿತು. ಆದರೆ ತಾಳ್ಮೆಗೂ ಒಂದು ಎಲ್ಲೆ ಇದೆ. ಅಂಥ ಸಂದರ್ಭದಲ್ಲಿ ಪ್ರತಿಭಟನೆಯೂ ಸ್ವಾಭಾವಿಕ. ಇದೆಲ್ಲದರಿಂದ ರೋಸಿದ ಹೆಣ್ಣುಮಗಳೊಬ್ಬಳು "ನಾನೇನಾದರೂ ಒಂದು ಸಾವಿರ ಯಾನ್ ಅಥವಾ ಒಂದು ಮಗು—ಈ ಎರಡರಲ್ಲಿ ಯಾವುದಾದರೂ ಒಂದನ್ನು ಆರಿಸಿಕೋ ಅಂದರೆ ನಾನು ಮಗುವನ್ನೇ ಆಯ್ಕೆ ಮಾಡುತ್ತೇನೆ" ಎಂದು ಕೋಪದಿಂದ ಹೇಳುತ್ತಾಳೆ.

ಹಾಗೊಂದು ಪಕ್ಷ ದಂಪತಿಗಳು ಅನಧಿಕೃತವಾಗಿ, ರಹಸ್ಯವಾಗಿ ಎರಡನೆಯ ಮಗುವಿಗೆ ಜನ್ಮವಿತ್ತರೆ, ಹುಟ್ಟಿದ ಆ ಮಗುವಿಗೆ ಸಮಾಜದಲ್ಲಿ ಯಾವುದೇ ಸ್ಥಾನವಿರುವುದಿಲ್ಲ. ಸರ್ಕಾರದ ಲೆಕ್ಕದಲ್ಲಿ ಆ ಮಗು ಅ-ಪ್ರಜೆ (ಪ್ರಜೆಯೇ ಅಲ್ಲ); ಆ ಮಗುವಿನ ಜನನವನ್ನು ಪೋಲಿಸ್ ಠಾಣೆಯಲ್ಲಾಗಲೀ ಸಮುದಾಯ ಶಿಬಿರದಲ್ಲಾಗಲೀ ನೋಂದಾಯಿಸುವಂತಿಲ್ಲ; ಆ ಮಗುವಿಗೆ ಆಹಾರ ಅಥವಾ ಬಟ್ಟೆಯ ಪಡಿತರ ದೊರೆಯುವುದಿಲ್ಲ; ಆ ಮಗು ಶಾಲೆಗೆ ಸೇರುವಂತಿಲ್ಲ; ಅದಕ್ಕೆ ಸರ್ಕಾರಿ ಕೆಲಸ ದೊರೆಯುವುದಿಲ್ಲ. ನಗರವಲಯಗಳಲ್ಲಿ ರಾಜ್ಯ ಸರ್ಕಾರದ ಸಹಾಯ ಸೌಲಭ್ಯಗಳಿಲ್ಲದೆ ಮಕ್ಕಳನ್ನು ಬೆಳೆಸುವುದು ಬಹಳ ಕಷ್ಟದ ಕೆಲಸವಾದುದರಿಂದ ಇಂಥ "ದಿಕ್ಕಿಲ್ಲದ ಮಕ್ಕಳು" ಸಂಬಂಧಿಕರ ದಾನ ಧರ್ಮಗಳ ಕೃಪೆಯಲ್ಲಿ ಬೆಳೆಯುತ್ತವೆ. ಇಲ್ಲವಾದರೆ ಇಂಥ ಮಕ್ಕಳನ್ನು ಪೋಷಕರು ತಮ್ಮ ಹಿರೀಕರು ಇರುವ ಗ್ರಾಮೀಣ ಪ್ರದೇಶಗಳಿಗೆ ಕರೆದು ಕೊಂಡುಹೋಗಿ ಬಿಡುತ್ತಾರೆ. ಚೀನದ ಹಳ್ಳಿಗಾಡಿನಲ್ಲಿ ಈಗಾಗಲೇ ಇಂಥ

ಜನಸಂಖ್ಯೆ ಬೆಳೆಯಲಾರಂಭಿಸಿದೆ.

ಇಂದು ಪೀಕಿಂಗ್‌ನ ಪರಿಸ್ಥಿತಿ ಸಂದಿಗ್ಧವಾಗಿರುವುದು ಸ್ಪಷ್ಟವಾಗಿ ಗೋಚರಿಸುತ್ತಿದೆ. ೧೯೭೦ರ ದಶಕದಲ್ಲಿ ಜನಸಂಖ್ಯಾ ಬೆಳವಣಿಗೆಯ ದರವನ್ನು ಇಳಿಸಿದರೂ ಆಹಾರ ಉತ್ಪಾದನೆ ಮತ್ತು ಸಾಮಾಜಿಕ ಕ್ಷೇಮಾಭಿವೃದ್ಧಿ ಸೌಲಭ್ಯಗಳನ್ನು ಸರಿದೂಗಿಸುವುದು, ಆಣಬೆಯಂತೆ ಹೆಚ್ಚುತ್ತಿರುವ ಜನಸಂಖ್ಯೆಯಿಂದಾಗಿ ಅಸಾಧ್ಯದ ಮಾತಾಗಿದೆ. ಸರ್ಕಾರವೇನಾದರೂ ಕಠೋರ ನಿಯಮಗಳನ್ನು ಇನ್ನೂ ಹೆಚ್ಚೆಚ್ಚು ಜಾರಿಗೊಳಿಸಲಾರಂಭಿಸಿದರೆ ಅದರಿಂದ ಅನಧಿಕೃತ ಮಕ್ಕಳ ಜನನ ಹೆಚ್ಚು ಹೆಚ್ಚಾಗಬಹುದು. ಈ ಬಗೆಯ ಅ-ಪ್ರಜಾ ವರ್ಗ ಒಂದು ದಿನ ದೇಶದ ಸಾಮಾಜಿಕ-ಆರ್ಥಿಕ ವ್ಯವಸ್ಥೆಯನ್ನೇ ಗಂಭೀರವಾಗಿಸಬಹುದು.

ಮುಂದಿನ ಕೆಲವು ವರ್ಷಗಳಂತೂ ಬಿಕ್ಕಟ್ಟಿನವು. ಈಗ ಚೀನ ಜನನ ದರವನ್ನು ನಿಯಂತ್ರಿಸುವಲ್ಲಿ ವಿಫಲವಾದರೆ, ಸರ್ಕಾರದ ಉಳಿವೇ ಗಂಡಾಂತರ ಸ್ಥಿತಿಯಲ್ಲಿ ಇರುತ್ತದೆ. ಕ್ರೂರ ವಿಧಾನಗಳು ಇದಕ್ಕೆ ಉತ್ತರವಲ್ಲ. ಅರಿವು ಮೂಡಿಸುವ ಸೂಕ್ತ ಶಿಕ್ಷಣ ಕಾರ್ಯಕ್ರಮಗಳ ಜೊತೆಯಲ್ಲಿ ಮನವೊಲಿಸುವ ಮತ್ತು ಪ್ರೋತ್ಸಾಹದಾಯಕವಾದ ಕೆಲವು ರಚನಾತ್ಮಕ ಕ್ರಮಗಳನ್ನು ಪೀಕಿಂಗ್ ಕೈಗೊಳ್ಳಬೇಕಾಗಿದೆ. ಪರಿಣಾಮಕಾರಿಯಾಗಿ, ಆದರೆ ಮಾನವೀಯವಾಗಿ ಸಮಸ್ಯೆಯನ್ನು ಪರಿಹರಿಸುವತ್ತ ಬಹುಶಃ ಇಂಥ ವ್ಯವಸ್ಥೆ ಹೆಚ್ಚು ಅರ್ಥಪೂರ್ಣ ಎನಿಸಬಹುದು.

ಕೃಷ್ಣ ಹಾಸನ



ಮೊದಲಿನ ಆಸೆಗಳು ತೀರಿದಂತೆಲ್ಲ ಹೆಚ್ಚಿನ ಹೊಸ ಆಸೆಗಳು ಅತ್ಯಾವಶ್ಯಕವಾಗುತ್ತವೆ.

—ಎಮರ್‌ಸನ್

ಹಾಡುವ ದ್ವೀಪ

ರಾತ್ರಿ ಹತ್ತು ಗಂಟೆಯಷ್ಟರಲ್ಲಿ ಚಂದ್ರನ ತಂಪು ತೊಟ್ಟಿಲು ಮೃದುವಾಗಿ ಕರಗಿ, ಮಂಜು ಇನ್ನೂ ದಟ್ಟವಾಗಿ ಹರಡಿ ಹನಿಹನಿಯಾಗಿ ಜಾರಿಬೀಳ ತೊಡಗುತ್ತದೆ. ಈ ಸುಂದರ ತಾಣ ಒಂದೊವರೆ ಸಾವಿರ ಮೀಟರ್ ಉದ್ದ, ಎಂಟುನೂರು ಮೀಟರ್ ಅಗಲವಾಗಿದೆ. ನನ್ನ ಸುತ್ತಲೂ ಹಚ್ಚ ಹಸಿರು ಚಿಗುರೊಡೆದು, ಗಾಳಿಯ ಮೃದು ಸ್ಪರ್ಶಕ್ಕೆ, ಪಿಸುನುಡಿಯುತ್ತಿರುವಂತೆ, ಹನಿಯುತ್ತಿದೆ. ಸಾವಿರಾರು ಜೀವಿಗಳು ಮಣ್ಣಿನ ಮೇಲ್ಪದರದಲ್ಲಿ ಅವಿತು ನಿಶ್ಶಬ್ದವಾಗಿ ಏನನ್ನೋ ನಿರೀಕ್ಷಿಸುತ್ತಿರುವಂತೆ ಭಾಸವಾಗುತ್ತಿದೆ.

ನಾನು ತಿಳಿದಮಟ್ಟಿಗೆ ಇದೊಂದು ಅತ್ಯಂತ ವಿಚಿತ್ರವಾದ, ಕಲ್ಪನಾಶಕ್ತಿಯನ್ನೇ ಸಮ್ಮೋಹಿಸಬಲ್ಲಂಥ ದ್ವೀಪ. ಇದು ನಾನಿಲ್ಲಿರುವ ಕೊನೆಯ ರಾತ್ರಿ ಇಲ್ಲಿಂದ ಹೊರಟಮೇಲೆ ಇದರ ನೆಲೆ ಎಲ್ಲಿ, ಏನೆಂಬುದನ್ನು ಯಾರಿಗೂ ತಿಳಿಸಲಾರೆ! ನ್ಯೂ ಫೌಂಡ್ ಲ್ಯಾಂಡಿನ ಕರಾವಳಿಗೆ ಸಮೀಪದಲ್ಲಿರುವ ಈ ದ್ವೀಪದ ಪ್ರಶಾಂತ ರಮಣೀಯತೆಗೆ, ಪ್ರಕೃತಿಯ ನೈಜತೆಗೆ ಯಾರಿಂದಲೂ ಧಕ್ಕೆಯಾಗದಿರಲಿ!

ಆರ್ಕ್‌ಟಿಕ್‌ಸಾಗರ ಬದ್ಧ ಕುಳಿರ್‌ಗಾಳಿ ಲೇಬ್ರಡೋರಿನ ದಾರಿಯಾಗಿ ಚಲಿಸಿ ಧಾವಿಸಿ ಬರುತ್ತಿದೆ. ಬೆಚ್ಚಗಿನ ಉಡುಗೆ ಧರಿಸಿ ನನ್ನ ಅಚ್ಚುಮೆಚ್ಚಿನ, ಮುದ್ದು 'ಪೆಟ್ರಲ್' ಕಡಲು ಹಕ್ಕಿಗಳಿಗಾಗಿ ಕಾಯುತ್ತಿರುತ್ತೇನೆ. ಸ್ಟೇಲೋ ಹಕ್ಕಿಗಳಂತೆ ದೊಡ್ಡ ಕಡಲು ಹಕ್ಕಿಗಳ ವಂಶಕ್ಕೆ ಸೇರಿದ್ದರೂ, ಗಾತ್ರದಲ್ಲಿ ಮಾತ್ರ ರಾಬಿನ್ ಹಕ್ಕಿಗಳಿಗಿಂತಲೂ ಚಿಕ್ಕವು. ನಾವಿಕರು ಇದನ್ನು "ತಾಯ ಕೊಂಡಾಟದ ಕುಟ್ಟಿಗಳು" ಎಂದು ಕರೆಯುತ್ತಾರೆ. ಏಕೆಂದರೆ ಜೀವನದ ಬಹುಭಾಗವೆಲ್ಲ ಕಡಲ ಅಲೆಗಳ ಮೇಲೆಯೇ ಕಳೆವ ಈ ಪಕ್ಷಿಗಳು, ತುಫಾನು ಬಿರುಗಾಳಿಗಳಿಂದ ಕಡಲು ಪ್ರಕ್ಷುಬ್ಧಗೊಂಡಾಗಲೂ, ನಿಶ್ಚಿಂತೆಯಿಂದ ಹೇಗೆ ನಿದ್ರಿಸುತ್ತವೆಂಬುದು ಯಾರಿಗೂ ತಿಳಿದಿಲ್ಲ! ನೀರ ಮೇಲ್ಮೈಯ ಜಲಜ ಸಸ್ಯಗಳನ್ನು, ಪಾಚಿಯನ್ನು ತಮ್ಮ ಜಾಲಪಾದಗಳಿಂದ ಮೃದುವಾಗಿ ಕೆದರಿ ತುಣುಕುಗಳನ್ನು ಚಿಪ್ಪು ಹುಳುಗಳನ್ನು, ಚಿಕ್ಕ ಮೀನುಗಳನ್ನು ತಿನ್ನುತ್ತಾ ಎಂಥ ಬಿರುಗಾಳಿಯಲ್ಲೂ ನಿರಾತಂಕವಾಗಿ ಭೂಮಧ್ಯ ಪ್ರದೇಶದವರೆಗೂ ಸಾಗುತ್ತವೆ—ಎಂದರೆ ಎಂಥವಿಸ್ಮಯ!

೧೯೮೧ರ ಜನವರಿ ತಿಂಗಳ ರೀಡರ್ಸ್ ಡೈಜೆಸ್ಟ್‌ನಲ್ಲಿ ಪ್ರಕಟಗೊಂಡ ಫ್ರಾಂಕ್ಲಿನ್ ರಶೆಲ್ ಅವರ "ಸಿಂಗಿಂಗ್ ಐಲೆಂಡ್" ಎಂಬ ಲೇಖನದ ಅನುವಾದ.

ಆದರೆ ತಮ್ಮ ವಂಶಾಭಿವೃದ್ಧಿಗೆ ಮಾತ್ರ ಭೂಮಿಗೆ ಬರಲೇಬೇಕಷ್ಟೆ! ಆ ಸಮಯದಲ್ಲೇ ಈ ಪೆಟ್ರೆಲ್‌ಗಳು ಈ ದ್ವೀಪವನ್ನು—ಉತ್ತರ ಅಟ್ಲಾಂಟಿಕ್ ಸಾಗರದ ಈ ಅಬಾಧಿತ, ಸುಂದರದ್ವೀಪವನ್ನು—ಹಾಡುವ ತೊಟ್ಟಿಲಾಗಿ ಪರಿವರ್ತಿಸುತ್ತವೆ. ಏಪ್ರಿಲ್ ತಿಂಗಳು ಬಂತೆಂದರೆ ಪ್ರೇಮಗೀತೆ ಹಾಡುವುದಕ್ಕಾಗಿ ಬರತೊಡಗುತ್ತವೆ. ಆದರೆ ರಾತ್ರಿಯಲ್ಲಿ ಮಾತ್ರವೇ ಈ ಪ್ರಣಯಸಲ್ಲಾಪ. ಸ್ವಲ್ಪವೇ ಸಮಯದಲ್ಲಿ ನೆಲದಲ್ಲಿ ಅಡ್ಡವಾಗಿ ಕೊರೆದ ಬಿಲಗಳಲ್ಲಿ ಸುಖವಾಗಿ ಇರತೊಡಗುತ್ತವೆ. ಪೊದೆಹುಲ್ಲು ಬೆಳೆದ ಇಳಿಜಾರುಗಳಲ್ಲಿ ಮನುಷ್ಯನ ತೋಳಿನಷ್ಟು ಉದ್ದವಾದ ಬಿಲಗಳನ್ನು ತೋಡುತ್ತವೆ. ಇವು ಕಡಲಿನ ಇತರ ಪಕ್ಷಿಗಳಿಂದ ಸುರಕ್ಷಿತವಾಗಿರಲು ಅನುಕೂಲವಾಗಿರುತ್ತವೆ.

ಗಂಡು ಪೆಟ್ರೆಲ್‌ಗಳು ಮೇ ತಿಂಗಳಲ್ಲಿ ತಮ್ಮ ಕೊಕ್ಕಿನಿಂದ ಹೊಸ ಬಿಲಗಳನ್ನು ತೋಡುತ್ತಾ ಕಾಲಿಂದ ಮಣ್ಣನ್ನು ಹೊರತಳ್ಳುತ್ತಾ ಇರುವುದನ್ನು ಕಾಣಬಹುದು.

ಪೆಟ್ರೆಲ್‌ಗಳು ಕೆನಡಾದ ಅಟ್ಲಾಂಟಿಕ್ ಕರಾವಳಿಯುದ್ದಕ್ಕೂ ಇರುವ ಸಣ್ಣ ದ್ವೀಪ ಪಂಕ್ತಿಗಳಲ್ಲಿ, ತಮ್ಮದೇ ದ್ವೀಪದಲ್ಲಿ, ತಮ್ಮ ಹಿಂದಿನ ಬಿಲಕ್ಕೇನೇ, ವರ್ಷ ವರ್ಷವೂ ಬಂದು ಸೇರಿಕೊಳ್ಳುತ್ತವೆ! ಅದೂ ತಮ್ಮ ಅದೇ ಜೀವನ ಸಂಗಾತಿಯ ಜತೆಯೇ! ವಿಸ್ಮಯವಾಗುತ್ತಿದೆ.

ಅಂತೂ ಬಂದೇ ಬರುತ್ತವೆ. ಚಂದ್ರನಿಲ್ಲದ ಕಗ್ಗತ್ತಲ ರಾತ್ರಿಯಲ್ಲೂ ದಟ್ಟವಾದ ಮಂಜಿನ ಪರದೆಯನ್ನು ಸೀಳಿ ಹರಿದುಬರುತ್ತವೆ. ಹನ್ನೆರಡು ವರ್ಷಕ್ಕೂ ಮೇಲ್ಪಟ್ಟು ಪ್ರತಿ ವರ್ಷ ಅದೇ ತಾಣವನ್ನು ಸೇರುತ್ತವೆ!

ಈಗ ಕತ್ತಲು ಕವಿದಿದೆ, ದ್ವೀಪದಲ್ಲೆಲ್ಲ ಭೂತ ಸಂಚರಿಸಿದಂತೆ, ಎಲ್ಲ ಸ್ವರಗಳೂ ಮೇಳೈಸಿ ಮಂಜಾದಂತೆ, ಮಂಜುನೀರಾಗಿ ಹನಿ ಹನಿಯಾಗಿ ಸಿಂಪಡಿಸಿದಂತೆ ಕಾಣತೊಡಗುತ್ತದೆ.

ಕೂಡಲೇ, ಯಾವ ಮುನ್ಸೂಚನೆ ಇಲ್ಲದೆ, ನೆತ್ತಿಯ ಮೇಲೆ ಮುಕ್ತ, ಸೊಗಸಾದ, ಸಮೃದ್ಧ ಕೂಗು ಪ್ರತಿಧ್ವನಿಯನ್ನು ಹುಟ್ಟಿಸುತ್ತಾ ವೇಗವಾಗಿ ಹರಿದು ಹೋಗುತ್ತಿದೆ. ಕೂಗು ಮುಂದೋಡಿ ಹೋದರೂ ಪ್ರತಿಧ್ವನಿ ಕಿವಿಗಳಿಗೆ ಬಡಿಯುತ್ತಲೇ ಇದೆ.—ಪೆಟ್....ರೆ....ಲ್....! ಪೆಟ್....ರೆ....ಲ್ !! ಅದಕ್ಕೆ ಪ್ರತ್ಯುತ್ತರವೇನೋ ಎಂಬಂತೆ ಸುತ್ತುವರಿದ ನೆಲದೊಳಗಿಂದ ತರತರದ ಸುಸ್ವರಗಳು ಹೊಮ್ಮುತ್ತವೆ. ಗುರ್‌ಗುರ್ ಎಂಬ ಶಬ್ದ ಸ್ವಾಗತವನ್ನು ಬೀರುವಂತೆ ಎನಿಸುತ್ತಿದೆ.

(ಜುಲೈ ತಿಂಗಳ ಹೊತ್ತಿಗೆ ಬಿಲಗಳಲ್ಲಿ ಹೊಸ ಮೊಟ್ಟೆಗಳು, ಮೊಟ್ಟೆಯೊಡೆದಂಥವುಗಳು, ದ್ವೀಪದ ನೆಲದೊಳಗೆಲ್ಲಾ ತುಂಬಿಹೋಗಿರುತ್ತವೆ. ಆದರೆ ಒಂದು ಪೆಟ್ರೆಲ್ ಹಕ್ಕಿ ಒಂದೇ ಮೊಟ್ಟೆ ಇಡಬಲ್ಲುದು. ಒಂದು ಹಕ್ಕಿ ಕೂಗುವುದೇ ತಡ, ಎಲ್ಲ ಹಕ್ಕಿಗಳೂ ದನಿಗೂಡಿಸುತ್ತವೆ. "ಪೆಟ್ರೆಲ್....ಪೆಟ್ರೆಲ್...." ತಾಳಲಯಬದ್ಧವಾಗಿ ಹಾಡಿದಂತೆನಿಸುತ್ತದೆ. ಕೂಗು ಪ್ರತಿಕೂಗುಗಳಿಂದಲೇ ತಮ್ಮ ತಮ್ಮ ಗೂಡುಗಳನ್ನು ಸಂಗಾತಿಗಳನ್ನು ಗುರುತಿಸಿಕೊಳ್ಳುತ್ತವೆ.

ಮೊಟ್ಟೆಗೆ ನಲುವತ್ತು ದಿನ ಕಾವು ಕೊಡುವುದರಲ್ಲಿ ಮಗ್ನವಾಗಿ, ಅವು ಒಡೆದ ಮೇಲೆ ಐವತ್ತು ದಿನಗಳ ತನಕ ಮರಿಗಳಿಗೆ ಉಣ್ಣಿಸುತ್ತವೆ. ಆಗಾಗ ಕಡಲ ತೀರದಲ್ಲೋ ನೀರ ಅಲೆಗಳ ಮೇಲೋ ಸುತ್ತಾಡುತ್ತಾ ಇರುತ್ತವೆ. ಮೊದಲ ಕೆಲ ದಿನ ಹೊಸ ಮರಿಗಳಿಗೆ ಅವುಗಳ ಹೊಟ್ಟೆಯ ಒಂದು ಗ್ರಂಥಿಯಿಂದ ಹೊರ ಸೂಸುವ ತೈಲಯುಕ್ತ ರಸವನ್ನು ತಮ್ಮ ಕೊಕ್ಕಿನಿಂದ ಉಣ್ಣಿಸುತ್ತವೆ. ಆಮೇಲೂ ಮೇಲೆ—ಅರ್ಧ ಜೀರ್ಣೀಕೃತ-ಕಡಲ ಆಹಾರ ಯುಕ್ತ-ತೈಲ ರಸವನ್ನು ಉಣಿಸುತ್ತವೆ.)

ಈಗ ದ್ವೀಪದ ಕಾರ್ಗತ್ತಲೆ ಗಲಿಬಿಲಿಗೊಳ್ಳುತ್ತಿದೆ. ಎಷ್ಟೋ ಹಕ್ಕಿಗಳ ಗುಂಪುಗಳು ಸುರಿದುಬಿದ್ದಂತೆ, ದ್ವೀಪವೆಲ್ಲಾ ಗಲಿಬಿಲಿಯ ಜಗತ್ತಾಗುತ್ತದೆ. ನೂರಾರು ಸಾವಿರಾರು ಪೆಟ್ರೆಲ್‌ಗಳು ನೆತ್ತಿಯಮೇಲೆ ಹಾರಾಡುತ್ತಾ ತಮ್ಮ ಸಂತಾನಾಭಿವೃದ್ಧಿಯಲ್ಲಿ ತೊಡಗುತ್ತವೆ. ಮಧ್ಯರಾತ್ರಿಯಾಗುತ್ತದೆ, ಕಳೆಯುತ್ತದೆ. ಹಕ್ಕಿಗಳ ಒತ್ತಡ ಇನ್ನೂ ಹೆಚ್ಚುತ್ತದೆ. ಅವುಗಳ ರೆಕ್ಕೆಗಳ ಪಿಸುನುಡಿ ಅತಿಹತ್ತಿರದಲ್ಲೇ, ನನ್ನ ಮುಖವನ್ನು ಸ್ಪರ್ಶಿಸುತ್ತದೆ. ರೆಕ್ಕೆ ಬೀಸಿದ ಗಾಳಿ ನನ್ನ ಕರ್ಣರಂಧ್ರದೊಳಗಿಳಿಯುತ್ತದೆ. ಅವುಗಳಿಗೇ ಗೊತ್ತಾಗದಂತೆ ನನ್ನ ಮೇಲೇ ಬಂದೆರಗುತ್ತಿವೆ. ಒಂದು ಹಕ್ಕಿಯಂತೂ ನನ್ನ ಅಂಗಿಯ ತೆರೆದೆದೆಯಲ್ಲಿ ನುಸುಳಿಬಿಡುತ್ತದೆ! ಅದನ್ನು ಹಾಗೇ ಹಿಡಿದುಕೊಂಡು ಜೇಬಿನಿಂದ ಟಾರ್ಚ್‌ನ್ನು ತೆಗೆದು ಬೆಳಕು ಹಾಯಿಸುತ್ತೇನೆ. ಅದರ ಕಪ್ಪುತಲೆ, ತಲೆಯಲ್ಲಿ ನಿರ್ಭಯವಾಗಿ ನನ್ನನ್ನೇ ನೋಡುತ್ತಿರುವ ಎರಡು ಕಂದು ಕಣ್ಣುಗಳು ಕಾಣುತ್ತವೆ. ಬಾತಿನಂತಹ, ಆದರೆ ನಿಲ್ಲಲಾಗದ ಕಾಲುಗಳನ್ನು ಕೈಸೆರೆಯಿಂದ ಬಿಟ್ಟು ಬಿಡುತ್ತೇನೆ. ಒಂದೇ ಘಳಿಗೆಯಲ್ಲಿ ಹಕ್ಕಿ ಆಕಾಶಕ್ಕೆ ನೆಗೆದು ಇತರ ಪೆಟ್ರೆಲ್‌ಗಳ ಜತೆ ಹಾರತೊಡಗುತ್ತದೆ. ಬೆಳಕನ್ನು ಅಲ್ಲೆಲ್ಲಾ ಹರಿಯಿಸುತ್ತೇನೆ, ಅವುಗಳ ಕಾಲುಗಳು ಮೈಯಿಂದ ಎಷ್ಟೋ ಹಿಂದಕ್ಕೆ ನೀಡಿಕೊಂಡಿವೆ. ಹಾರುತ್ತಾ, ನಿಗೂಢವಾದ ಮಂಜಿನೊಳಗೆ ಸೇರಿಕೊಳ್ಳುತ್ತಾ ಪುನಃ ಕಾಣಿಸಿಕೊಳ್ಳುತ್ತಾ ಸುತ್ತಿಸುತ್ತಿ ನನ್ನ ಟಾರ್ಚಿನ ಬೆಳಕಿನ

ಪರಿವೆಯಿಲ್ಲದೆ, ಉದ್ರೇಕದಿಂದ ಕಂಪಿಸುತ್ತಾ ಒಂದರ ಹಿಂದೊಂದು ಬಿಲದೊಳಗೆ ನುಸುಳುತ್ತವೆ. ಹುಲ್ಲು ಪೊದೆಗಳನ್ನು ತಮ್ಮ ಗರಿಗಳಿಂದ ಚದರಿಸಿ ದಾರಿ ಮಾಡಿಕೊಳ್ಳುತ್ತಾ ಬಿಲದೊಳಕ್ಕೆ ಇಳಿಯುತ್ತಿವೆ.

ಇದೀಗ ಭೂಮಿಯ ಅಂತರಾಳದಿಂದ ವಿಚಿತ್ರ, ಸಂತೃಪ್ತ, ಮೃದು ಗುಂಯ್ ಗುಡುವಿಕೆ ಮನುಷ್ಯರ ಪಿಸುದನಿಯೋ ಎಂಬಂತೆ ಕೇಳಿಬರತೊಡಗಿದೆ. ಮೃಗ ಪಕ್ಷಿಗಳೂ ಯಾವ ಭಾವನಾ ವಿಶೇಷಗಳನ್ನು ಹೊಂದಿವೆಯೆಂದು ನಾವೆಂತು ತಿಳಿದೇವು? ಆದರೆ ಹಾಡುತ್ತಿರುವ ಈ ನೆಲವು ತೀವ್ರವಾದ ಭಾವೋದ್ವೇಗದ ಆತಿಥ್ಯವನ್ನು ನನ್ನ ಕಿವಿಗಳಿಗೆರೆಯುತ್ತಿವೆ.

(ಇನ್ನು ಆಗಸ್ಟ್ ತಿಂಗಳ ತನಕವೂ ಮರಿಗಳಿಗೆ ಬಿಲದ ವಾಸ. ಎಲ್ಲಾದರೂ ಹಸಿವೆಯ ಬಾಧೆಯಿಂದ ರಾತ್ರಿ ಹೊರ ಬಯಲಿಗೆ ಬರಲೆತ್ನಿಸಿದರೂ ಅವುಗಳ ಹಾರಾಟಕ್ಕೆ ಇನ್ನೂ ಸಮಯವಿದೆ. ಹಾಗೇ ಕೆಲರಾತ್ರಿಗಳು ಕಳೆದವೆಂದರೆ ಸಮುದ್ರ ಪಯಣಕ್ಕೆ ಅಣಿಯಾಗಬೇಕು. ಕಗ್ಗತ್ತಲ ರಾತ್ರಿಯಲ್ಲೇ ಅವುಗಳ ಹಾರಾಟ—ವಿಶಾಲ ಸಾಗರದ ಮೇಲೆ. ಇನ್ನೂ ಬೆಳೆಯದ, ರೆಕ್ಕೆ ಬಲಿತು ಪುಷ್ಟವಾಗದ ಹಕ್ಕಿಗಳು ಡಿಸೆಂಬರ್ ತಿಂಗಳ ತನಕವೂ ಬಿಲದೊಳಗೇ ಇರುವುದಿದೆ. ಕೆಲವಂತೂ ತಮ್ಮ ದುರ್ಬಲ ಪಂಖಗಳು ಸಬಲವಾಗುವುದನ್ನು ನಿರರ್ಥಕವಾಗಿ ಕಾಯುತ್ತಾ, ಬಿಲದೊಳಗೇ ಚಳಿಗೆ ಮುರುಟಿ ಸಾವನ್ನಪ್ಪುತ್ತವೆ.)

ದ್ವೀಪದ ಉದ್ದಗಲಕ್ಕೂ ದಟ್ಟವಾಗಿ ಬೆಳೆದ ಹುಲ್ಲಿನ ಪೊದೆಗಳನ್ನು ಬೀಸುಗಾಲಿನಿಂದ ಸವರಿ ದಾರಿ ಮಾಡಿಕೊಂಡು ದೂರ ದೂರಕ್ಕೂ ಸುಳಿದಾಡುತ್ತೇನೆ. ಆಗಸವೆಲ್ಲಾ ಮುದ್ದು ಹಕ್ಕಿಗಳಿಂದ ತುಂಬುತ್ತಿದೆ. ಅವು ತಮ್ಮ ಬಲದಿಂದ ನೆಗೆಯುವಾಗ ಹಿಡಿಯಲೆತ್ನಿಸುತ್ತೇನೆ. ಆದರೆ ಗುಂಯ್ ಗುಡುತ್ತಾ ತಪ್ಪಿಸಿಕೊಂಡು ಭುರ್ರನೆ ಹಾರಿ ಆಕಾಶದಲ್ಲಿ ಕಣ್ಣಿಗೆ ಕಾಣದಂತೆ ವಿಲೀನವಾಗುತ್ತಿವೆ.

ನಾಲ್ಕು ಘಂಟೆಗಳು ಇದೇ ಸುಂದರ ಸ್ವಪ್ನದಲ್ಲಿ ಕಳೆದುಹೋಗುತ್ತದೆ. ಮುಂಜಾನೆಯ ಸೂಚನೆಯಾದಂತೆ, ಮಂದಪ್ರಕಾಶವು ದಿಗಂತದಿಂದ ಪಸರಿಸತೊಡಗುತ್ತಿದ್ದಂತೆ ಪ್ರಬುದ್ಧವಾದ ಸಾವಿರ ಸಾವಿರ ಹಕ್ಕಿಗಳು ಅತಿವೇಗವಾಗಿ ರಾಕೆಟ್ಟಿಗೆ ರೆಕ್ಕೆ ಹುಟ್ಟಿಕೊಂಡಂತೆ ಹಾರಿ ಮಾಯವಾಗುತ್ತಿವೆ. ಕೆಲವಂತೂ ಅಪಾಯಕರವಾಗಿ "ತಡವಾಗಿ ಹೋಯಿತು!" ಎಂದುಕೊಂಡಂತೆ ಪರವೇಗದಲ್ಲಿ ಆಕಾಶವನ್ನು ಸೀಳಿ ಅದೃಶ್ಯವಾಗುತ್ತವೆ. ಈ ಅತಿ ವೇಗದಲ್ಲಿ ಮುಂದೋಡುವ ಜೀವಿಗಳನ್ನು ನೋಡನೋಡುತ್ತಿದ್ದಂತೆ ಆಗಸವು ನೀಲಿ ಮುತ್ತಿನಂತೆ, ಬೇಳ್ ಬೂದಿ ಛಾಯೆಗೊಂಡು, ರಮ್ಯತೆಗೆ ಕಳೆಯೇರುತ್ತದೆ.

ರಾತ್ರಿಯು ಈ ಸಾಹಸ ಮುಕ್ತಾಯದ ಹಂತದಲ್ಲಿದೆ. ನಿಜ ಆದರೆ ಈ ದ್ವೀಪವು ಇನ್ನೂ ನನ್ನನ್ನು ಬಿಟ್ಟುಕೊಡುವುದಿಲ್ಲ. ಒಡ್ಡಿಯಾದ ಪಾದರಕ್ಷೆಗಳಿಗೆ ತಗಲು ವಲ್ಲಿಯೇ ಸದ್ದು ಕೇಳುತ್ತಿದೆ. ಹುಲ್ಲನ್ನು ಅತ್ತಿತ್ತ ಸರಿಸುತ್ತೇನೆ. ಒಂದು ಪೆಟ್ರೆಲ್ ಹಕ್ಕಿ ನನ್ನನ್ನೇ ನೋಡುತ್ತಿದೆ! ಹುಲ್ಲಿನ ಒಂದು ಸಿಕ್ಕು (ಜಡೆ) ಅದನ್ನು ಸೆರೆಯಾಗಿಸಿಬಿಟ್ಟಿದೆ. ಅದೊಂದು ಹೆಣ್ಣುಹಕ್ಕಿ. ಅದನ್ನು ಎತ್ತಿಕೊಳ್ಳುತ್ತೇನೆ. ಅದು ಬಿಡಿಸಿಕೊಳ್ಳಲು ಒದ್ದಾಡುತ್ತದೆ; ಕಿರಿಚಿಕೊಳ್ಳುತ್ತದೆ. ಅದು ಹಾರಿ ಹೋಗಲು ಬಯಸುತ್ತಿರುವುದು ಸ್ಪಷ್ಟವಾಗಿದೆ. ಬಿಡಲು ಮನಸ್ಸಿಲ್ಲ; ಆದರೂ ಬಿಟ್ಟುಬಿಡುತ್ತೇನೆ.

ಇಷ್ಟರಲ್ಲಿ ವಿಶಾಲಸಾಗರವು ಸುಂದರ, ಪ್ರಶಾಂತ, ಸೌಮ್ಯ, ಅಕ್ಷುಬ್ಧ ಪ್ರಸನ್ನವಾಗಿ, ಎಲ್ಲವೂ ಬೆಳಕಾಗಿ ಗೋಚರಿಸುತ್ತದೆ. ನನ್ನ ಕೈಯಿಂದ ಹಾರಿದ ಹಕ್ಕಿ ದೂರ ದೂರ ಸಾಗುತ್ತಾ ವೇಗ ಹೆಚ್ಚಿಸುತ್ತಾ ಹೋಗುತ್ತಿದೆ. ಉದ್ದ ನೀಳ ರೆಕ್ಕೆಗಳು ಆಕಾಶ ಬಳಿಯುತ್ತಾ ಗುಡ್ಡದ ಇಳಿಜಾರಿಂದ ಸಮುದ್ರದೆಡೆಗೆ ಸೆಳೆಯುತ್ತಾ ಸಾಗಿವೆ. ನಾನು ನೀರ ಬಳಿ ನಿಲ್ಲುತ್ತೇನೆ. ಅದರ ಹಾರಾಟ ಅವನ್ನು ಆತುರದಿಂದ ಕೂಡಿದೆ. ಈ ಅವಸರವೇಕೆ? ಬಗೆ ಹರಿಯುವುದಿಲ್ಲ. ಆದರೆ ಮೂಡುತ್ತಿರುವ ಸೂರ್ಯಕಿರಣಗಳ ಬೆಳಕಿನಲ್ಲಿ ಸಮುದ್ರಗಿಡುಗಗಳ (Sea gulls) ದೊಡ್ಡ ಹಿಂಡು ಆ ಪೆಟ್ರೆಲ್ಲನ್ನು ಸುತ್ತುವರಿದುದು ಕಾಣುತ್ತದೆ; ಕಂಡು ಚಕಿತನಾಗುತ್ತೇನೆ. ಆ ದೊಡ್ಡ ಹಕ್ಕಿಗಳು ಪುಟ್ಟ ಪೆಟ್ರೆಲ್ಲನ್ನು ಅತ್ತಿಂದಿತ್ತ, ಇತ್ತಿಂದತ್ತ ಅಟ್ಟಿಸಿಕೊಂಡು ಹಿಂದೆ ಮುಂದೆ ಓಡಿಸುತ್ತಿವೆ. ಆಕ್ರಮಣಕಾರಿ ಹಕ್ಕಿಗಳ ಆ ರೀತಿ ಒಂದು ಸುಂದರ ನೃತ್ಯನಾಟಕದಂತೆ ಕಂಗೊಳಿಸುತ್ತಿದೆ. ಆ ಪುಟ್ಟ ಹಕ್ಕಿ "ತಪ್ಪಿಸಿಕೊಂಡು ಬಿಡಲಿ" ಎಂದು ಮನಸಾರೆ ಆಶಿಸುತ್ತಿದ್ದರೂ ನನ್ನ ಕಲ್ಪನಾ ಪ್ರಪಂಚವನ್ನೇ ಮೋಡಿಗೊಳಿಸುತ್ತಿರುವ ಸಮುದ್ರಗಿಡುಗಗಳ ಪೈಖರಿಗೆ ಮನ ಸೋಲುತ್ತೇನೆ. ನೋಡನೋಡುತ್ತಿದ್ದಂತೆ ಬೆನ್ನಟ್ಟಿ ಬರುತ್ತಿರುವ ಗಿಡುಗಗಳು ಸಮೀಪದ ಇನ್ನೊಂದು ದ್ವೀಪಕ್ಕೆ ವಂಶಾಭಿವೃದ್ಧಿಗಾಗಿ ವಲಸೆ ಬರುತ್ತಿರುವ "ಪಫಿನ್" ಹಕ್ಕಿಗಳ ಸಮುದಾಯದ ಮೇಲೆರಗುತ್ತವೆ. ಆದರೆ ಪಾರಿವಾಳಗಳಂತೆ ಕಾಣುವ ಪ್ರೌಢವಾದ ಪಫಿನ್‌ಗಳಿಗೆ ಯಾವ ಭಯವೂ ಇಲ್ಲ. ಗಿಡುಗಗಳು ಅವನ್ನು ಬೇಟೆಯಾಡುವುದೂ ಇಲ್ಲ. ಹಾಗಿದ್ದರೂ ನನ್ನ ಆ ಪುಟ್ಟ ಪೆಟ್ರೆಲ್‌ನ ಚೀತ್ಕಾರವು ಪಫಿನ್‌ಗಳಲ್ಲಿ ಗಲಿಬಿಲಿಯನ್ನು ಹುಟ್ಟಿಸಿಯೇಬಿಟ್ಟಿದೆ. ಪಫಿನ್‌ಗಳು ಎಲ್ಲೆಂದರಲ್ಲಿ ನುಗ್ಗಿ ಹಾರುತ್ತಿವೆ. ಈ ಗಜಿಬಿಜಿಯ ಒಳಗೆ ಪೆಟ್ರೆಲ್ ಮುಳುಗಿದಂತೆ ಕಣ್ಮರೆಯಾಗಿ ಹೋಗುತ್ತದೆ.

ಭಂಗಗೊಂಡ ಗಿಡುಗಗಳು ಆ ಪ್ರದೇಶದಿಂದ ದೂರ ಸಾಗುತ್ತವೆ. ಪಫಿನ್‌ಗಳೂ ತಮ್ಮ ಪಾಡಿಗೆ ಶಾಂತಗೊಂಡು ತಮ್ಮ ನಿರ್ದೇಶಿತ ದ್ವೀಪದೆಡೆಗೆ ಹಾರತೊಡಗುತ್ತವೆ. ಈ ಪೆಟ್ರೆಲ್ ಒಂಟಿಯಾಗಿ ನೀಲ ಆಗಸದಲ್ಲಿ ನಿಚ್ಚಳವಾಗಿ ಕಾಣುತ್ತಿದೆ. ಆ ಹಾರಿದ ಗಿಡುಗಗಳಿಗೆ ಕಾಣದಂತೆ ದಿಕ್ಕು ಬದಲಿಸಿ ದೂರವಾಗಿ ಸಾಗತೊಡಗುತ್ತದೆ. ನನ್ನ ದೂರದರ್ಶಕವನ್ನು ಅದರೆಡೆಗೆ ಕೇಂದ್ರೀಕರಿಸುತ್ತೇನೆ. ಅದು ಪುನಃ ತನ್ನ ವೇಗವನ್ನು ಹೆಚ್ಚಿಸುತ್ತಾ ಹೆಚ್ಚಿಸುತ್ತಾ, ದಾರಿಯಲ್ಲಿ ಪುನಃ ಎದುರಾದ—ಆದರೆ ಸಮುದ್ರದ ಅಲೆಗಳ ಮೇಲೆ ಕುಳಿತ—ಹದ್ದುಗಳ ಇನ್ನೊಂದು ತಂಡವನ್ನು ದೂರವಿಡಲು ದಿಕ್ಕು ಬದಲಾಯಿಸಿ ಬಳಸುದಾರಿಯಿಂದ ಸಾಗುತ್ತಾ ತನ್ನ ನಿಶ್ಚಿತ ದಿಕ್ಕಿನಲ್ಲೇ ಹಾರತೊಡಗುತ್ತದೆ! ಅಷ್ಟರಲ್ಲೇ ಸಮುದ್ರದ ಮೇಲೆ ಕುಳಿತ ಇನ್ನೊಂದು ಒಂಟಿ ಹದ್ದು ಕಾಣಬರುತ್ತದೆ. ಅದರಿಂದಲೂ ತಪ್ಪಿಸಿಕೊಳ್ಳಲು ಎತ್ತರಕ್ಕೆ ಹಾರಿ ಹಾರಿ ಮುಂದೋಡುತ್ತಿದೆ. ಸುತ್ತೆಲ್ಲಾ ಬರಿಯ ನೀರೇ ನೀರು. ಸಾಗರವೇ ಸಾಗರ. ಅದರ ಮೇಲೆ ವಿಶಾಲವಾದ ಅನಂತ ಆಗಸದಲ್ಲಿ ಏಕಾಂಗಿಯಾಗಿ ಸಾಗುತ್ತಿದೆ ಪೆಟ್ರೆಲ್, ದರ್ಶಕವನ್ನು ಅದರ ಮೇಲೆಯೇ ಕೇಂದ್ರೀಕರಿಸಿದ್ದರೂ, ದೂರ ದಿಗಂತದಲ್ಲಿ ತೀರ ಚಿಕ್ಕದಾಗಿ, ಚುಕ್ಕೆಯಾಗಿ ಮಾಯವಾಗಿಬಿಡುತ್ತದೆ!

ತತ್‌ಕ್ಷಣವೇ ಭಾವೋದ್ವೇಗದಿಂದ ಅತ್ಯಂತ ಆಯಾಸಗೊಂಡವನಂತೆ—ಅದರ ಜತೆ ಹಾರಿ ಹಾರಿ ಉತ್ತೇಜಿತನಾಗಿದ್ದಂತೆ—ಆ ಅದ್ಭುತ ಅನುಭವದಲ್ಲಿ ಪಾಲ್ಗೊಂಡಂತೆ—ರಾತ್ರಿಯ ಅನುಭವಗಳಲ್ಲಿ ಮುಳುಗಿ ಮಿಂದಂತೆ ಎನಿಸಿ ಆಯಾಸಗೊಂಡು ಅಲ್ಲೇ ಕುಳಿತು—ಅರುಣಕಾಂತಿಯಿಂದ ಕಂಗೊಳಿಸುವ ನಯನಮನೋಹರ ದಿಗಂತವನ್ನು—ಮೂಡುತ್ತಿರುವ ಸೂರ್ಯನನ್ನು ಎದುರ್ಗೊಳ್ಳುತ್ತೇನೆ. ಮೃದುವಾದ ಹೊಸಗಾಳಿ ಚಿಗುರಿ ಪಿಸುಗುಟ್ಟುತ್ತಿದೆ. ಅಲ್ಲೇ, ಆ ರಾತ್ರಿ ಹಾಡುವ, ಹಗಲಲ್ಲಿ ನಿಸ್ತಬ್ಧವಾಗಿ ನಿದ್ರೆಗೈವ—ದ್ವೀಪದ ಜತೆ ನಿದ್ರಾವಶನಾಗುತ್ತೇನೆ.

ಸರಸ್ವತಿ ಬಡೆಕ್ಕಿಲ

———

ವಿದ್ಯೆಯಿಂದಲಂಕೃತನಾದರೂ ದುರ್ಜನರನ್ನು ದೂರವಿಡಬೇಕು. ಹೆಡೆ ಮಣಿಯಿಂದ ಭೂಷಿತವಾಗಿದ್ದರೂ ಸರ್ಪ ಭಯಂಕರವಲ್ಲವೇ”

—ಭರ್ತೃಹರಿ

ಪುಸ್ತಕ ವಿಮರ್ಶೆ

ಗೀತಾಂಜಲಿ—ಮೂಲ: ರವೀಂದ್ರನಾಥ ಠಾಕೂರ್, ಕನ್ನಡಕ್ಕೆ: 'ಅನಂತ' (ಬಿ. ಎಸ್. ಅನಂತಸ್ವಾಮಿರಾವ್) ಕೃಪಾನಿಕೇತನ ಪುಸ್ತಕಮಾಲೆ, ೪೦೬/ಎ, ೭ನೇ ಮೇನ್, ೨ನೇ ಹಂತ, ಜಯನಗರ, ಬೆಂಗಳೂರು; ಪುಟ XXXV+೧೩೮. ಕ್ರೌನ್ ಅಷ್ಟದಳ. ೧೯೮೩.

ಬಂಗಾಳಿ ಕವಿ ರವೀಂದ್ರನಾಥಠಾಕೂರ್ ಅವರ ಪ್ರಸಿದ್ಧ ಕೃತಿ ಗೀತಾಂಜಲಿಯ ಕನ್ನಡ ಅನುವಾದವನ್ನು 'ಅನಂತ' ಅವರು ನೀಡಿದ್ದಾರೆ. ರವೀಂದ್ರರಿಗೆ ನೊಬೆಲ್ ಪ್ರಶಸ್ತಿಯನ್ನು ತಂದ ಈ ಕೃತಿಯ ಇಂಗ್ಲಿಷ್ ಅವತರಣಿಕೆ ೧೯೧೨ರಲ್ಲಿ ಪ್ರಕಟವಾಯಿತು. ಮರುವರ್ಷವೇ ಈ ಕೃತಿಗೆ ನೊಬೆಲ್ ಪಾರಿತೋಷಕ ಲಭಿಸಿತು.

೧೦೩ ಪದ್ಯಗಳ 'ಗೀತಾಂಜಲಿ' ಸಂಕಲನವನ್ನು ಕನ್ನಡಿಸುವಾಗ ಅನಂತ ಅವರು ಅದಕ್ಕೆ ೫ ಪದ್ಯಗಳನ್ನು ಸೇರಿಸಿ 'ಅಷ್ಟೋತ್ತರ ಗೀತಾಂಜಲಿ' ಎಂದು ಕರೆದಿದ್ದಾರೆ. ಗೀತಾಂಜಲಿಯಲ್ಲಿಲ್ಲದ ಈ ಐದು ಪದ್ಯಗಳೆಂದರೆ ಬಂಗಾಳಿ ಗೀತಾಂಜಲಿಯಲ್ಲಿರುವ ಒಂದು ಪದ್ಯ, ರವೀಂದ್ರ ವಂದನೆಯಾಗಿ ಒಂದು ಪದ್ಯ, ರವೀಂದ್ರರು ಮರಣ ಶಯ್ಯೆಯಲ್ಲಿದ್ದಾಗ ರಚಿಸಿದ ಒಂದು ಪದ್ಯ ಹಾಗೂ ರವೀಂದ್ರರ ಹಸ್ತಾಕ್ಷರದ ಒಂದು ಪದ್ಯ ಹಾಗೂ ಅದರ ಕನ್ನಡಾನುವಾದ. ಕೃತಿಗೆ ಮುನ್ನುಡಿಯಾಗಿ ರವೀಂದ್ರರ ಜೀವನದ ಪರಿಚಯವನ್ನೂ ಅನುವಾದಕರು ಮಾಡಿಕೊಟ್ಟಿದ್ದಾರೆ.

ಗೀತಾಂಜಲಿಯ ಬಹುತೇಕ ಪದ್ಯಗಳು ವಿಶ್ವದ ಹಿಂದಿರುವ ಶಕ್ತಿಗೆ ವ್ಯಕ್ತಿ ತನ್ನ ಅನುಭವಗಳನ್ನು ನಿವೇದಿಸಿಕೊಳ್ಳುತ್ತಾ ಆ ಶಕ್ತಿಯ ಅಥವಾ ಪರಮಾತ್ಮನ ಲೀಲೆ ಈ ಜಗತ್ತಿನ ಎಲ್ಲಕ್ಕೂ ಕಾರಣ ಎಂದು ಹೇಳುವ ಹವಣಿಕೆಯಲ್ಲಿವೆ. ಪರಮಾತ್ಮ ಕವಿಯ ಹಾಡಿಗೆ, ಬದುಕಿಗೆ, ಅನುಭವಕ್ಕೆ ಹೆಣೆದುಕೊಂಡಿರುವುದನ್ನು ಈ ಪದ್ಯಗಳು ತೋರಿಸುತ್ತವೆ. ಉದಾಹರಣೆಗೆ ಕೆಲವು ಸಾಲುಗಳನ್ನು ನೋಡಬಹುದು:

'ನಿನ್ನ ಸಂಕೀರ್ತನೆಯ ಹರ್ಷದಲ್ಲಿ ಮೈಮರೆತು
ನನ್ನೊಡೆಯ ನಿನ್ನನು
ಮಿತ್ರನೆಂದೆಣಿಸುತಿರುವೆ'

(ಗಾನಾನಂದ)

'ಹೇ, ದೇವ, ನಿನ್ನ ನಾದದ ಅಪಾರ ಬಲೆಯಲ್ಲಿ
ನನ್ನೀ ಹೃದಯವನು ಸೆರೆಹಾಕಿ ಹಿಡಿದಿರುವೆ'

(ನಾದಬ್ರಹ್ಮ)

'ನನ್ನ ಜೀವ ಪ್ರಾಣದಲಿ ಅಡಗಿರುವ ಭವ್ಯಶಕ್ತಿ ನಿನ್ನದೆಂದರಿತು
ತೋರಿಸುವೆ ಕಾರ್ಯದಲಿ ಹುದುಗಿರುವ ನಿನ್ನ ಪ್ರೇರಣೆಯನ್ನು
(ಅಂತರ್ಯಾಮಿ)

ಬಹುತೇಕ ಆತ್ಮ ನಿವೇದನ ಕವನಗಳು ಮೇಲೆ ಹೇಳಿರುವ ಭಾವನೆಯನ್ನೇ ಬೇರೆ ಬೇರೆ ಮಾತುಗಳಲ್ಲಿ ಹಿಡಿದಿಟ್ಟಿವೆ. ಸಾಮಾಜಿಕ ಎನ್ನಬಹುದಾದ ಪದ್ಯಗಳಲ್ಲೂ ಪರಮಾತ್ಮನ ಅಸ್ತಿತ್ವವೇ ಸಾಮಾಜಿಕ ಸಮತೋಲನೆಯನ್ನು ಮೂಡಿಸಬಲ್ಲದು ಎಂಬ ದನಿಯನ್ನು ಹೊರಡಿಸುತ್ತದೆ. ಉದಾಹರಣೆಗೆ: 'ಕರ್ಮಯೋಗಿಯ ಗೀತೆ' ಎಂಬ ಕವನವನ್ನು ನೋಡಬಹುದು. ದೇವರು ಪೂಜೆ, ಗುಡಿ ಇಲ್ಲಲ್ಲದೆ ಕಾಯಕದಲ್ಲಿ ನಿರತರಾದವರೊಡನೆ ಬೆರೆತಿದ್ದಾನೆ. ನೀನು ಅಲ್ಲಿಗೆ ಹೋಗು ಎನ್ನುವ ಆದೇಶವನ್ನು ಬಿಂಬಿಸುತ್ತದೆ.

ರವೀಂದ್ರರ ಈ ಪದ್ಯಗಳು ಪರಮಾತ್ಮನ 'ಲೀಲೆ'ಯನ್ನು ಪರಿಚಯಿಸುವುದರಿಂದ, 'ಅವನಿಂದಲೇ' ಎಲ್ಲವೂ ಎಂಬ ದನಿಯನ್ನು ಹೊರಡಿಸುವುದರಿಂದ ಸಂಕಲನದ ಕವನಗಳನ್ನು ಗಮನಿಸುವಾಗ ಜಗತ್ತಿನ ಸೃಷ್ಟಿ, ಮಾನವನ ಬದುಕಿನ ಬಗೆಗೆ ಸೋಜಿಗದ ಅಂಶ ಕಾಣುವುದಿಲ್ಲ. ಕವಿಯ ಮನಸ್ಸಿನಲ್ಲಿ ಹುಟ್ಟುವ ಸೋಜಿಗದ ಪ್ರಶ್ನೆಗಳು 'ಅವನ ಲೀಲೆ'ಯನ್ನು ಹೇಳುವುದರಲ್ಲಿ ತೃಪ್ತವಾಗಿಬಿಡುತ್ತವೆ. ಇದು ರವೀಂದ್ರರ ಮಹತ್ವವಾಗಿರುವಂತೆ ಅವರ ಮಿತಿಯೂ ಆಗಿದೆ. ಈ ಮಿತಿಯೊಳಗಡೆಯೂ ಅಲ್ಲಲ್ಲಿ ಕೆಲವು ಪದ್ಯಗಳಲ್ಲಿ ಕವಿ ಪ್ರತಿಭೆ ಮಿಂಚಿದೆ. 'ದಿವ್ಯಶಕ್ತಿ' ಎಂಬ ಕವನ ನನಗೆ ಮೆಚ್ಚುಗೆಯಾದ ಕವನ. 'ಅರಿವಿಲ್ಲದೆಯೋ ನಾ ಬಂದೆ ಬದುಕಿನೀ ಜಗದೊಳಗೆ' ಎಂದು ಆರಂಭವಾಗುವ ಈ ಕವನದಲ್ಲಿ ಕವಿ ತನ್ನನ್ನು ಇಲ್ಲಿ 'ತೇಲಿಬಿಟ್ಟ ಭವ್ಯಶಕ್ತಿ, ಯಾವುದು ಆ ದಿವ್ಯಶಕ್ತಿ?' ಎಂದು ಪ್ರಶ್ನಿಸಿಕೊಳ್ಳುತ್ತಾ ಮುಂದುವರೆಯುತ್ತಾರೆ. ಈ ಶಕ್ತಿ ಮಾತೃಸ್ವರೂಪವು ಎಂಬ ತೀರ್ಮಾನಕ್ಕೆ ಬಂದು ಈ 'ಶಕ್ತಿ' ಹುಟ್ಟಿಸಂತೆಯೇ ಸಾವಿನಲ್ಲಿಯೂ ಬರುವನು ಎಂದು ಹೇಳುವ ಈ ಕವನದ ಕೊನೆಯ ಸಾಲುಗಳಿವು:

'ಮಮತೆಯೆಂತೋ ಜೀವದಲ್ಲಿ
ಇರಲಿ ಮಮತೆ ಮೃತ್ಯುವಲ್ಲಿ

ತಾಯಿ ತನ್ನಯ ಮಗುವನು
ಉಣಿಸಲೆಳಸುತ ಎಡದೊಳು

ಬಿಡಿಸೆ ಬಲದ ಮೊಲೆಯನು
ಕಂದ ಬಿಡದೆ ಅಳುವುದು
ಮತ್ತೆ ಒಡನೆ ಮರೆವುದು
ತೃಪ್ತಿ ಕಾಣಲು ಎಡದೊಳು'

ತಾಯಿ ಒಂದು ಮೊಲೆಯಿಂದ ಮತ್ತೊಂದು ಮೊಲೆಗೆ ಮಗುವಿಗೆ ಹಾಲುಣಿಸುವ ಮಧ್ಯ ಅವಧಿ ಒಟ್ಟು ಹುಟ್ಟು–ಸಾವಿಗೆ ಪ್ರತಿಮೆಯಾಗಿ ಮೂಡಿಬಂದಿದೆ. ಇಂಥ ಶಕ್ತಿಶಾಲಿ ಪ್ರತಿಮೆಗಳನ್ನೂ ರವೀಂದ್ರರ ಕವಿತೆಗಳು ಅಲ್ಲಲ್ಲಿ ಮಿಂಚಿಸುತ್ತವೆ.

ರವೀಂದ್ರರು 'ಗೀತಾಂಜಲಿ' ರಚಿಸಿದ ೨೦ ವರ್ಷಗಳ ನಂತರ ಅವನ್ನು ಓದಿದಾಗ ಹೊಸದನ್ನು ಓದಿದ ಅಥವಾ ಮತ್ತೆ ಮತ್ತೆ ಓದಿ ಅರ್ಥಮಾಡಿ ಕೊಳ್ಳುವುದಿದೆ ಎನಿಸುವ ಭಾವನೆ ಓದುಗನಿಗೆ ಮೂಡುವುದಿಲ್ಲ. ಕನ್ನಡದ ಬೇಂದ್ರೆಯವರ ಕಾವ್ಯ ಓದಿದ ಓದುಗನಿಗೆ ರವೀಂದ್ರರ ಪದ್ಯಗಳು ಸಪ್ಪೆ ಅನಿಸುತ್ತವೆ. ಬೇಂದ್ರೆಯವರ ಕಾವ್ಯದ ನಾದ, ಅರ್ಥ ತರಂಗಗಳನ್ನೆಬ್ಬಿಸುವ ಶಕ್ತಿ ರವೀಂದ್ರರ ಪದ್ಯಗಳಿಗೆ ಇಲ್ಲದಿರುವುದು ಇದಕ್ಕೆ ಕಾರಣವಿರಬಹುದು.

'ಅನಂತ' ಅವರು ಈ ವರ್ಷ ತಮ್ಮ ಅನುವಾದವನ್ನು ಪ್ರಕಟಿಸಿದ್ದರೂ ಅನುವಾದ ಕಾರ್ಯ ೧೯೨೪ರಲ್ಲೇ ಪೂರ್ಣಗೊಂಡಿತ್ತು ಎಂದು ಹೇಳಿದ್ದಾರೆ. ಕನ್ನಡದಲ್ಲಿ ಇದು ಗೀತಾಂಜಲಿಯ ೫ನೇ ಅನುವಾದ. ಇದರ ಪ್ರಕಟಣೆಯ ಅನಿವಾರ್ಯತೆಯ ಬಗೆಗೆ 'ಅನಂತ ಅವರೇನು ಹೇಳುವುದಿಲ್ಲ.

ಒಂದು ಸಾಹಿತ್ಯ ಕೃತಿಯ ಅನುವಾದ ಮಾಡುವಾಗ ಮೂಲದ ಧಾಟಿ-ಧೋರಣೆಗಳನ್ನು ಬಿಡದೆ ಅದರ ಭಾವನೆ ಸಂಪೂರ್ಣವಾಗಿ ಅನುವಾದವಾದ ಭಾಷೆಯಲ್ಲಿ ಬರುವಂತೆ ಮಾಡಬೇಕು. ಮೂಲದ ಭಾವನೆ ತಪ್ಪುವಂತೆ ಅದರಿಂದ ಪದವಾಕ್ಯಗಳನ್ನು ತೆಗೆಯುವುದು ಅಥವಾ ತಮ್ಮದನ್ನು ಸೇರಿಸುವುದು ಮೂಲಕ್ಕೆ ಅಪಚಾರವಾಗುತ್ತದೆ.

ಅನಂತ ಅವರು ಭಾಷಾಂತರ ಮಾಡುವಾಗ ಮೂಲವನ್ನು ಕೆಲವೆಡೆ ನಿಷ್ಠೆಯಿಂದ ಅನುಸರಿಸಿದರೆ ಕೆಲವೆಡೆ ಸ್ವಾತಂತ್ರ್ಯ ವಹಿಸಿದ್ದಾರೆ. 'Where the mind is without fine' ಎಂಬ ಠಾಗೂರರ ಪ್ರಸಿದ್ಧ ಗೀತವನ್ನು ಅನಂತರು ಸಾಕಷ್ಟು ಸಮರ್ಪಕವಾಗಿ ಅನುವಾದಿಸಿದ್ದಾರೆ. ಆದರೆ ಹಲವೆಡೆ ಈ ನಿಷ್ಠೆ, ಸಮರ್ಪಕತೆ ವ್ಯಕ್ತವಾಗುವುದಿಲ್ಲ. 'ಅಮರಜೀವ' ಎಂಬ ಶೀರ್ಷಿಕೆ ಇರುವ ಮೊದಲ ಪದ್ಯದ ಆರಂಭ (ಮೂಲ) ಇಂಗ್ಲೀಷ್‌ನಲ್ಲಿ ಹೀಗಿದೆ.

Thou hast made me endless
Such is thy pleasure

this frail vessel thou emptiest
again and again
and fillest it ever with fresh life

ಇದರ ಅನುವಾದ ಹೀಗಿದೆ :

ಅನಂತನಾಗೆನ್ನ ಸೃಜಿಸಿರುವ
ನಿನ್ನ ಲೀಲೆ ಅದಂತಿಹುದು
ಈ ಸೂಕ್ಷ್ಮಾಂಗವನು ಸಲಸಲವು ಬರಿದಾಗಿಸುವ
ನವಚೇತನವ ತುಂಬಿಸುವೆ

ಮೂಲದ pleasure ಇಲ್ಲಿ 'ಲೀಲೆ ಆಗಿದೆ. ಹಾಗೆಯೇ frail vessel 'ಸೂಕ್ಷ್ಮಾಂಗ' ವಾಗಿದೆ. ಈ ಪದಕ್ಕೆ 'ನಶ್ವರ ಪಾತ್ರೆ' ಎಂದು ಅರ್ಥ ಬರುವಂತೆ ಬಳಸಿದ್ದಲ್ಲಿ ಮೂಲಕ್ಕೆ ಹತ್ತಿರವಾಗುತ್ತಿತ್ತು.

ರವೀಂದ್ರರು 'ನಿವೇದನೆ'ಯ ಕೆಲವು ಪದ್ಯಗಳಲ್ಲಿ ಕೆಲವೆಡೆ 'ಹೇ ದೇವ' ಬಳಸಿದರೆ ಅನುವಾದಕರು ತಮಗೆ ಅನುಕೂಲವಾದೆಡೆಯೆಲ್ಲ ಅದನ್ನು ಬಳಸಿದ್ದಾರೆ. ಉದಾಹರಣೆಗೆ 'ಪೂಜಾಸುಮ' ಎಂಬ ಪದ್ಯದ ಮೂಲ ನೋಡಿ :

Pluck this little flower and take it,
delay not ! I fear rest it droop
and drop into the dust

ಅನುವಾದ :

'ಬಿಡಿಸಿಕೆಗೆ ಹೇ, ದೇವ,
ಈ ಪುಟ್ಟ ಸುಮವನ್ನು ;
ತಡಮಾಡದಿರು, ಓ, ದೇವ
ಬಾಡಿ ಸೇರಲಿದೆ ಮಣ್ಣನ್ನು'

ಈ ಅನುವಾದ ಮೂಲದಿಂದ ಸಾಕಷ್ಟು ದೂರವಿರುವುದು ಸುಸ್ಪಷ್ಟ ಮೂಲದಲ್ಲಿಲ್ಲದ 'ಓ, ದೇವ' ಎರಡು ಬಾರಿ ಬಂದಿದೆ ಅಲ್ಲದೆ ಮೂಲದ 'I fear' ಬಿಟ್ಟುಹೋಗಿದೆ.

ಈ ರೀತಿಯ ಸ್ವಾತಂತ್ರ್ಯವನ್ನು ಅನುವಾದಕರು ಬಹಳಷ್ಟು ಕವನಗಳಲ್ಲಿ ಮಾಡಿದ್ದಾರೆ. ಕೆಲವೆಡೆ ಇದು ಆಭಾಸದ ಮಟ್ಟಕ್ಕೂ ಹೋಗಿದೆ. 'ಕರ್ಮಯೋಗಿಯ ಗೀತೆ' ಪದ್ಯದ ಒಂದು ಭಾಗದ ಮೂಲ ಜೀಗಿದೆ :

"He is there where the tiller is tilling the

hardground and where the puthmaker is breaking the stones. He is with them in son and in shower and his garment is covered with dust put off thy holy mantle and even like him some down on the dusty soil."

ಇದರ ಅನುವಾದ ನೋಡಿ :

ಆತನಿರುವನು ಗೊಡ್ಡು ಭೂಮಿಯನುಳುತಿಹ
ರೈತರೆಡೆಯಲಿ ಬಳಲುತ
ಕಲ್ಲುಬಂಡೆಯನೊಡೆವ ಒಡ್ಡರ
ಸಂಗದಲಿ ತಾ ಸೇರುತ

ಮುಗುಟ ತೆಗೆದೆಸೆ ಮೂಲೆಗೆ
ಅಂತೆ ಬಾ ನೀ ಮಣ್ಣಿಗೆ
ಮಲಿನ ವಸ್ತ್ರದಿ ಬಯಲಿಗೆ
ಎಲರು ಮಳೆ ಬರಿ ಬಿಸಿಲಿಗೆ'

ಕನ್ನಡ ಭಾಷೆಯ ಜಾಯಮಾನಕ್ಕೆ ಒಗ್ಗದಂತೆ ಮಾಡಿದ ಭಾಷಾಂತರವನ್ನು ಈ ತುಣುಕಿನಲ್ಲಿ ಕಾಣಬಹುದು. ಮೂಲದಲ್ಲಿಲ್ಲದ 'ಬಳಲುತ' ಎಂಬ ಪದ ಅನುವಾದದಲ್ಲಿ ಸೇರಿದೆ. 'ರೈತರೆಡೆಯಲಿ ಬಳಲುತ' ಎಂಬುದು ಪರಮಾತ್ಮ ರೈತರೆಡೆಯಲ್ಲಿ ಬಳಲುತ್ತಿದ್ದಾನೆ ಎಂಬ ಅರ್ಥ ತರುತ್ತದೆ. ಆದರೆ ಕವಿಯ (ಅನುವಾದಕನ) ಆಶಯ ಬಳಲುತ ಕಲ್ಲುಬಂಡೆಯನೊಡೆವ ಒಡ್ಡರ' ಎಂದಾಗಬೇಕು. ಇನ್ನು ನಾನು ಮೇಲೆ ತೋರಿಸಿರುವ ಮೂಲದ ಎರಡನೆಯ ಭಾಗದ ಅರ್ಥ ಅನುವಾದದಲ್ಲಿ ತಿರುಗುಮುರುಗಾಗಿದೆ. 'ಅವನು (ಪರಮಾತ್ಮ) ಬಿಸಿಲಿನಲ್ಲಿ ಮಳೆಯಲ್ಲಿ ಅವರೊಂದಿಗಿದ್ದಾನೆ. ಅವನ ಉಡುಪು ಧೂಳಿನಿಂದ ಆವೃತವಾಗಿದೆ. ನಿನ್ನ ಮಡಿಮುಗುಟ ತೆಗೆದೆಸೆದು ಅವನಂತೆ ಮಣ್ಣಿನ ನೆಲಕ್ಕೆ ಬಾ" ಎಂದು ಕವಿ ಕರೆಯುತ್ತಿದ್ದಾನೆ. ಈ ಭಾವನೆ ಅನುವಾದದಲ್ಲಿ ಮೂಡುವುದಿಲ್ಲ.

ಒಟ್ಟಿನಲ್ಲಿ ಅನುವಾದ ಸೊರಗಿದೆ. ಮೂಲದ ಬಹುತೇಕ ಆಶಯ, ದನಿ ಅನುವಾದಪಲ್ಲಿ ಮರೆಯಾಗಿದೆ. ಉತ್ತಮ ಮುದ್ರಣದಿಂದ ಕೂಡಿದ ಗೀತಾಂಜಲಿ ಕೃತಿ ಸಾಮಾನ್ಯ ಅನುವಾದದ ಕೃತಿಯಾಗಿದೆ.

ಸತ್ಯನಾರಾಯಣ

———

ಪುಸ್ತಕ ಪ್ರಪಂಚ

(ಮಾಸ ಪತ್ರಿಕೆ)

ಕ್ರೌನ್ ಅಷ್ಟದಳ ೬೪ ಪುಟಗಳು

ಬಿಡಿ ಪ್ರತಿ: ಒಂದು ರೂಪಾಯಿ

ವಾರ್ಷಿಕ ಚಂದಾ: ೧೦ ರೂಪಾಯಿ

ಸಾರ್ವಜನಿಕ ವಿದ್ಯಾವಂತರ ಉಪಯೋಗಕ್ಕಾಗಿ, ಮುಖ್ಯವಾಗಿ ಗ್ರಾಮಸ್ಥರ ಮತ್ತು ಗ್ರಾಮ ಪುಸ್ತಕ ಭಂಡಾರಗಳ ಅಧಿಕಾರಿಗಳ ಉಪಯೋಗಕ್ಕಾಗಿ ಈ ಪತ್ರಿಕೆ ಪ್ರಕಟವಾಗುತ್ತಿದೆ.

(ಅ) ಕನ್ನಡೇತರ ಭಾಷೆಗಳಲ್ಲಿ ಪ್ರಕಟವಾದ ಪುಸ್ತಕಗಳ ಮತ್ತು ಲೇಖನಗಳ ಸಾರಾಂಶಗಳನ್ನು ಪ್ರಕಟಿಸಿ ಅವುಗಳ ಪರಿಚಯವನ್ನು ಮಾಡಿಕೊಡುವುದು.

(ಆ) ಆಯಾ ತಿಂಗಳಲ್ಲಿ ಪ್ರಕಟವಾದ ಎಲ್ಲ ಕನ್ನಡ ಪುಸ್ತಕಗಳ ಮತ್ತು ಮುಖ್ಯ ಕನ್ನಡ ಲೇಖನಗಳನ್ನು ಪ್ರಕಟಿಸುವುದು.

(ಇ) ಕನ್ನಡದಲ್ಲಿ ಪ್ರಕಟವಾಗಿರುವ ಉತ್ತಮ ಪುಸ್ತಕಗಳ ಬಗ್ಗೆ ವಿಮರ್ಶಾತ್ಮಕ ಲೇಖನಗಳನ್ನು ಪ್ರಕಟಿಸುವುದು.

(ಈ) ಪುಸ್ತಕ ಭಂಡಾರ ವ್ಯವಸ್ಥೆ ವಿಚಾರವಾಗಿ ಲೇಖನಗಳನ್ನು ಪ್ರಕಟಿಸುವುದು.

(ಉ) ಒಬ್ಬ ಲೇಖಕರ ಎಲ್ಲ ಪುಸ್ತಕಗಳನ್ನು ವಿಮರ್ಶಾತ್ಮಕ ಲೇಖನದ ಮೂಲಕ ಪರಿಚಯ ಮಾಡಿಕೊಡುವುದು. ಒಂದು ವಿಷಯದ ಮೇಲೆ ಬರೆದಿರುವ ಅನೇಕ ಪುಸ್ತಕಗಳನ್ನು ವಿಮರ್ಶಾತ್ಮಕ ಲೇಖನದ ಮೂಲಕ ಪರಿಚಯ ಮಾಡಿಕೊಡುವುದು.

(ಊ) ಗ್ರಾಮ ಜೀವನಕ್ಕೆ ಸಂಬಂಧಪಟ್ಟ ಕಥೆಗಳು, ಕವಿತೆಗಳು, ಪ್ರಬಂಧಗಳ ಮತ್ತು ವ್ಯಕ್ತಿ ಚಿತ್ರಗಳನ್ನು ಪ್ರಕಟಿಸುವುದು.

(ಋ) ಕಲಾಚಿತ್ರಗಳನ್ನು ಅಚ್ಚು ಮಾಡುವುದು.

(ೠ) ಕನ್ನಡದಲ್ಲಿ ಪ್ರಕಟವಾದ ಅತಿ ಮುಖ್ಯ ಲೇಖನದ ಸಾರಾಂಶವನ್ನು ಪ್ರಕಟಿಸುವುದು.

(ಎ) ಗ್ರಾಮಸ್ಥರಿಗೆ ರುಚಿಸುವ ವಿಷಯಗಳ ಮೇಲೆ ಸುಲಭ ಶೈಲಿಯಲ್ಲಿ ಲೇಖನಗಳನ್ನು ಪ್ರಕಟಿಸುವುದು.

ಪ್ರಧಾನ ಕಾರ್ಯದರ್ಶಿ

ಕರ್ನಾಟಕ ರಾಜ್ಯ ವಯಸ್ಕರ ಶಿಕ್ಷಣ ಸಮಿತಿ

ಕೃಷ್ಣಮೂರ್ತಿಪುರಂ :: ಮೈಸೂರು-೪

Reg. No. KRNN. 29 / WPP 6 | LICENSE No. 21 LICENSED TO POST WITHOUT PREPAYMEN

ನೀವು ಓದಲೇಬೇಕಾದ ಪುಸ್ತಕಗಳು....

ಜನಪ್ರಿಯ ವಾಲ್ಮೀಕಿ ರಾಮಾಯಣ

ಶರಣ ಚರಿತಾಮೃತ

ನನ್ನೂರು

ಗೋಕುಲ

ಭಗತ್‌ಸಿಂಗ್

ಸಿ. ವಿ. ರಾಮನ್

ವಚನ ಭಾಗವತ

ವಿದ್ಯಾಪೀಠಗಳು

ಶ್ರೀ ಶಂಕರಾಚಾರ್ಯ

ಆಂಡರ್‌ಸನ್ ಮತ್ತು ಇತರ ಕತೆಗಳು

ನಳಚರಿತ್ರೆಯ ಸಂಗ್ರಹ

ಗ್ರಂಟ್ವಿಗ್

ಇನ್ನೂ ಅನೇಕ ಉಪಯುಕ್ತ ಪುಸ್ತಕಗಳನ್ನು

ತರಿಸಿ ಓದಿರಿ

Edited by R. Boraiah, Printed by H. G. Ramaswamy Iyeng
Manager Karnataka State Adult Education Council Pr
and Published by Karnataka State Adult Education Coun
Mysore city (India)